ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ''1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ''1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, 1992

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಶಿಕ್ಷಣ ಕ್ಷೇತ್ರದಲ್ಲಿ ಅನೇಕ ನಡೆಯಬಾರದ ಕೆಲಸಗಳು ನಡೆಯುತ್ತವೆಂದು ಸರ್ಕಾರದ ಗಮನಕ್ಕೆ ಬಂದಿದ್ದು, ಜನರಿಗೆ ಇದರಿಂದ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಮಾನ್ಯತೆ ಪಡೆಯದೆ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ನಿಷೇಧವನ್ನು ಶಾಸನದ ಮೂಲಕ ಸಮರ್ಪಕವಾಗಿ ತರುವ ದೃಷ್ಟಿಯಿಂದ ಹಾಗೂ ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಸರ್ಕಾರ ಭಾವಿಸಿದೆ. 1991-92ರ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆಗೆ ಹಾಜರಾಗಲು ಯಾವ ವಿದ್ಯಾರ್ಥಿಗಳಿಗೆ ಅನುಮತಿ ನೀಡಿರಲಿಲ್ಲವೋ ಅಂಥ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವುದಕ್ಕಾಗಿ ಕೆಲವು ಪ್ರಕರಣಗಳಲ್ಲಿ ನಿರ್ದೇಶನ ನೀಡಲೂ ಸಹ ರಾಜ್ಯ ಸರ್ಕಾರ ಹಕ್ಕನ್ನು ಇಟ್ಟುಕೊಂಡಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧ್ಯಾದೇಶವನ್ನು ಈ ಹಿಂದೆ ತರಲಾಗಿತ್ತು. ಅದನ್ನು ಬದಲಾವಣೆ ಮಾಡಿ ಈ ಒಂದು ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೇವೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಇದೆ. ವಿದ್ಯಾಕ್ಷೇತ್ರ ಸುಗಮವಾಗಿ ನಡೆದುಕೊಂಡು ಹೋಗುವ ದೃಷ್ಟಿಯಿಂದ ಇದರ ಅಗತ್ಯ ಇದೆ. ಮತ್ತು ವಿದ್ಯಾರ್ಥಿಗಳ ದೃಷ್ಟಿಯಿಂದಲೂ ಇದನ್ನು ಮಾಡಲಾಗಿದೆ. ಆದುದರಿಂದ ಈ ವಿಧೇಯಕವನ್ನು ಸಭೆ ಒಪ್ಪಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

† ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷಿಣಿಯವರೇ, ಈ ಒಂದು ಮಸೂದೆಯನ್ನು ತರುವುದಕ್ಕಿಂತ ಮುಂಚೆ ಸರ್ಕಾರ ಈ ಇನ್‌ಟೇಕ್ ಹೆಚ್ಚು ಮಾಡುವ ವಿಚಾರದಲ್ಲಿಯಾಗಲೀ ಅಥವಾ ಯಾವ ಸಂಸ್ಥೆಗಳಿಗೆ ಅಫಿಲಿಯೇಷನ್ ಇಲ್ಲ, ಆ ಸಂಸ್ಥೆಗಳ ವಿಚಾರದಲ್ಲಿಯಾಗಲೀ ಸ್ಪಷ್ಟವಾದ ನಿಲುವು ಏನು ಎಂದು ನಮಗೆ ಗೊತ್ತಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಅಥವಾ ಶಿಕ್ಷಣ

ರಂಗದಲ್ಲಿ ಇವತ್ತು ಡಿಸ್‌ಪ್ಲೀನ್ ಇಲ್ಲ. ಇವತ್ತು ತಾವೇನು ಮಸೂದೆಯನ್ನು ತಂದಿದ್ದೀರಿ, ಅದು ಏನೆಂದರೆ ಎಷ್ಟು ಇನ್‌ಟೇಕ್ ಇದೆ ಅದರ ಮೇಲೆ ಅಡ್ಮಿಶನ್ ಕೊಟ್ಟರೆ ಅದು ಕಾಯಿದೆಗೆ ವಿರೋಧವಾಗುತ್ತದೆ, ಅದೇ ಪ್ರಕಾರ ಇನ್ಸ್ಟಿಟ್ಯೂಷನ್ ಅಫಿಲಿಯೇಟೆಡ್ ಇಲ್ಲವೆಂದರೆ ಅಂತಹ ಸಂಸ್ಥೆಗಳನ್ನು ಸ್ಥಾಪನೆ ಮಾಡಿದರೆ ಅವೂ ಸಹ ಇಲ್‌ಲೀಗಲ್ ಆಗುತ್ತವೆಂದು ಇದೆ. ಈ ಮಸೂದೆ ತರುವ ಸಮಸ್ಯೆ ಏತಕ್ಕೆ ಬಂತು? ಮುಖ್ಯವಾಗಿ ಯಾವ ಕಾರಣವೆಂದು ನಾನು ಉದಾಹರಣೆ ಕೊಡುತ್ತೇನೆ. ಮೆಡಿಕಲ್ ಕಾಲೇಜ್‌ಗೆ 100 ಸೀಟು ಇನ್‌ಟೇಕ್ ಇದ್ದರೆ, ನಾವು ಹೇಳುತ್ತೇವೆ ಇನ್ನೊಂದು 50 ಹೆಚ್ಚು ಅಡ್ಮಿಶನ್ ಮಾಡಿ ಎಂದು. ಇಂಜನಿಯರಿಂಗ್ ಕಾಲೇಜ್‌ಗೂ ಇದೇ ಹೇಳುತ್ತೇವೆ. ಇದು ಆದನಂತರ ರೆಗ್ಯುಲೇಷನ್ ಮಾಡುತ್ತೇವೆ. ಹಾಗಾಗಿ ಇವತ್ತು ಈ ಕ್ಷೇತ್ರದಲ್ಲಿ ಏನೊಂದು ಡಿಸಿಪ್ಲೀನ್ ಇರಬೇಕು ಅದು ಉಳಿದಿಲ್ಲ. ಎಲ್ಲಿಯತನಕ ಸರ್ಕಾರಕ್ಕೆ ಇದರ ಬಗ್ಗೆ ಒಂದು ಪೊಲಿಟಿಕಲ್ ವಿಲ್ ಇಲ್ಲ, ಅಲ್ಲಿಯ ತನಕ ಇಂತಹ ಮಸೂದೆ ತಂದರೇನು ತರದಿದ್ದರೇನು? ಇದಕ್ಕೆ ಹೆಚ್ಚಿನ ಮಹತ್ವವಿಲ್ಲ. ಇವತ್ತು ಕ್ಯಾಪಿಟೇಶನ್ ಫೀ ಅಬಾಲಿಷನ್ ಬಿಲ್ಲ್ ಈ ಮನೆಯಲ್ಲಿ ಪಾಸಾಗಿದೆ. ಮುಖ್ಯಮಂತ್ರಿಗಳು ಶಿಕ್ಷಣ ಸಚಿವರಾಗಿದ್ದಾಗ ಹೇಳಿದರು, ಹೌದು ಕ್ಯಾಪಿಟೇಶನ್ ಪಿಡುಗು ಇದೆ ಅದನ್ನು ಸರಿಪಡಿಸುತ್ತೇವೆ ಅದರ ಬಗ್ಗೆ ರೂಲ್ಸ್ ಮಾಡುತ್ತೇವೆಂದು. ಒಂದು ಕಡೆ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಫೀ ಹೆಚ್ಚು ಮಾಡಿದ್ದೀರಿ, ಅದಕ್ಕೆ ಏನು ಕಾರಣ ಕೊಟ್ಟರು? ಕ್ಯಾಪಿಟೇಶನ್ ಫೀ ಅಬಾಲಿಷ್ ಆಗಿದೆ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ನಡೆಸುವುದು ಬಹಳ ಕಷ್ಟವಾಗಿಯೆಂದರು. ಹಾಗಾಗಿ ಫೀ ಹೆಚ್ಚು ಹೆಚ್ಚು ಮಾಡಿ ಅಂದರು. ಇಲ್ಲಿ ಫೀ ಹೆಚ್ಚಾಗಿದೆ, ಆ ಕಡೆ ಕ್ಯಾಪಿಟೇಶನ್ ಶುಲ್ಕ ನಡೆಯುತ್ತಲೇ ಇದೆ. ಒಂದೊಂದು ಮೆಡಿಕಲ್ ಸೀಟಿಗೆ ಹೊರಗಡೆಯವರಿಗೆ 10–15 ಲಕ್ಷ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಇಂಜನಿಯರ್ ಸೀಟಿಗೆ 2–3 ಲಕ್ಷ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಸೀಟುಗಳು ಕೇರಳರಾಜ್ಯಕ್ಕೆ ತಮಿಳುನಾಡು ರಾಜ್ಯಗಳಿಗೆ ಹರಾಜು ಆಗುತ್ತಿವೆ. ಶಾಸನಸಭೆಯಲ್ಲಿ ಸಾಕಷ್ಟು ಸಾರಿ ಇದರ ಬಗ್ಗೆ ಪ್ರಸ್ತಾಪ ಬಂದಾಗ ಸರ್ಕಾರದಿಂದ ಉತ್ತರ ಏನು ಬಂದಿದೆ? ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ನಿಮ್ಮ ಗಮನಕ್ಕೆ ಇದನ್ನು ಹೇಗೆ ತರುವುದು? ಕ್ಯಾಪಿಟೇಶನ್ ತೆಗೆದುಕೊಂಡರೆ ರಸೀತಿ ಕೊಡುವುದಿಲ್ಲ. ಕಾಯಿದೆ ಬದ್ಧವಾಗಿ ರಸೀತಿ ಕೊಟ್ಟರೆ ನಿಮಗೆ ಗಮನಕ್ಕೆ ತರಬಹುದು. ಇದರ ಬಗ್ಗೆ ಸರ್ಕಾರದ ನಿಲುವೇನು? ಯಾವುದೇ ಒಂದು ಮಸೂದೆಯನ್ನು ಪಾಸು ಮಾಡಿಕೊಂಡು ಹೋದರೆ, ಆ ಮಸೂದೆಯನ್ನು ಇವತ್ತು ಇಂಪ್ಲಿಮೆಂಟ್ ಮಾಡುವುದಕ್ಕೆ ಬರುತ್ತಿಲ್ಲ. ಹಾಗಾಗಿ ನಾನು ಹೇಳಬೇಕಾಗುತ್ತದೆ ಇದರಲ್ಲಿ ಸರ್ಕಾರ ಸಹ ಶಾಮೀಲಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ತಾವು ಇದರ ಬಗ್ಗೆ ರೂಲ್ಸ್ ಮಾಡುತ್ತೇವೆ, ಕ್ಯಾಪಿಟೇಶನ್ ಶುಲ್ಕ ರದ್ದು ಮಾಡುವುದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳತ್ತೇವೆಂದು ಹೇಳಿದ್ದೀರಿ. ಶಿಕ್ಷಣ ಸಚಿವರಾಗಿದ್ದಾಗ ಹೇಳಿದ್ದೀರಿ. ತಮ್ಮ 100 ಡೇಸ್ ಪ್ರೋಗ್ರಾಮ್‌ನಲ್ಲಿ ಈವೊಂದು ಪ್ರೋಗ್ರಾಮ್ ಅನ್ನು ಸೇರಿಸುತ್ತೀರಾ? ಇಂತಹ ಮಸೂದೆಗಳಿಂದ ಏನೂ ಉಪಯೋಗವಾಗುವುದಿಲ್ಲ. ನಿಜವಾಗಿಯೂ ನಿಮಗೆ ಇದನ್ನು ಇಂಪ್ಲಿಮೆಂಟ್ ಮಾಡುವ ಇಚ್ಛೆಯಿಲ್ಲ. ಈಗ ನಿಮಗೆ ಕಷ್ಟವಾಗಬಹುದು. ಒಂದು ಕಡೆ ಇನ್‌ಟೇಕ್ ಹೆಚ್ಚಾಗಬಾರದೆಂದು ಮಸೂದೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಆಧ್ಯಕ್ಷರೆ, ನಾನು ನೇರವಾಗಿ ಹೇಳುತ್ತೇನೆ. ಇದು ಈ 100 ಡೇಸ್ ಪ್ರೋಗ್ರಾಂನಲ್ಲಿಯೇ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಸ್ವಾಗತಿಸುತ್ತೇನೆ. ಒಳ್ಳೆಯದು ಈಗ ಒಂದು ಉದಾಹರಣೆ ಕೊಡುತ್ತೇನೆ. ಅಡ್ಮಿಷನ್ಸ್, ಅಫಿಲಿಯೇಷನ್ಸ್‌ಗಳಿಗೆ ಏನೂ ಮಾಡಬಾರದು. ಎಲ್ಲಿ ರೆಕಗ್ನೈಸ್ ಆಗಿಲ್ಲ, ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಎಲ್ಲಿ ಇನ್‌ಟೇಕ್ ಇಲ್ಲ ಅಲ್ಲಿ ಅಡ್ಮಿಷನ್ಸ್ ಹೆಚ್ಚು ಮಾಡಿದರೆ, ಆ ಹುಡುಗರಿಗೆ ಪರೀಕ್ಷೆಗೆ ಕೂರಿಸುವುದಿಲ್ಲವೆಂದು

ಹೇಳುತ್ತೀರಿ. ತಾವು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ. ಇವುಗಳನ್ನು ಮೆರಿಟ್ಸ್ ಮೇಲೆ ಮಾಡಿದ್ದೀರಾ? ಅಪ್ಲಿಕೇಶನ್‌ಗಳು ಇಲ್ಲದೆ ಸಹ ಮಾಡಿದ್ದೀರಿ. ಈ ಪ್ರಕಾರದಲ್ಲಿ ಮಾಡುತ್ತಾ ಹೋದರೆ ನೀವು ಯಾವ ಮಟ್ಟಕ್ಕೆ ಮುಟ್ಟುತ್ತೀರಿ? ತಾವು ನಮ್ಮ ಇಂಜಿನಿಯರಿಂಗ್ ಕಾಲೇಜ್ ವಿಚಾರ ಮಾಡುವಾಗ ಯುನಿವರ್ಸಿಟಿ ಅಫಿಲಿಯೇಶನ್ ಇತ್ತ? ಅವರು ರೆಕಮೆಂಡ್ ಮಾಡಿದ್ದರೇ ಏನು ಮೆರಿಟ್ ಮೇಲೆ ಕೊಟ್ಟಿದ್ದೀರಿ? ಏನೇನೂ ಇಲ್ಲ. ನಿಮ್ಮ ಮನಸ್ಸಿಗೆ ಬಂತು, ದೇಶಪಾಂಡೆ ಕೇಳುತ್ತಾರೆ, ಕೊಡಬೇಕು ಅಂತ ಕೊಟ್ಟಿರಿ. ಹಾಗಾದರೆ ನೀವು ಇದರೊಳಗೆ ಏತಕ್ಕೆ ಡಿಸಿಪ್ಲೀನ್ ತರುವುದಿಲ್ಲ, ಏತಕ್ಕಾಗಿ ಯೂನಿವರ್ಸಿಟಿಯನ್ನು ಎಸ್ಟಾಬ್ಲಿಶ್ ಮಾಡಿದಿರಿ? ಇದನ್ನು ತಿಳಿದುಕೊಂಡು ಎಲ್ಲಿಯವರೆಗೆ ಅವರಿಗೆ ಗೌರವ ಕೊಡುವುದಿಲ್ಲವೋ, ಯಾವ ಪ್ರಕಾರ ಸ್ಟ್ರಿಕ್ಟ್ ಆಗಿ ಅವರಿಂದ ರೆಕಮಂಡೇಷನ್ ತಂದು ಅದರ ಬಗ್ಗೆ ನಿರ್ಣಯ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಮಸೂದೆಯಿಂದ ಏನೂ ಉಪಯೋಗ ಆಗುವುದಿಲ್ಲ. ಇವತ್ತು ನರ್ಸಿಂಗ್ ಸ್ಕೂಲುಗಳು ಕೊಟ್ಟಿದ್ದೀರಿ, ಫಾರ್ಮಸಿ ಕಾಲೇಜುಗಳು ಕೊಟ್ಟಿದ್ದೀರಿ, ನರ್ಸಿಂಗ್ ಕಾಲೇಜುಗಳನ್ನು ಕೊಟ್ಟಿದ್ದೀರಿ, ಸದನದ ಮುಂದೆ ವರದಿ ಇದೆ. ನಿಮ್ಮ ಕಡೆ ಅಪ್ಲಿಕೇಶನ್ಸ್ ಇದ್ದಿಲ್ಲ. ಅಲ್ಲೇ ಮಂತ್ರಿಗಳು ಅಪ್ಲಿಕೇಶನ್ಸ್ ತೆಗೆದುಕೊಂಡು, ಅಲ್ಲೇ ಪ್ರೋಸೆಸ್ ಮಾಡಿ ಅಲ್ಲೇ ಆರ್ಡರ್ ಮಾಡಿದ್ದಾರೆ ಯೂನಿವರ್ಸಿಟಿ ರೆಕಮೆಂಡೇಷನ್ನು ಇಲ್ಲ. ಹಾಗೆ ಮಾಡಬೇಕಾದರೆ ಕನ್ಸಿಡರೇಶನ್ ಇರಬೇಕಲ್ಲ. ನಿಮ್ಮ ಕನ್ಸಿಡರೇಷನ್ ಏನು? ಯಾರು ನಿಮ್ಮನ್ನು ನೇರವಾಗಿ ಭೇಟಿಯಾಗುತ್ತಾರೆ, ಆಧಾರದ ಮೇಲೆ ಕೊಡುತ್ತೀರಿ ಎಂದರೆ ಹೇಗೆ? ಪುನಃ ಚಾರ್ಜ್ ಮಾಡುತ್ತಿದ್ದೇನೆ. ಕನ್ಸಿಡರೇಶನ್ ಇಲ್ಲದೆ ಮಾಡಿದ್ದುದು ಇದು. ಕಾಲೇಜು ಇರಬಹುದು, ನರ್ಸಿಂಗ್ ಸ್ಕೂಲ್ ಇರಬಹುದು ಅಥವಾ ಡೆಂಟಲ್ ಕಾಲೇಜ್ ಇರಬಹುದು. ಇದೆಲ್ಲ ನೀವು ಮಾಡಿದ್ದುದು ವಿತ್‌ಔಟ್ ಕನ್ಸಿಡರೇಶನ್. ಹೀಗಾಗಿ ಶಿಕ್ಷಣ ರಂಗದಲ್ಲಿ ಏನು ಪ್ರಗತಿಯಾಗಬೇಕು? ನಿಜವಾಗಿಯೂ ಒಳ್ಳೆಯ ಡಾಕ್ಟರ್‌ಗಳು ತಯಾರಾಗಬೇಕು, ಇಂಜಿನಿಯರ್‌ಗಳು ತಯಾರಾಗಬೇಕೆಂಬ ಉದ್ದೇಶ ಇದ್ದರೆ, ಈ ಪ್ರಕಾರ ಕಾಲೇಜುಗಳನ್ನು ನೀವು ಮಂಜೂರು ಮಾಡುತ್ತಿರಲಿಲ್ಲ. ಇಂಜಿನಿಯರಿಂಗ್ ಗ್ರಾಜ್ಯುಯೇಟ್ಸ್, ಬಿ.ಇ. ಎಲೆಕ್ಟ್ರಿಕಲ್ಸ್ ಅಥವಾ ಬಿ.ಇ. ಸಿವಿಲ್ ಇಂಜನಿಯರ್ಸ್ ಫಸ್ಟ್‌ಕ್ಲಾಸ್ ಡಿಸ್ಟಿಂಗಶನ್‌ನಲ್ಲಿ ಪಾಸ್ ಆಗಿದ್ದಾರೆ. ಅವರಿಗೆ ಉದ್ಯೋಗ ಅವಕಾಶ ಇಲ್ಲ. ಇಷ್ಟಾದರೂ ಸಹ ತಾವು ಕಾಲೇಜು ಕೊಡುತ್ತೀರಿ ಎಂದರೆ, ಕೆಲವು ಜನರಿಗೆ ಸಹಾಯ ಮಾಡುವುದಕ್ಕೆ ಕನ್ಸಿಡರೇಶನ್ ಇಲ್ಲದೇ ಕೊಡುತ್ತಿರೋ ಎಂದು ನಾವು ಕೇಳಬೇಕಾಗುತ್ತದೆ. ನಮ್ಮ ಸದನದ ಮುಂದೆ ಆ ರಿಪೋರ್ಟ್ ಬಂದಿದೆ. ಮೆಡಿಕಲ್ ಸ್ಟೂಡೆಂಟ್ಸ್ ಅಡ್ಮಿಶನ್ ವಿಚಾರದಲ್ಲಿ ಸೆಂಟ್ರಲ್ ಪೂಲ್‌ನಲ್ಲಿ ಎಂಟರೆನ್ಸ್ ಎಕ್ಸಾಮಿನೇಶನ್ ಮೇಲೆ ಕೊಡುತ್ತಾರೆ. ಅವರಿಗೆ 18 ಸೀಟುಗಳು ಇವೆ. ಅಲ್ಲಿ ತಾವು ಏನು ಮಾಡಿದ್ದೀರಿ? ಯಾರು ಪಾಸ್ ಆಗಿದ್ದಾರೆ ಅವರನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಮಲೇಶಿಯಾದಿಂದ ಬಂದ ಹುಡುಗರಿಗೆ ನೀವು ಅಡ್ಮಿಶನ್ ಕೊಟ್ಟಿದ್ದೀರಿ. ಬೇರೆ ಬೇರೆ ದೇಶದ ಹುಡುಗರಿಗೆ ಅಡ್ಮಿಶನ್ ಕೊಟ್ಟಿರಿ. ನಂತರ ಕೇಂದ್ರ ಸರ್ಕಾರದಿಂದ ಆದೇಶ ಬಂತು, ನೀವು ಮಾಡಿದ್ದು ತಪ್ಪು ಎಂದು. ಅಡ್ಮಿಶನ್ ಯಾವ ಆಧಾರದ ಮೇಲೆ ಕೊಟ್ಟಿರಿ? ಎಂದು ಕೇಳಿದ್ದಕ್ಕೆ ಕೇಂದ್ರ ಸರ್ಕಾರದ ಕೇಸಸ್‌ಗಳು ರೆಕಮಂಡ್ ಮಾಡಿದ್ದಾರೆ ಎಂದು ತಾವು ಹೇಳಿದಿರಿ. ಆದರೆ, ಅವರು ರೆಕ್‌ಮಂಡ್ ಮಾಡಿಲ್ಲ. ಎಲ್ಲಾ ಫೋರ್ಜ್ಡ್ ಲೆಟರ್ಸ್, ಅವರನ್ನು ಪ್ರಾಸಿಕ್ಯೂಟ್ ಮಾಡಿ ಎಂದು ಕೇಂದ್ರಸರ್ಕಾರದಿಂದ ಪತ್ರ ಬಂತು. ನೀವು ಏನು ಮಾಡಿದಿರಿ? ಪ್ರಾಸಿಕ್ಯೂಟ್ ಮಾಡಲಿಲ್ಲ ಮತ್ತು ಯಾವ ಕಾಲೇಜ್‌ನಲ್ಲಿ ಅಡ್ಮಿಶನ್ ಕೊಟ್ಟಿದ್ದೀರಿ, ಅಲ್ಲಿ ವಿತ್‌ಡ್ರಾ ಮಾಡಿ ಬೇರೆಬೇರೆ ಪ್ರೈವೇಟ್ ಮೆಡಿಕಲ್ ಕಾಲೇಜಿನಲ್ಲಿ ಅಡ್ಮಿಶನ್ ಕೊಟ್ಟಿರಿ. ಈ ಪ್ರಕಾರ ನಿಮ್ಮ ಪರಿಸ್ಥಿತಿ ಇರುವಾಗ ಇಂತಹ ಬಿಲ್‌ಗಳನ್ನು ತಂದರೆ ಏನು ಪ್ರಯೋಜನ? ಹಾಗಾಗಿ ನಾನು ತಮ್ಮನ್ನು ಕೇಳುತ್ತಿದ್ದೇನೆ, ಈ ಎಲ್ಲಾ ವಿಚಾರಗಳು, ಕ್ಯಾಪಿಟೇಶನ್ ಫೀ ವಿಚಾರ ಇರಬಹುದು, ಇಲ್ಲೀಗಲ್ ಆಗಿ ಅಡ್ಮಿಶನ್ ಕೊಡುವ ವಿಚಾರ ಇರಬಹುದು, ಇನ್‌ಟೇಕ್ ವಿಚಾರ ಇದೆಲ್ಲಾ ಇರಬಹುದು, ನಿಮಗೆ ವಿಲ್ ಇದೆಯೇನು? ನಿಮಗೆ ಇದರೊಳಗೆ ಇದೆಯೇ? ಅಂದರೆ

ಮಾತ್ರ ತಾವು ಈ ಮಸೂದೆ ಬಗ್ಗೆ ಚರ್ಚೆ ಮಾಡಿ. ಇಲ್ಲ, ಇದು ಹೀಗೆ ಮಾಡುವುದು ಪುನಃ ಇದೇ ಪ್ರಕಾರ ನಾವು ನಡೆಯುವುದು ಎಂದರೆ ಈ ಬಿಲ್ ತರುವುದರಲ್ಲಿ ಏನೂ ಅರ್ಥ ಇಲ್ಲ. ಈ ಕ್ಯಾಪಿಟೇಶನ್ ಫೀ ರದ್ದು ಮಾಡುವ ಬಿಲ್ ಇದೆಯಲ್ಲ, ಅದೇ ಫೇಟ್ ಈ ಬಿಲ್‌ಗೂ ಆಗುತ್ತದೆ. ಒಂದು ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. political support ಇಲ್ಲದೆ, ಯಾರು ಯಾವುದೇ ಮೆಡಿಕಲ್ ಕಾಲೇಜಿನಲ್ಲಿ, ಇಂಜನಿಯರಿಂಗ್ ಕಾಲೇಜ್‌ನಲ್ಲಿ Intake ಹೆಚ್ಚು ಮಾಡುವುದಿಲ್ಲ. ಈ ವಿಚಾರದಲ್ಲಿ ಯಾರದ್ದಾದರೂ ಬೆಂಬಲ ಇರಬೇಕಾಗುತ್ತದೆ. ಯಾರಾದರೂ ಮಂತ್ರಿಗಳ ಬೆಂಬಲ ಇರಬೇಕಾಗುತ್ತದೆ, ವಿರೋಧ ಪಕ್ಷದ ನಾಯಕರ ಬೆಂಬಲ ಇರಬೇಕಾಗುತ್ತದೆ ಅಥವಾ ಮುಖ್ಯಮಂತ್ರಿಗಳ ಬೆಂಬಲ ಇರಬೇಕಾಗುತ್ತದೆ. Without the support of politicians or higher-ups ಯಾರೂ ಇನ್‌ಟೇಕ್ ಹೆಚ್ಚು ಮಾಡುವುದಿಲ್ಲ, ಅದು ಸಾಧ್ಯವೂ ಇಲ್ಲ. ಯೂನಿವರ್ಸಿಟಿ ಅಫಿಲಿಯೇಶನ್ ವಿನಹ ಯಾವ ಕಾಲೇಜನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ Everybody had taken us for a ride. All politicians have been taken for a ride. We have been taken for granted. ನಾನೂ ಏನೂ ಮಾಡದಿದ್ದರೂ ಹಣ ಕೊಡಬೇಕು. ಹಣ ಕೊಟ್ಟರೆ ಮೆಡಿಕಲ್ ಸೀಟು, ಇನ್‌ಟೇಕ್, ಹೆಚ್ಚು ಮಾಡಿದ್ದನ್ನು ರೆಗ್ಯುಲರೈಸ್ ಮಾಡುತ್ತಾರೆ, ಇಂಜನಿಯರಿಂಗ್ ಸೀಟು ಸಹ ಹೆಚ್ಚು ಹಣ ಕೊಟ್ಟರೆ ರೆಗ್ಯುಲರೈಸ್ ಮಾಡುತ್ತಾರೆ. ಈ ಪ್ರಕಾರವಾಗಿ ವಾತಾವರಣ ಬಂದಿದೆ. ಇನ್ನು ಮುಂದೆ, ಇದು ನಡೆಯುವುದಿಲ್ಲ. ಯಾರು ವಿತ್ ಔಟ್ ಅಫಿಲಿಯೇಷನ್ಸ್, ಕಾಲೇಜು, ಸ್ಕೂಲು ಶುರು ಮಾಡಿದರೆ, ಅವರಿಗೆ ಪ್ರಾಸಿಕ್ಯೂಟ್ ಮಾಡುತ್ತೇವೆ; ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನೀವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಯಾರ ಒತ್ತಡ ಬಂದರೂ ನಾವು ಮಣಿಯುವುದಿಲ್ಲ ಎಂದು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ, ಇಂಟೇಕ್ ಹೆಚ್ಚಾಗುತ್ತವೆ, ಅಫಿಲಿಯೇಷನ್ ಇಲ್ಲದ, ಕಾಲೇಜು, ಸ್ಕೂಲುಗಳೂ ಶುರುವಾಗುತ್ತವೆ. ಇವತ್ತು, ತಾವು ಇದೇ ಬಿಲ್ಲಿನಲ್ಲಿ ಸೆಕ್ಷನ್ (5) ಇಲ್ಲಿ ತಾವು ಏನು ಮಾಡಿದ್ದೀರಿ. ಪುನಃ ಎಲ್ಲಿ ಇಂಟೇಕ್ ಹೆಚ್ಚಾಗಿತ್ತೋ ಎಲ್ಲಿ ಅಫಿಲಿಯೇಷನ್ ಇದ್ದಿಲ್ಲ, ಅಲ್ಲೇ ವಿದ್ಯಾರ್ಥಿಗಳು ಅಡ್ಮಿಟ್ ಆಗಿದ್ದಾರೆ, ಪರೀಕ್ಷೆಗೆ ಕೂರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ನಿಮ್ಮ ಉದ್ದೇಶ ನಿಜವಾಗಿ ಇಂತಹ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬಾರದು, ಯಾರು ಎಕ್ಸಸ್ ಇಂಟೇಕ್ ಮಾಡಿದ್ದಾರೆ, ಅವರಿಗೆ ಪ್ರಾಸಿಕ್ಯೂಟ್ ಮಾಡಬೇಕಾಗಿದ್ದರೆ, ಸೆಕ್ಷನ್ 5ನ್ನು ಏಕೆ ಸೇರಿಸಿದ್ದೀರಿ. ಇದರ ಅವಶ್ಯಕತೆ ಏನಿತ್ತು. ವಿದ್ಯಾರ್ಥಿಗಳಿಗೆ ಗೊತ್ತಾಗಬೇಕಾಗುತ್ತದೆ. ಯಾವ ಕಾಲೇಜಿಗೆ ಇಂಟೇಕ್ ಇದೆ, ಯಾವ ಕಾಲೇಜಿಗೆ ಅಫಿಲಿಯೇಷನ್ ಇಲ್ಲ ಎಂದು, ಅದು ಯಾವುದನ್ನೂ ವಿಚಾರಣೆ ಮಾಡದೇ, ತಾವು ಪ್ರಾಹಿಬಿಷನ್ ಮಾಡುವುದನ್ನು ಹೇಳುತ್ತೀರಿ. ಈ ಮಸೂದೆ ಏನು ಹೇಳುತ್ತದೆ Karnataka Prohibition of Admission of Students to the Unrecognised and Unaffiliated Educational Institutions. ಇದೇ ವಿಧೇಯಕದಲ್ಲಿ ಸೆಕ್ಷನ್ 5. ಈಗಾಗಲೇ ಇಲ್ಲೀಗಲ್ ಏನಾಗಿದೆ, ಅವನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು. ಏಕೆ, ಇದರ ಅವಶ್ಯಕತೆ ಏನಿದೆ. ನೀವು ಈ ಪ್ರಕಾರ regularise ಮಾಡಿದರೆ, penalise them. ಇಲ್ಲ ಅಂದರೆ, ನೀವು ಇಂತಹ ಯಾವುದು ಮಸೂದೆ ಮಾಡದಿದ್ದರೂ ಸಹ, ಇಂಟೇಕ್ ಇರಲಿ ಬಿಡಲಿ, ಅಡ್ಮಿಶನ್ ನಡೆಯುವುದು, ಅಫಿಲಿಯೇಷನ್ ಇರಲಿ ಬಿಡಲಿ, ಅಡ್ಮಿಶನ್ ನಡೆಯುವುದು. ಹಾಗಾಗಿ ಯಾವ ಪ್ರಕಾರ ನಿಮ್ಮಲ್ಲಿ, ಸರಿಯಾದ ನಿಲುವು ಬರುವುದಿಲ್ಲವೋ, ಯಾವ ಪ್ರಕಾರ ತಮಗೆ ಒಂದು ವಿಲ್ ಇಲ್ಲವೋ, ಅಲ್ಲಿಯವರೆಗೆ ಇಂತಹ ಯಾವ ಮಸೂದೆ ತಂದರೂ, ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಾಗುವುದಿಲ್ಲ. ಒಂದು ಸಂತೋಷದ ವಿಚಾರ, ಈಗ ಮುಖ್ಯಮಂತ್ರಿಗಳು ಹೇಳಿದರು. ನೂರು ದಿವಸದ ಕಾರ್ಯಕ್ರಮದಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಅಬಾಲಿಷ್ ಮಾಡುತ್ತೇವೆ ಎಂದು. ನನಗೆ ಸಂತೋಷ, ಇದು ಆಗಬೇಕು. ಇವತ್ತು ಏನಾಗಿದೆ ಗೊತ್ತೇನು. ಮೆರಿಟ್ ಇದೆ, 90 ಪರ್ಸೆಂಟ್ ಇದೆ, ಆದರೆ ಅಡ್ಮಿಶನ್ ಇಲ್ಲ. 10 ಲಕ್ಷ ತೆಗೆದುಕೊಂಡು ಬಾ

ಎಂದು ಹೇಳುತ್ತಾರೆ. ಎಲ್ಲಿಂದ 10 ಲಕ್ಷ ತರುವುದು. ಕೇರಳದವರು ತೆಗೆದುಕೊಂಡು ಬರುತ್ತಾರೆ, ತಮಿಳಿನವರು ತೆಗೆದುಕೊಂಡು ಬರುತ್ತಾರೆ ಒಂದು ತನಿಖೆ ಮಾಡಿ. ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ನಾಟಕದ ಎಷ್ಟು ಹುಡುಗರು ಕಲಿಯುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ನೀವು ಕಾಲೇಜುಗಳನ್ನು ಏಕೆ ಕೊಟ್ಟಿದ್ದೀರಿ? ನಮ್ಮ ಕಾಲದಲ್ಲೂ ಮೆಡಿಕಲ್ ಕಾಲೇಜುಗಳನ್ನು ಮಂಜೂರ್ಮಾಡಿದ್ದೇವೆ, ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಕಾಲದಲ್ಲೂ ಮಾಡಿದ್ದೀರಿ. ಇದನ್ನು ಏಕೆ ಮಾಡಿದ್ದೀರಿ. ನಮ್ಮ ರಾಜ್ಯದ ಹುಡುಗರಿಗೆ ಒಳ್ಳೆಯದಾಗಬೇಕೆಂದು. ಅದು ಬಿಟ್ಟು, ಯಾರಿಗೋ ಹಣ ಮಾಡುವುದಕ್ಕೆ ಮಾಡಿದ್ದೀರಾ. ಇಂಡಿವಿಜುಯಲ್ಸ್‌ಗೆ ಹಣ ಮಾಡುವುದಕ್ಕೆ ಕೊಟ್ಟಿದ್ದೇವೆಂದು ಹೇಳಿದರೆ, ನಾನೇನೂ ಮಾತನಾಡುವುದಿಲ್ಲ. ನಿಮ್ಮ ಮೂಲ ಉದ್ದೇಶ ಏನು? ನಮ್ಮ ನಾಡಿನ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ, ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವುದು. ತಾವು ಒಂದು ರಿಪೋರ್ಟ್ ತರಿಸಿ, ಅಥವಾ ಸದನದ ಸಮಿತಿ ಮಾಡಿ. ಎಲ್ಲಾ ಮೆಡಿಕಲ್ ಕಾಲೇಜುಗಳಿಗೂ ವಿಸಿಟ್ ಮಾಡಿ ಬರೋಣ. ಇಂಜನಿಯರಿಂಗ್ ಕಾಲೇಜುಗಳಿಗೆ ವಿಸಿಟ್ ಮಾಡಿ ಬರೋಣ. ಅಲ್ಲಿ ನೋಡೋಣ, ಕರ್ನಾಟಕದಿಂದ ಎಷ್ಟು ಹುಡುಗರು ಕಲಿಯುತ್ತಿದ್ದಾರೆ, ಎಷ್ಟು ಹೊರಗಡೆಯವರಿಗೆ ಕೊಟ್ಟಿದ್ದಾರೆ ಎಂದು. ಇವತ್ತು ಏನು ಕಷ್ಟ ಬಂದಿದೆ ಎಂದರೆ, ಕ್ಯಾಪಿಟೇಷನ್ ಫೀ ಏನು ಬರುತ್ತದೆ, ಅದಕ್ಕೆ ಪ್ರಾವಿಷನ್ ಮಾಡಿದಿರಿ. ಅದು ಘಂಟಾಘೋಷವಾಗಿ ನಡೆಯುತ್ತಾ ಇದೆ. ಇದನ್ನು ಯಾರು ತಡೆಯುತ್ತಿದ್ದಾರೆ. ಅದಕ್ಕೆ ಲೆಕ್ಕ ಇಲ್ಲ. ಅದು ನೇರವಾಗಿ ಕಿಸೆಗೆ ಹೋಗುತ್ತದೆ. ತೆಗೆದುಕೊಳ್ಳುವುದು, ಕಿಸೆಗೆ ಹಾಕಿಕೊಳ್ಳುವುದು. ಬೆಂಗಳೂರು ಬೇರೆ ಎನ್ನುವ ಪ್ರಶ್ನೆ ಬರುವುದಿಲ್ಲ. 10 ಲಕ್ಷ ಕೊಟ್ಟರೆ, ಅದನ್ನು ಕಿಸೆಗೆ ಹಾಕಿಕೊಳ್ಳುತ್ತಾರೆ. ಇದಕ್ಕೆ ಅಕೌಂಟ್ ಇದೆಯೇ, ಯಾರು ಹಾಕುತ್ತಾರೆ, ಅದಕ್ಕೆ ಯಾರು ಅಧ್ಯಕ್ಷರು ಇದ್ದಾರೆ, ಯಾರು ಸಂಗ್ರಹ ಮಾಡಿಕೊಳ್ಳುತ್ತಾರೋ ಅವರು ಹಾಕಿಕೊಳ್ಳುತ್ತಾರೆ.

ಶ್ರೀ ಸಿ. ಬೈರೇಗೌಡ:- ಎಲ್ಲಾ ಕಿಸೆಗೆ ಹೋಗುತ್ತಿದೆ, ಕಿಸೆಗೆ ಹಾಕಬೇಕೆಂದೇ ನಡೆಸುತ್ತಿರುವುದು, ಅದರಲ್ಲಿ ಅನುಮಾನವಿಲ್ಲ, ಏತಕ್ಕೋ ದೇಶಪಾಂಡೆಯವರಿಗೆ ಅನುಮಾನ ಇದ್ದಂತೆ ಇದೆ, ಇದು ಬರೀ ಅಷ್ಟಕ್ಕೇ ನಿಂತಿಲ್ಲ, ಇಂತಹ ಕಡೆ ಇಂತಹವರಿಗೆ ಸೇರಿಸಿಕೊಳ್ಳಿ ಎಂದು ಪಟ್ಟಿಗಳನ್ನು ಕಳುಹಿಸುತ್ತಾರಲ್ಲ ನಾಯಕರು ಅವರು ಯಾರೂ ಕಡಿಮೆ ಏನಿಲ್ಲ, ಯಾರೂ ಕಡಿಮೆ ಇಲ್ಲ, ಈ ನಾಯಕರುಗಳ ಕಿಸೆಗೆ 5 ಲಕ್ಷ ಹೋಗುತ್ತಿದೆ, ಅದೂ ದೊಡ್ಡದೊಡ್ಡ ಮಹಾನ್ ನಾಯಕರುಗಳ ಕಿಸೆಗೆ ಹೋಗುತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಏಜೆಂಟ್ಸ್ ಇದ್ದಾರೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ನಾವು ಮೆಡಿಕಲ್ ಸೀಟ್ಸ್ ಕೊಡಿಸುತ್ತೇವೆ, ಏನು ಕೊಡುತ್ತೀರಿ ಎಂದು ಕೇಳುತ್ತಾರೆ, ನಾನು ಒಪ್ಪಿಕೊಳ್ಳುತ್ತೇನೆ, ಆ ಸಂಸ್ಥೆ ಈ ಸಂಸ್ಥೆ ಅಲ್ಲ, ಜನರಲ್ ಆಗಿ ನಾನು ಮಾತನಾಡುತ್ತಿದ್ದೇನೆ. ಹಾಗಾಗಿ ಇದರ ಬಗ್ಗೆ ಸರಕಾರದ ನಿಲುವು ಏನು? ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಷ್ಟು ಕಷ್ಟವಾಗಿದೆ ಇವತ್ತು, ಒಬ್ಬ ಬಡವ ಹಿಂದುಳಿದ ಜನಾಂಗ ಇರಬಹುದು, ಅಲ್ಪಸಂಖ್ಯಾತರು ಇರಬಹುದು, ಅಥವಾ ಮೇಲ್ವರ್ಗದವರು ಇರಬಹುದು, ಅವರು 70-80 ಪರ್ಸೆಂಟ್ ತೆಗೆದುಕೊಂಡರೂ ಸೀಟ್ ಇಲ್ಲ. ಎಲ್ಲಾ ಸೀಟ್ ಮಾರಾಟವಾಗಿದೆ, ಕೇರಳ ತಮಿಳುನಾಡು ಆಂಧ್ರಪ್ರದೇಶದವರಿಗೆ ಆಗಿದೆ, ಈ ಕಾಲೇಜುಗಳನ್ನು ಮಾಡಿದ್ದು ಕೇರಳ, ಆಂಧ್ರಪ್ರದೇಶದವರಿಗೆ ಕೊಡುವುಕ್ಕೇನು? ಹೀಗಾಗಿ ತಾವು ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲದೇ ಹೋದರೆ ನೀವೂ ಸಹ ಶಾಮೀಲಾಗಿದ್ದೀರಿ ಎಂದು ನಾವು ಹೇಳಬೇಕಾಗುತ್ತದೆ, ನಿಮಗೂ ಪಾಲು ಬರುತ್ತಿದೆ ಎಂದು ಹೇಳಬೇಕಾಗುತ್ತದೆ, ಇದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳಬೇಕು, ಈ ಆಕ್ಟ್ ಪಾಸಾದನಂತರ ಯಾವ ಎಂಜಿನಿಯರಿಂಗ್, ಮೆಡಿಕಲ್, ಡೆಂಟಲ್, ಕಾಲೇಜಸ್ ಇರಲಿ, ಸ್ಕೂಲ್ಸ್ ಇರಲಿ ಎಕ್ಸಸ್ ಇನ್‌ಟೇಕ್ ಮಾಡಿ ಅಪ್ಲಿಕೇಷನ್ ಬಂದರೆ ನಾವು ಕ್ಲಿಯರ್ ಮಾಡುವುದಿಲ್ಲ ಒಪ್ಪುವುದಿಲ್ಲ ಎಂದು ಹೇಳಬೇಕಾಗುತ್ತದೆ, ಇದು ಬಹಳ ಕಷ್ಟದ ಕೆಲಸವಾಗುತ್ತದೆ, ಮಾನ್ಯ

ಶಿಕ್ಷಣ ಸಚಿವರು ಇದ್ದಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. Actually I never wanted to debate in his absence. ಆದರೆ ಕೊನೇದಿನ ಇದೆ, ಕಾರ್ಯಕ್ರಮಕ್ಕೆ ಅಡ್ಡಬರಬಾರದು ಎಂದು ಸುಮ್ಮನಾದೆ. ಲಾ ಮಿನಿಸ್ಟರ್ ಆಗಿ ತಾವು ಇದಕ್ಕೆ ಉತ್ತರ ಹೇಳಬಹುದು ಆದರೆ ಸರಕಾರದ ನೀತಿ ಏನು, ಶಿಕ್ಷಣ ಸಚಿವರ ಅಭಿಪ್ರಾಯ ಏನು ಎಂಬುದು ಬೇಕು, ನಾನು ಏನು ಕೆಲವು ವಿಚಾರಗಳನ್ನು ಹೇಳಿದ್ದೇನೆ ಅದಕ್ಕೆ ಅವರೇ ಬಂದು ಉತ್ತರ ಕೊಟ್ಟರೆ ಒಳ್ಳೆಯದು, ಶಿಕ್ಷಣ ಇಲಾಖೆಯನ್ನು ಅವರು ನಡೆಸಬೇಕು, ನಿಮ್ಮ ಮಸೂದೆಯ ವಿಚಾರಗಳು ಒಳ್ಳೆಯದಿದ್ದರೂ ಇದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ವಿಶ್ವಾಸ ಇಲ್ಲ. ಸರಕಾರ ಇದರ ಬಗ್ಗೆ ಯಾವುದೇ ಮುಲಾಜೂ ಇಲ್ಲದೆ ಕ್ಷಿಪ್ರವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿ ಏನು ಭ್ರಷ್ಟಾಚಾರದ ಹಾವಳಿ ನಡೆಯುತ್ತಿದೆ, ರಿವರ್ಸ್ ಆರ್ ಫ್ಲೋಯಿಂಗ್, ಅದು ಸ್ಟಾಪ್ ಆಗಬೇಕಾದರೆ ಒಂದೇ ದಿವಸದಲ್ಲಿ ಎಲ್ಲಾ ತೆಗೆಯುವುದಕ್ಕೆ ಆಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಆದರೆ ಆದರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡಿರಿ. ಅಷ್ಟು ಮಾಡಿದರೆ ನಮಗೆ ಸಮಾಧಾನವಾಗುತ್ತದೆ. ಅಷ್ಟು ಕೆಲಸವನ್ನು ಮಾಡಬೇಕೆಂದು ನಾನು ಸರಕಾರವನ್ನು ಒತ್ತಾಯಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಮಂಡಿಸಿರತಕ್ಕಂಥಾದ್ದು ಸರಕಾರದ ವಿಪರ್ಯಾಸ. ಮೊದಲು ಶಿಕ್ಷಣದ ಬಗ್ಗೆ ಸರಕಾರದ ಒಂದು ನೀತಿ, ಸ್ಪಷ್ಟ ನಿಲುವು ಆಗಬೇಕು, ಸರಕಾರದ ಶಿಕ್ಷಣ ನೀತಿಯ ಬಗ್ಗೆ ಸ್ಪಷ್ಟ ನಿಲುವು ಇಲ್ಲ. ಸರಕಾರದ ಶಿಕ್ಷಣ ನೀತಿ, ಶಿಕ್ಷಣ ಮಾಧ್ಯಮದ ನೀತಿ, ಬಗ್ಗೆ ಸ್ಪಷ್ಟತೆ ಇಲ್ಲ. ಮತ್ತು ಅನಧಿಕೃತವಾಗಿ ಪ್ರಾರಂಭ ಮಾಡುತ್ತಿರತಕ್ಕಂಥ ಇಂಗ್ಲೀಷ್ ಮಾಧ್ಯಮದ ಶಾಲೆಗಳ ಬಗ್ಗೆ ಈ ಸದನದಲ್ಲಿ ಒಂದು ಸಮಗ್ರವಾದ ಚರ್ಚೆ ನಡೆಯಿತು, ಅಂದಿನ ವಿದ್ಯಾಸಚಿವರು, ಇವತ್ತು ಮುಖ್ಯಮಂತ್ರಿಗಳಾಗಿರತಕ್ಕಂಥವರು ಆದ ವೀರಪ್ಪಮೊಯಿಲಿಯವರೂ ಸಹ ಈ ಬಗ್ಗೆ ಅಕ್ರಮವಾಗಿ ಪ್ರಾರಂಭ ಮಾಡುತ್ತಿರತಕ್ಕಂಥ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನೆಲ್ಲಾ ರದ್ದು ಮಾಡುತ್ತೇವೆ ಮತ್ತೆ ಆದಕ್ಕೆ ಮಾನ್ಯತೆ ಕೊಡುವುದಿಲ್ಲ, ಕನ್ನಡ ಮಾಧ್ಯಮಕ್ಕೆ ಸರಕಾರದ ಆದ್ಯತೆ ಇದೆ, ಇದೆಲ್ಲವನ್ನೂ ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿದ್ದಾರೆ. ಅದು ಯಾವುದೂ ಸಹ ಇವತ್ತಿನವರೆಗೆ ಕಾರ್ಯರೂಪಕ್ಕೆ ಬರಲಿಲ್ಲ. ಶಿಕ್ಷಣ ನೀತಿಯ ಬಗ್ಗೆ ಒಂದು ಸಮಗ್ರವಾದ ವಿಚಾರ ಸರಕಾರದಿಂದ ಇದುವರೆಗೂ ನಮ್ಮ ಕಣ್ಣಿಗೆ ಕಾಣುತ್ತಾ ಇರತಕ್ಕಂಥ ಶಿಕ್ಷಣ ನೀತಿ ಎಂದರೆ ವ್ಯಾಪಾರಿ ನೀತಿ, ಶಿಕ್ಷಣ ಎಂದರೆ ವ್ಯಾಪಾರ ಅದು ಯಾವುದೇ ದರ್ಜೆಯ ಶಿಕ್ಷಣ ಆಗಬಹುದು, ಯಾವುದೇ ವರ್ಗದ ಶಿಕ್ಷಣ ಆಗಬಹುದು, ಅದು ಒಂದು ರೀತಿ ವ್ಯಾಪಾರಿ ನೀತಿಯಾಗಿದೆ, ಸರಕಾರ ಈ ಬಗ್ಗೆ ಒಂದು ಪರಿಣಾಮಕಾರಿಯಾದ, ಕ್ರಾಂತಿಕಾರಕವಾದ ಒಂದು ಚಿಂತನೆಯನ್ನು ಮಾಡಲಿಲ್ಲ ಎಂದರೆ ಅದು ನಿಜವಾಗಿಯೂ ಅತ್ಯಂತ ಅಪರಾಧ ಮಾಡಿದ ಹಾಗೆ ಆಗುತ್ತದೆ. ಸರಸ್ವತಿಯ ದೇಗುಲ ಎಂದು ಏನು ಕರೆಯುತ್ತಿದ್ದೇವೆ ಅವೆಲ್ಲಾ ಸಹ ಇವತ್ತು ವ್ಯಾಪಾರಿ ಕೇಂದ್ರಗಳಾಗಿವೆ. ಶಿಕ್ಷಣ ಮಾಧ್ಯಮ ಯಾವ ಭಾಷೆಯಲ್ಲಿರಬೇಕು. ಯಾವ ರೀತಿಯಲ್ಲಿ ಇರಬೇಕು ಎನ್ನುವ ಬಗ್ಗೆ ದಿವಂಗತ ಗೋಕಾಕ್‌ರವರು ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಸರ್ಕಾರಕ್ಕೆ ಶಿಕ್ಷಣದ ಮಾಧ್ಯಮ, ಶಿಕ್ಷಣದ ನೀತಿ ಯಾವ ರೀತಿಯಲ್ಲಿ ಇರಬೇಕೆಂದು ಸರ್ಕಾರಕ್ಕೆ ವರದಿ ನೀಡಿ ಬಹಳ ವರ್ಷಗಳಾಯಿತು. ಆ ವರದಿ ಬಗ್ಗೆ ಸರ್ಕಾರದ ನಿಲುವು ಏನು? ಹಿಂದೆ ಇದ್ದಂತಹ ಸರ್ಕಾರಗಳು ಈಗಿನ ಸರ್ಕಾರವೂ ಸಹ ಗೋಕಾಕ್ ವರದಿಯನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿವೆ. ಗೋಕಾಕ್ ವರದಿಯನ್ನು ಸರ್ಕಾರ ಅಕ್ಷರಸಃ ಒಪ್ಪುವ ಬಗ್ಗೆ ಈ ನಾಡಿನ ಎಲ್ಲಾ ಕನ್ನಡದ ಸಮಗ್ರ ಚಿಂತಕರು ಸಹ ಒಂದು ರೀತಿಯ ಒತ್ತಡವನ್ನು ಅನೇಕ ಭಾರಿ ತಂದದ್ದು ಇದೆ. ಒಬ್ಬ ಶ್ರೇಷ್ಠ ಕನ್ನಡ ಧೀಮಂತ ಶಕ್ತಿ ಗೋಕಾಕ್ ಅವರು ಬದುಕಿದ್ದಾಗ, ಅವರು ತಂದಂತಹ ಅವರು ಕೊಟ್ಟಂತಹ ಶಿಫಾರಸ್ಸುಗಳನ್ನು ಅವರು ಏನು ಮಾಡಿದ್ದರು ಆ ವರದಿಯಲ್ಲಿ ಅದನ್ನು ಒಪ್ಪಬಹುದಾಗಿತ್ತು. ಸುಮ್ಮನೆ ಬರೀ ಮಾತಿನಲ್ಲಿ ಒಪ್ಪಿದ್ದೇವೆಂದು ಹೇಳಿದರು ಅದು ಒಂದು ರೀತಿಯಲ್ಲಿ ಗೋಕಾಕ್

ವರದಿ ಬಗ್ಗೆ ಇಡೀ ರಾಜ್ಯದ ಉದ್ದಗಲಕ್ಕೂ ಬಂದು ಎಚ್ಚರ ಒಂದು ಚೈತನ್ಯ ಒಂದು ಶಕ್ತಿ ಕನ್ನಡಕ್ಕೆ ಬಂತು. ಸರ್ಕಾರ ಆ ವರದಿಯನ್ನು ಒಪ್ಪುವುದರಲ್ಲಿ ನಿಜವಾಗಿಯೂ ಸಂಪೂರ್ಣವಾಗಿ ವಿಫಲವಾಗಿದೆ. ಈ ಸರ್ಕಾರ ಹಿಂದಿನ ಸರ್ಕಾರ ಮತ್ತು ಗೋಕಾಕ್ ವರದಿಯನ್ನು ಪಡೆದಂತಹ ಸರ್ಕಾರ ಸುಮಾರಾಗಿ ನಾನು ಒಂದೇ ಸಮನೆ ನೋಡಿದ್ದೇನೆ 8-9 ವರ್ಷಗಳಿಂದ ಈ ಗೋಕಾಕ್ ವರದಿಯನ್ನು ಮೂಲೆಗುಂಪು ಮಾಡಬೇಕು ಎಂದು ಹೇಳಿ ಅನೇಕ ಪಿತೂರಿಗಳು ನಡೆದವು. ಒಂದಾದ ಮೇಲೆ ಒಂದು. ಅಲ್ಪಸಂಖ್ಯಾತರ ಭಾಷೆಯ ಜನರನ್ನು ಮೆಚ್ಚಿಸುವುದಕ್ಕೋಸ್ಕರ ಗೋಕಾಕ್ ವರದಿಯನ್ನು ಬೀದಿಪಾಲು ಮಾಡಿದರು. ಗೋಕಾಕ್ ವರದಿಯನ್ನು ಕಾಲುಕಸ ಮಾಡಿದರು. ಗೋಕಾಕ್ ವರದಿಯನ್ನು ಒಪ್ಪುವ ಬಗ್ಗೆ ಸರ್ಕಾರದ ಪ್ರಾಮಾಣಿಕ ಚಿಂತನೆ ಇದುವರೆಗೂ ನಡೆದಿಲ್ಲ. ಆದ್ದರಿಂದ ತಾವು ಉತ್ತರ ಕೊಡುವಾಗ ಹೇಳಬೇಕು. ಗೋಕಾಕ್ ವರದಿಯ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು? ಗೋಕಾಕ್ ವರದಿಯನ್ನು ಸಂಪೂರ್ಣವಾಗಿ ಶಿಕ್ಷಣ ಮಾಧ್ಯಮಕ್ಕೆ ಒಂದು ಹೊಸಬೆಳಕು ಚೆಲ್ಲತಕ್ಕಂಥ ಒಂದು ಮಹತ್ವದ ವರದಿಯನ್ನು ಅವರು ಕೊಟ್ಟಿದ್ದಾರೆ. ಆ ವರದಿಯನ್ನು ಸರ್ಕಾರ ಅಕ್ಷರಸಃ ತಾವು ಒಪ್ಪಿದ್ದೀರಾ ಅಥವಾ ಇಲ್ಲವೇ ಎನ್ನತಕ್ಕಂಥ ಪ್ರಶ್ನೆಯನ್ನು ತಾವು ಹೇಳಬೇಕು. ಅದು ಬಹಳ ಮುಖ್ಯವಾಗಿ ತಮಗೆ ಸೇರಿರುವಂಥಾದ್ದು. ಯಾರು ಇನ್ನು ಅನಧಿಕೃತ ಶಾಲೆಗಳು ನಡೆಸುತ್ತಿದ್ದಾರೆ ಅವುಗಳನ್ನು ಅಧಿಕೃತ ಶಾಲೆಗಳನ್ನಾಗಿ ಮಾಡತಕ್ಕಂಥ ಮತ್ತು ಅಕ್ರಮವಾಗಿ ಪ್ರಾರಂಭ ಮಾಡತಕ್ಕಂಥ ಶಾಲೆಗಳನ್ನು ತಡೆಯತಕ್ಕಂಥಾದ್ದು ಅಕ್ರಮ ಶಾಲೆಗಳಿಗೆ ಮಕ್ಕಳನ್ನು ಸೇರಿಸತಕ್ಕಂಥಾದ್ದು ಇದರ ಬಗ್ಗೆ ಪ್ರಾಮಾಣಿಕತೆ ಇದೆ ಎನ್ನುವುದು. ಈ ಸದನದಲ್ಲಿ ವೈದ್ಯಕೀಯ ಕಾಲೇಜುಗಳ ಬಗ್ಗೆ, ತಾಂತ್ರಿಕ ಕಾಲೇಜುಗಳ ಬಗ್ಗೆ ಇಡೀ ರಾಜ್ಯಾದ್ಯಂತ ಒಂದು ದೊಡ್ಡ ಅನ್ಯಾಯ ಅಕ್ರಮ ಭ್ರಷ್ಟಚಾರ ಹಗಲು ದರೋಡೆ ಏನು ನಡೆಯುತ್ತಿದೆ ಇದರ ಬಗ್ಗೆ ನಾವು ನಿರಂತರವಾಗಿ ಈ ಸದನಕ್ಕೆ ಬಂದಿಂದಿನಿಂದ ಇಂದಿನವರೆಗೂ ಒಂದೇ ಸಮನೆ ಹೇಳುತ್ತಿದೆ. ಸರ್ಕಾರಕ್ಕೆ ಧೈರ್ಯ ಇದೆಯೇ ಪ್ರಾಮಾಣಿಕತೆ ಇದೆಯೇ ಯಾವ ಉದ್ದೇಶದಿಂದ ಇವತ್ತು ಈ ವೈದ್ಯಕೀಯ ಕಾಲೇಜುಗಳು ಮತ್ತು ತಾಂತ್ರಿಕ ಕಾಲೇಜುಗಳು ತಾವು ಹೃದಯ ಬಿಚ್ಚಿ ಸ್ವಲ್ಪ ಈ ಒಂದು ಚಿತ್ರಣವನ್ನು ನೋಡಿ, ತಮಗೆ ಗೊತ್ತಿದೆ ತಾವು ಶಿಕ್ಷಣ ಸಂಸ್ಥೆಗಳನ್ನು ನಡಸತಕ್ಕಂಥವರು. ತಾವು ಈ ರಾಜ್ಯದ ಬಗ್ಗೆ ಅಪಾರವಾದ ಚಿಂತನೆ ಇಟ್ಟಿರತಕ್ಕಂಥವರು. ನಾನು ಹಾರ್ನಹಳ್ಳಿ ರಾಮಸ್ವಾಮಿ ಅವರನ್ನು ಕುರಿತು ಹೇಳತಕ್ಕಂಥ ಮಾತು. ಈ ರಾಜ್ಯದಲ್ಲಿ ನಡೆಸತಕ್ಕಂಥ ವೈದ್ಯಕೀಯ ಕಾಲೇಜುಗಳು ಅಲ್ಲಿಯ ಪರಿಸ್ಥಿತಿ ಅಲ್ಲಿಯ ಪ್ರವೇಶ ಒಂದಕ್ಕೊಂದು ವಿಭಿನ್ನವಾಗಿದೆ. ಯಾವ ಉದ್ದೇಶಕ್ಕಾಗಿ ಈ ವೈದ್ಯಕೀಯ ಕಾಲೇಜುಗಳನ್ನು ತಾಂತ್ರಿಕ ಕಾಲೇಜುಗಳನ್ನು ಪಡೆದಿದ್ದಾರೆ ಆ ಉದ್ದೇಶ ಸಫಲವಾಗಿದೆಯೇ? ಅವರಿಗೆ ಕಾಲೇಜುಗಳನ್ನು ಕೊಡುವಾಗ ಕೆಲವು ಷರತ್ತುಗಳನ್ನು ಹಾಕಿರುತ್ತೀರಿ. ಆ ಷರತ್ತುಗಳನ್ನು ಪಾಲಿಸಿದ್ದಾರೆಯೇ? ನಾವು ಮುಕ್ತ ಚಿಂತನೆ ಮಾಡುತ್ತೇವೆ. ಮುಕ್ತ ವಿಚಾರ ಮಾಡುತ್ತೇವೆಂದು ತಾವು ಹೇಳಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಸಾರಾಯಿ ಬಗ್ಗೆ ಅಬಕಾರಿ ಬಗ್ಗೆ ಮಾತನಾಡುವಾಗ ಅವರ ಒಂದು ಕಳಕಳಿ ಅವರ ಸ್ಪಷ್ಟವಾಗಿ ಕಂಡು ಬಂತು. ಅದು ಒಂದು ಕಡೆ. ಮತ್ತೊಂದು ಕಡೆ ಅದೇ ರೀತಿ ಕೆಟ್ಟ ಹೆಸರು ತರತಕ್ಕಂಥ ಗ್ರಾನೈಟ್ ಅದು ಬರುತ್ತಿದೆ. ನಮ್ಮ ಖಾಸಗಿ ನಿರ್ಣಯದಲ್ಲಿ ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಈ ವೈದ್ಯಕೀಯ ಕಾಲೇಜುಗಳನ್ನು, ತಾಂತ್ರಿಕ ಕಾಲೇಜುಗಳನ್ನು ನಡೆಸತಕ್ಕಂಥ ಪಾಳೇಗಾರರು, ಇವರು ಯಾವುದೋ ಕಾಲದ ದೊಡ್ಡ ಸಾಮಂತ ರಾಜರುಗಳಿದ್ದ ಹಾಗೆ. ದಯಮಾಡಿ ಈ ಪರಿಸ್ಥಿತಿ ಬಗ್ಗೆ ಪರಿಣಾಮಕಾರಿಯಾದಂಥ, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಇಂಥ ಕಾರ್ಯ ಮಾಡಬೇಕು. ಈ ಕಾಲೇಜುಗಳನ್ನು, ತಾವು ಧೈರ್ಯ ಮಾಡಿ ರಾಷ್ಟ್ರೀಕರಣ ಮಾಡುತ್ತೀರಾ? ಮಾಡಿ. ಏನಾಗುತ್ತದೆ ನಿಮಗೆ? ಯಾರೇ ಅಡ್ಡ ಬರಲಿ, ಧೈರ್ಯವಾಗಿ ನಿಲ್ಲಿ. ಮೆಡಿಕಲ್ ಮತ್ತು ತಾಂತ್ರಿಕ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎನ್ನುವಂಥ, ಎದೆಗಾರಿಕೆಯ ಒಂದು

ಮಸೂದೆಯನ್ನು ತೆಗೆದುಕೊಂಡು ಬನ್ನಿ. ನಾವು ಅದನ್ನು ಒಪ್ಪುತ್ತೇವೆ. ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಕಣ್ಣೀರು ಸುರಿಸುತ್ತಿದ್ದೇವೆ. ಯಾವ ವಿದ್ಯಾರ್ಥಿಗಳಿಗೆ ಈ ವೈದ್ಯಕೀಯ ಕಾಲೇಜುಗಳಲ್ಲಿ, ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ದೊರಕಬೇಕಾಗಿತ್ತೋ ಅವರಿಗೆ ದೊರಕುತ್ತಿಲ್ಲ. ನಮ್ಮ ಹಳ್ಳಿಗಾಡಿನ ಮಕ್ಕಳಿಗೆ ದೊರಕುತ್ತಿಲ್ಲ. ನಮ್ಮ ರಾಜ್ಯದ ಮಕ್ಕಳಿಗೆ ದೊರಕುತ್ತಿಲ್ಲ. ಇದು ದೊರಕುತ್ತಿರುವುದೆಲ್ಲಾ ಹೊರಗಡೆ ರಾಜ್ಯದವರಿಗೆ. ಇದು ವ್ಯಾಪಾರ ಕೇಂದ್ರವಾಗಿದೆ. ಪ್ರತಿ ವೈದ್ಯಕೀಯ ಕಾಲೇಜುಗಳ ಪ್ರವೇಶದ, ಪ್ರತಿ ಸೀಟು, ತಾಂತ್ರಿಕ ಕಾಲೇಜುಗಳ ಪ್ರತಿ ಸೀಟು ಹರಾಜು ಆಗುತ್ತಿದೆ. ವ್ಯಾಪಾರವಾಗುತ್ತಿದೆ. ತಮಗೆ ಹೇಳಿದರೆ ಆಶ್ಚರ್ಯವಾಗಬಹುದು, ಮೊನ್ನೆ ಶಿಕ್ಷಣ ಸಚಿವರು ಇಲ್ಲಿ ಮಾತನಾಡುವಾಗ ಹೇಳಿದರು, ಇದು ನಮ್ಮ ಗಮನಕ್ಕೆ ಬಂದೇಇಲ್ಲ. ಈ ರೀತಿ ಅನ್ಯಾಯ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದೇ ಇಲ್ಲ. ನಾವು ನೋಡಿಯೇ ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಏನೋ ಈ ಸಭೆಯಲ್ಲಿ ಉತ್ತರ ಕೊಡಬೇಕು ಎನ್ನುತಕ್ಕಂಥಾದ್ದಲ್ಲ. ನಾವು ನಿಮ್ಮ ಸರ್ಕಾರದಿಂದ ಅದನ್ನು ನಿರೀಕ್ಷಣೆ ಮಾಡಿಲ್ಲ. ಈ ಬಗ್ಗೆ ನಾನು ಆಗಲೇ ಹೇಳಿದಹಾಗೆ, ಮುಖ್ಯಮಂತ್ರಿ ವೀರಪ್ಪಮೊಯಿಲಿಯವರು ನಿಜವಾಗಿಯೂ ಈ ಬಗ್ಗೆ ಕಳಕಳಿಯನ್ನು ತೋರಬೇಕು, ತಾವು ತೋರಿಸಿದ್ದೀರಿ. ನಿನ್ನೆ ನಿಮ್ಮ ಭಾಷಣವನ್ನು ನಾವು ಮೆಚ್ಚಿದ್ದೇವೆ. ನೀವು ಅಬಕಾರಿ ಬಗ್ಗೆ ಮಾಡಿದ ಭಾಷಣವನ್ನು ಮೆಚ್ಚಿದ್ದೇವೆ. ಅದೇ ರೀತಿ ಗ್ರ್ಯಾನೈಟ್ ಬಗ್ಗೆಯೂ ಸಹ ನಾವು ಅನೇಕ ವಿಚಾರಗಳನ್ನು ತಮಗೆ ನಾವು ಹೇಳಬೇಕಾಗಿದೆ. ಅದೇ ರೀತಿ ಈ ಮೆಡಿಕಲ್ ಕಾಲೇಜು ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ನಡೆಯತಕ್ಕಂಥ ಯಾವ ಒಂದು ಅಕ್ರಮವನ್ನು ನಿಲ್ಲಿಸುವುದಕ್ಕೆ, ನಿಮ್ಮ ಸರ್ಕಾರ ಪರಿಣಾಮಕಾರಿಯಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕಾಗಿದೆ. ಕೈಗೊಂಡರೆ ನಿಜವಾಗಲೂ ಈ ರಾಜ್ಯದ ಜನತೆ, ಈ ದೇಶದ ಜನತೆ ನಿಮ್ಮನ್ನು ಮೆಚ್ಚುತ್ತಾರೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಅಧ್ಯಕ್ಷರೆ, ಒಂದು ವೈದ್ಯಕೀಯ ಕಾಲೇಜಿನ ಪ್ರವೇಶದ ಬೆಲೆ ಎಷ್ಟು? ಒಬ್ಬ ವಿದ್ಯಾರ್ಥಿಗೆ? 15 ಲಕ್ಷ ರೂಪಾಯಿ. ಒಂದು ಕಡೆ ಕ್ಯಾಪಿಟೇಶನ್, ಮತ್ತೊಂದು ಕಡೆ ಪ್ರವೇಶ, ನಮ್ಮದೇನೋ ಒಂದು ಮಾಡಿದ್ದೀರಿ, ಇಷ್ಟಿಷ್ಟು ಫೀಸ್ ಕೊಡಬೇಕು ಎಂದು. ಇಷ್ಟು ಮಾತ್ರ ಕೊಟ್ರೆ ಸಾಕು. ಇದರ ಮೇಲೆ ಕ್ಯಾಪಿಟೇಷನ್ ಕೊಟ್ಟವರನ್ನು ನಾವು ಜೈಲಿಗೆ ಹಾಕುತ್ತೇವೆ ಎಂದು ನಿಮ್ಮ ಸರ್ಕಾರದ ನೀತಿಯಲ್ಲಿ ಇದೆ. ಇವತ್ತು ಯಾರು ಸ್ವಲ್ಪ ನಿಮಗೆ, ಪ್ರಾಮಾಣಿಕತೆ ಇದ್ರೆ, ನಿಮ್ಮ ಪ್ರಾಮಾಣಿಕತೆಯ ಪ್ರದರ್ಶನ ಸ್ವಲ್ಪ ಆಗಲಿ. ನಿಮಗೆ ಯಾರಿಗೂ ಗೊತ್ತಿಲ್ಲವೋ, ಈ ರೀತಿ ಮೋಸದಿಂದ ಕ್ಯಾಪಿಟೇಷನ್ ಶುಲ್ಕವನ್ನು ಕೊಟ್ಟು ಈ ತರಹ ಕಾಲೇಜುಗಳಲ್ಲಿ ದರೋಡೆ ನಡೆಯುತ್ತಿರುವುದು ನಿಮಗೆ ಗೊತ್ತಿಲ್ಲವೊ? ತಾವು ಪ್ರತಿಯೊಂದು ಕೇಳುತ್ತೇವೆಯಲ್ಲಾ? ತಾವು ಸಿಓಡಿಗೆ ಒಪ್ಪಿಸಿ. ಸಿಬಿಐಗೆ ಒಪ್ಪಿಸಿ ಎಂದು ಕೇಳುತ್ತೇವೆ. ಇವತ್ತು ನಾನು ಸಹಾ ಸಿಓಡಿ, ಸಿಬಿಐ ಬೇಡಿ ಸ್ವಾಮಿ. ನಾವೇ ಹೋಗೋಣ. ಈ ಸದನದ ಒಂದು ಸಮಿತಿ, ನಮ್ಮ ಕಡೆ ನಿಮ್ಮ ಕಡೆ ಸದಸ್ಯರನ್ನು ಸೇರಿಸಿ ಒಂದು ಸಮಿತಿಯನ್ನು ರಚನೆ ಮಾಡಿ. ನಾವು ಹೇಳುತ್ತೇವೆ. ಆ ವಿದ್ಯಾರ್ಥಿಗಳನ್ನು ಹೋಗಿ ಕೇಳಿ. ಒಂದು ಸಾರಿ ಪ್ರವೇಶವನ್ನು ಪಡೆಯತಕ್ಕಂಥ ಯಾವ ತಿಂಗಳು ಯಾವ ಕಾಲ ಇದೆ? ಆ ಸಂದರ್ಭದಲ್ಲಿ ನೀವು ಎಲ್ಲೂ ಹೋಗಬೇಕಾಗಿಲ್ಲ. ಈ ಕಾಲೇಜುಗಳ ಮುಂದೆ ನಮ್ಮ ಸಮಿತಿ ನಿಂತುಕೊಳ್ಳಲಿ. ಯಾರು ಬರುತ್ತಾರೆ? ಎಲ್ಲಾ ವಿದೇಶದಿಂದ ದೊಡ್ಡ ದೊಡ್ಡ ಹಣ ತೆಗೆದುಕೊಂಡು, ಹಣದ ಕಂತೆಯನ್ನು ತೆಗೆದುಕೊಂಡು ಕೊಡುವುದಕ್ಕೆ ಬರುತ್ತಿದ್ದಾರೆ. ಈ ಹಣದ ಕಂತೆಯನ್ನು ಕೊಟ್ಟಿರುವುದರ ಬಗ್ಗೆ ಈ ಸೀಟುಗಳ ಬಗ್ಗೆ, ಪಡೆದಿರತಕ್ಕಂಥ ಹಣದ ಬಗ್ಗೆ ಲೆಕ್ಕ ಇದೆಯೋ? ಏನೂ ಇಲ್ಲವಲ್ಲ. ಈ ರೀತಿ ದರೋಡೆ ನಡೆಯುತ್ತಿದೆ, ಒಂದೇ ಸಮಕ್ಕೆ. ಇವರುಗಳು ರಾಜಕಾರಣ ಮಾಡುತ್ತಾರೆ, ಇವರುಗಳು ನಡೆಸತಕ್ಕಂಥ, ಅವರು ಯಾರೇ ಆಗಿರಲಿ, ನಾನು ಎಲ್ಲಾ ಸಂಸ್ಥೆಗಳನ್ನು ಸಾರಾಸಗಟು ಸರಿಯಿಲ್ಲವೆಂದು ಹೇಳುವುದಿಲ್ಲ. ಆ ವ್ಯವಸ್ಥೆ ಬದಲಾವಣೆಯಾಗಬೇಕಾದರೆ ಕ್ರಾಂತಿಕಾರದ ಬದಲಾವಣೆಯಾಗಿ ಸರ್ಕಾರ ರಾಷ್ಟ್ರೀಕರಣ ನೀತಿಯನ್ನು ತಾವು ಅನುಸರಿಸಬೇಕು ಅನ್ನತಕ್ಕಂಥ

ಮಾತನ್ನು ಹೇಳುತ್ತಿದ್ದೇನೆ. ಈ ರೀತಿ ಮಾಡಿದರೆ ಅನೇಕ ಜನಕ್ಕೆ ನಿಷ್ಠೂರವಾಗಬಹುದು. ಅನೇಕರು ನಿಮ್ಮ ವಿರುದ್ಧವಾಗಬಹುದು. ಯಾರೇ ಏನೇ ಹೇಳಿದರೂ ಸಹಾ ಚಿಂತೆ ಇಲ್ಲ. ಈ ತಾಂತ್ರಿಕ ಮತ್ತು ಮೆಡಿಕಲ್ ಕಾಲೇಜುಗಳ ಒಂದು ವ್ಯವಸ್ಥೆ ಇದೆಯಲ್ಲಾ? ಇದರಲ್ಲಿ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸುವುದಕ್ಕೆ ಒಂದು ಪರಿಣಾಮಕಾರಿಯಾದ ಕ್ರಮವನ್ನು ತಾವು ತೆಗೆದುಕೊಳ್ಳಲಿಲ್ಲವೆಂದರೆ ನಿಜವಾಗಲೂ ಅಗೌರವವಾಗುತ್ತದೆ. ಒಂದು ಉದಾಹರಣೆ, ಕೆಜಿಎಫ್ ನಲ್ಲಿ ಒಬ್ಬನೇ ಒಬ್ಬ ತಮಿಳುನಾಡಿನವನು ಆತ ಈ ಊರಿಗೆ ಬಂದ, ಕುಳಿತ, ಅವನಿಗೆ ತಾಂತ್ರಿಕ ಕಾಲೇಜನ್ನು ಕೊಟ್ಟಿದ್ದೇವೆ, ಬಿ.ಎಡ್. ಕಾಲೇಜನ್ನು ಕೊಟ್ಟಿದ್ದೇವೆ, ಎಲ್ಲಾ ಒಬ್ಬನೇ ಒಬ್ಬ ಹಿಂದೆ, ಮುಂದೆ ಇಲ್ಲ, ಅಷ್ಟೇ ಅಲ್ಲ ಅವರು ಮಾಡಿಕೊಂಡಿರುವ ಸಮಿತಿಗಳನ್ನು ನೋಡಬೇಕು, ಮಂಡಳಿಗಳು ಎಂದು ಮಾಡಿಕೊಂಡಿದ್ದಾರೆ, ಅದರಲ್ಲಿ ಅವರುಗಳೇ ಇದ್ದಾರೆ. ಅವರ ತಮ್ಮ ಅವರ ಅಣ್ಣ, ಅಥವಾ ಜನರಿಗೆ ಬಹಳ ಬೇಕಾದವರು ಇಲ್ಲವೇ ಅವರ ಜಾತಿಯವರು ಇಂಥವರೇ ಸೇರಿಕೊಂಡು ಅವರು ಮಂಡಳಿಗಳನ್ನು ಮಾಡಿಕೊಳ್ಳುತ್ತಾರೆ. ಈ ಮಂಡಳಿಗಳ ಮೂಲಕ ಅವರು ಹೇಳಿದ್ದೇ ಸರಿ. ಈ ಮಂಡಳಿಗಳ ಲೆಕ್ಕವನ್ನು ತನಿಖೆ ಮಾಡುವವರು ಯಾರು? ಈ ಮಂಡಳಿಗಳನ್ನು ನೀವ್ಯಾರಾದರೂ ನೋಡಿದ್ದೀರಾ? ಏನಿಲ್ಲ, ಎಲ್ಲಾ ಸರಕಾರದ್ದು, ಅವರ ಹತ್ತಿರ ಮನವಿಯನ್ನು ತೆಗೆದುಕೊಳ್ಳುತ್ತೀರಿ, ಸರಕಾರದ ಸೀಟುಗಳು. ಪ್ರತೀ ವರ್ಷ 10-15-20 ಸೀಟುಗಳನ್ನು ತಾವು ಜಾಸ್ತಿ ಮಾಡಿಕೊಳ್ಳತಕ್ಕಂಥಾದ್ದು. ನಿಮಗೂ ಅವರಿಗೂ ವ್ಯವಸ್ಥೆ, ನಿಮಗೂ ಅವರಿಗೂ ಹೊಂದಾಣಿಕೆ. ಈ ರೀತಿಯಾಗಿ ಮಾಡಿಕೊಂಡು, ಇದೊಂದು ರೀತಿಯಲ್ಲಿ ಕೆಟ್ಟ ವ್ಯಾಪಾರ ಪರಿಣಾಮಕಾರಿಯಾಗಿ ಈ ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇದೆ. ಹೋಗಲಿ ಅಂದರೆ ನಮ್ಮ ಕನ್ನಡದವರಿಗೇ ಅನ್ಯಾಯ. ಕನ್ನಡದ ವಿದ್ಯಾರ್ಥಿಗಳಿಗೆ, ಕನ್ನಡ ಭಾಷೆಯವರಿಗೆ, ನಮ್ಮ ಕರ್ನಾಟಕದ ಬಡ ರೈತರ ಮಕ್ಕಳಿಗಾದರೂ, ಬಡವರ ಮಕ್ಕಳಿಗಾದರೂ, ಕರ್ನಾಟಕದ ಬೀದಿ ಮಕ್ಕಳಿಗಾದರೂ ನೀವು ಪ್ರವೇಶ ಕೊಟ್ಟಿದ್ದೀರಾ? ಇಲ್ಲ, ಖಂಡಿತಾ ಕೊಟ್ಟಿಲ್ಲ. ನಮ್ಮ ರಾಜ್ಯದ ಬಡಮಕ್ಕಳಿಗೆ ಈ ರೀತಿಯಾದ ದುಬಾರಿ ಹಾಗೂ ಶ್ರೀಮಂತ ವಿದ್ಯೆಯನ್ನು ಕಲಿಯುವುದಕ್ಕೆ ಆಗುತ್ತಾ ಇಲ್ಲ. 15 ಲಕ್ಷ ರೂ.ಗಳನ್ನು ಕೊಡತಕ್ಕಂಥ ವ್ಯವಸ್ಥೆಯು ಕರ್ನಾಟಕದ ಯಾವ ಮೂಲೆಯಲ್ಲಿಯೂ ಇಲ್ಲ. ಹೀಗಾಗಿ ಅಲ್ಲಿ ಕಲಿಯುವ 100ಕ್ಕೆ 90ರಷ್ಟು ಭಾಗದ ವಿದ್ಯಾರ್ಥಿಗಳು ಎಲ್ಲರೂ ಹೊರಗಿನವರು. ಇರಾಕ್, ಇರಾನ್, ಮತ್ತು ಬೇರೆ ಬೇರೆ ರಾಷ್ಟ್ರ ಮತ್ತು ರಾಜ್ಯಗಳಿಂದ ಬಂದಿರತಕ್ಕಂಥವರು. ಹೀಗಾಗಿ ಒಂದು ಕಡೆ ಇದು ವ್ಯಾಪಾರ, ಮತ್ತೊಂದು ಕಡೆ ಬೇರೆ ರಾಜ್ಯದವರು, ಬೇರೆ ರಾಷ್ಟ್ರದವರು, ಇಲ್ಲಿಗೆ ಬಂದು ಅನೇಕ ಕಾಲೇಜುಗಳಲ್ಲಿ ಅಶಾಂತ ವಾತಾವರಣ ನಿರ್ಮಾಣವಾಗಿದೆ. ಬೆಂಗಳೂರಿನ ವೈದ್ಯಕೀಯ ಕಾಲೇಜೊಂದರಲ್ಲಿ ಹೊಡೆದಾಟವಾಗಿದೆ. ಅನೇಕರು ಸತ್ತಿದ್ದಾರೆ, ಅಶಾಂತ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಯಾರು ಹೊಣೆ? ನನಗನ್ನಿಸುತ್ತದೆ, ಇವೊತ್ತು ಈ ಬಗ್ಗೆ ಸರಕಾರದವರು ಒಂದು ತೀರ್ಮಾನಕ್ಕೆ ಬರಬೇಕು, ಮೊಯಿಲಿಯವರು ಧೈರ್ಯ ಮಾಡಿ ಈ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಒಂದು ಸಮರ್ಥವಾದಂಥ ನಿರ್ಧಾರಕ್ಕೆ ಬರಬೇಕು. ಇಡೀ ಸದನವೇ ತಮ್ಮ ಬೆಂಗಾವಲಾಗಿ ನಿಲ್ಲುತ್ತೇವೆ. ನೀವು ಇದನ್ನು ಮಾಡಿ, ಇದಕ್ಕೋಸ್ಕರ,....

† ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಈಗ ಇಲ್ಲಿ ನಿಂತುಕೊಂಡು ಆತ್ಮವಂಚನೆ ಮಾಡಿಕೊಳ್ಳುವುದು ಬೇಡ. ಮಂತ್ರಿಗಳಾಗಿರತಕ್ಕಂಥವರು ಯಾರ್ಯಾರು, ಯಾವ ಯಾವ ಕಾಲೇಜಿಗೆ, ನೀವು ಪಟ್ಟಿಯನ್ನು ಕಳುಹಿಸಿದ್ದೀರಿ? ನಿಮ್ಮ ಕಾಗದದ ಮೇಲೆ ಯಾವ್ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಜನರಿಗೆ ಪ್ರವೇಶ ದೊರಕಿದೆ? ಇಂಥ ವಿಚಾರವನ್ನು ನೀವು ಹೌದು ಇದು ಆಗಿದೆ ಎಂದು ಒಪ್ಪಿಕೊಂಡರೆ, ಆಗ ನಿಮ್ಮ ಸತ್ಯಸಂಧತೆಯನ್ನು ನಾನು ಮೆಚ್ಚಿಕೊಳ್ಳುತ್ತೇನೆ. ನಾನು ನಿಮ್ಮ ಸರಕಾರ ಎಂದು ಹೇಳುತ್ತಿರತಕ್ಕಂಥಾದ್ದು ನಾನು ನಿಮ್ಮ ಕಾಂಗ್ರೆಸ್ (ಐ) ಸರಕಾರದ ಬಗ್ಗೆ. ಕಳೆದ ಮೂರು ವರ್ಷಗಳಿಂದ ನಿಮ್ಮ ಸರಕಾರದ ಯಾವ ಯಾವ ಮಂತ್ರಿಗಳ ಕಾಗದದ ಮೇಲೆ,

ಎಷ್ಟೆಷ್ಟು ಪ್ರವೇಶ ಪಡೆದಿದ್ದೀರಿ ಎಂದು ಹೇಳಬೇಕು. ನಿಮಗೆ ಕೊಡಲು ಆಗದಿದ್ದರೆ ನಾನೇ ಬೇಕಾಧರೂ ಕೊಡುತ್ತೇನೆ....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ನಾನು ಮಾತನಾಡುವಾಗ ಸದನದಲ್ಲಿ ಇರಲಿಲ್ಲ. ಈಗ ಬಂದಿದ್ದಾರೆ. ಅವರಿಗೆ ಬಹಳ ಪ್ರಿಯವಾದಂಥ ವಿಚಾರವನ್ನು ಹೇಳಿದ್ದೇನೆ. ಶಿಕ್ಷಣ ಮಾಧ್ಯಮದ ಬಗ್ಗೆ ನಿಮ್ಮ ನೀತಿ ಏನು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಗೋಕಾಕ್ ವರದಿ ಬಗ್ಗೆ ನೀವು ಒಪ್ಪಿದ್ದೀರೋ ಅದರ ಬಗ್ಗೆಯೂ ನಿರ್ಧಾರವಾಗಿಲ್ಲ ತಾವು ಶಿಕ್ಷಣ ಸಚಿವರಾಗಿದ್ದಾಗ ಹೇಳಿದ್ದೀರಿ, ಅದಕ್ಕೊಂದು ಸಮಿತಿಯನ್ನು ಮಾಡಿದ್ದೀರಿ. ಅದರ ವರದಿ ಏನಾಯಿತು?

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ನಾವು ಯಾವ ಸಮಿತಿಯನ್ನು ಡಾ|| ನರಸಿಂಹಯ್ಯನವರು ಎಲ್ಲಾ ಕೂಡಿ ಮಾಡಿದ್ದೇವೆ ಅದು ಪೂರ್ತಿಯಾಗಿ ಅನುಷ್ಠಾನವಾಗಿದೆ. ತಮಗೆ ಸರಕಾರದ ಆದೇಶವನ್ನು ಬೇಕಾದರೆ ಕೊಡುತ್ತೇನೆ. ಅದನ್ನು ನಾವು ಅನುಷ್ಠಾನ ಮಾಡಿದ್ದೇವೆ. ಇವೊತ್ತಿಗೂ ಕೂಡ, ಈ ಆಂಗ್ಲಮಾಧ್ಯಮ ಯಾವ ತರಹ ಇರಬೇಕು, ಸಮಿತಿಯವರು ಏನು ವರದಿ ಕೊಟ್ಟಿದ್ದಾರೆ, ಸರಕಾರದವರು ಅದರ ಪ್ರಕಾರವೇ ಆದೇಶವನ್ನು ಕೊಟ್ಟಿದ್ದೇವೆ. ಹಾಗೆಯೇ ಇವೊತ್ತು ನಡೆಯುತ್ತಾ ಇರುವುದು. ಗೋಕಾಕ್ ವರದಿಯು ಕೂಡ ಅನುಷ್ಠಾನವಾಗಿದೆ. ಯಾವುದು ಸರಿಯಾಗಿ ಆಗಿದೆ, ಆಗಿಲ್ಲ ಎಂಬ ಬಗ್ಗೆ ನಾವೆಲ್ಲರೂ ಮಾತನಾಡೋಣ. ಕನ್ನಡ ಭಾಷೆ ನುಡಿಯ ವಿಚಾರದಲ್ಲಿ ಎಲ್ಲರಿಗೂ ಆಸಕ್ತಿ ಇದೆ. ಅದನ್ನು ಬಿಟ್ಟು ಆಸಕ್ತಿ ಇದ್ದವರದ್ದು ಮಾತ್ರ ಸಭೆ ಕರೆಯೋಣ ಅಂದರೆ ಅದು ತಪ್ಪು ಅರ್ಥವಾಗಬಹುದು. ಇದರ ಬಗ್ಗೆ ಎಷ್ಟು ಅನುಷ್ಠಾನವಾಗಿದೆ, ಯಾವುದು ಆಗಿಲ್ಲ? ಯಾವುದನ್ನು ಮಾಡಬಹುದು? ಕನ್ನಡದ ನುಡಿ, ಭಾಷೆ, ಸಾಹಿತ್ಯದ ಅಭಿವೃದ್ಧಿಯ ಬಗ್ಗೆ ನಾನು ಒಂದು ಸಭೆಯನ್ನು ಕರೆಯುತ್ತೇನೆ. ಎರಡೂ ಸದನಗಳ ಶಾಸಕರನ್ನು ಕರೆದು ಚರ್ಚೆ ಮಾಡೋಣ. ಎಲ್ಲಿ ಅನುಷ್ಠಾನ ಮಾಡಬೇಕು? ಎಷ್ಟು ಶಕ್ತಿ ಕೊಡಬೇಕು? ಎಂಬ ಬಗ್ಗೆ ಅಧಿವೇಶನ ಆದ ಮೇಲೆ ಒಂದು ಸಭೆಯನ್ನು ಕರೆಯೋಣ.

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳುವಾಗ ನಮ್ಮ ಕಾರ್ಯಕ್ರಮ ಜಾಸ್ತಿಯಾಯಿತು ಎಂದು ನೀವು ಹೇಳಬಾರದೂ ಎಂದು. ನಾವೆಂದೂ ಹೇಳುವುದಕ್ಕೆ ಹೋಗೋದಿಲ್ಲ, ನಿಮಗೆ ಹೇಳುವವರು ಬೇರೆ ಇರಬಹುದು, ನಾವು ಇಂತಹ ನಿಮ್ಮ ಕಾರ್ಯಕ್ರಮಗಳು ಆಗುವಾಗ ಶಹಭಾಶ್‌ಗಿರಿ ಕೊಡುತ್ತೇವೆ. ಅದರಲ್ಲಿ ಏನೂ ಅನುಮಾನವಿಲ್ಲ, ಆದ್ದರಿಂದ ಇದೂ ಬಹಳ ಮುಖ್ಯವಾದದ್ದು, ಈ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜುಗಳನ್ನು ತಡೆಹಿಡಿಯುವುದಕ್ಕೆ ಏನು ಕ್ರಮ ಬರಬೇಕು ಮತ್ತು ಇಲ್ಲಿ ಮಾಡುವಂತಹ ಅಕ್ರಮಗಳನ್ನು....

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಹೇಳಿದಾಗಲೇ ನಾನು ಹೇಳಿದೆ, ಏನೆಂದರೆ ಇದರ ಬಗ್ಗೆ ನಾವು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ನಿರ್ಣಯದ ಆಧಾರ ತೆಗೆದುಕೊಂಡು ನಮ್ಮ ಕ್ಯಾಪಿಟೇಶನ್ ಫೀ ಪ್ರಾಹಿಬಿಷನ್ ಆಕ್ಟ್ ಮಸೂದೆ ಏನಿದೆ, ಅದಕ್ಕೆ ಸಮನ್ವಯವಾಗಿ ಈಗಾಗಲೇ ಒಂದು ನಿಯಮಾವಳಿ ಸಿದ್ಧಪಡಿಸಿದ್ದೇವೆ, ನಾನು ಶಿಕ್ಷಣ ಸಚಿವನಿದ್ದಾಗಲೇ ಕ್ಯಾಬಿನೆಟ್ಟಿಗೆ ನಾನು ಇದನ್ನು ತಂದಿದ್ದೇವೆ. Cabinet has deferred it. The Cabinet is going to re-open the subject. ನಾವು ಹೇಳಿದ್ದೇವೆ ಇದು ನೂರು ದಿವಸಗಳ ಕಾರ್ಯಕ್ರಮದಲ್ಲಿ ಇದೆ ಆದ್ದರಿಂದ ಆ ನಿಯಮಾವಳಿಯನ್ನು ಕ್ಯಾಬಿನೆಟ್‌ಗೆ ಆದಷ್ಟು ಜಾಗ್ರತೆ ತಂದು ನಾವು ಒಪ್ಪಿಗೆ ಕೊಡುತ್ತೇವೆ. ಏನು ಕ್ಯಾಪಿಟೇಶನ್ ಫೀ ಬಗ್ಗೆ ತಾವುಗಳು ಎತ್ತಿದ್ದೀರಿ, ಇದಕ್ಕೆ ಸಮರ್ಪಕವಾದ ಉತ್ತರ ಕೊಡಲಿಕ್ಕೆ ಆಮೇಲೆ ಸಾಧ್ಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ಈ ಬಗ್ಗೆ ನಿಮ್ಮ ನಿಲುವು ಸ್ಪಷ್ಟವಾಗಲಿ, ಏನೋ ತಾವು ಮಾಡ್ತೀರಿ ಎಂದು ಹೇಳಿದ್ದೀರಿ ಅದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ, ಇದು ಕಾರ್ಯರೂಪಕ್ಕೆ ಬರಬೇಕು ಅಂತ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ, ನಾವೆಲ್ಲರೂ ಇಲ್ಲಿ ನಿಂತು ಆತ್ಮವಂಚನೆ ಮಾಡಿಕೊಳ್ಳದೆ ಕೆಲಸ ಮಾಡುವ ಅವಶ್ಯಕತೆ ಇದೆ, ಆ ದೃಷ್ಟಿಯಿಂದ ನಾವು ಇಲ್ಲಿ ಬಂದಿರುವುದು ಆದರೆ ಇವತ್ತು ಈ ಮಸೂದೆ ಏನು ತಂದಿದ್ದಾರೆ ಅದನ್ನು ಓದಿದಾಗ, ಕೇಳಿದಾಗ ಇದು ಆತ್ಮವಂಚನೆಯ ಕೆಲಸ ನಡೆಯುತ್ತದೆ ಎಂದು ನಾನಂತೂ ಸ್ಪಷ್ಟವಾಗಿ ಇಲ್ಲಿ ಹೇಳುತ್ತೇನೆ. ನಾನು ಬೇರೆ ಎಲ್ಲಿಂದಲೂ ಪ್ರಾರಂಭಮಾಡುವುದಿಲ್ಲ, ಇವತ್ತು ಈ ಬಿಲನ್ನು ಪೈಲಟ್ ಮಾಡುತ್ತಿರುವವರು ಮಾನ್ಯ ರಾಮಸ್ವಾಮಿಯವರು, ರಾಮಸ್ವಾಮಿಯವರು ಮಲೆನಾಡು ತಾಂತ್ರಿಕ ವಿದ್ಯಾಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ. ಅಲ್ಲಿ ಏನೇನು ನಡೆಯುತ್ತಿದೆ ಎಂದು ನಿರ್ವಂಚನೆಯಿಂದ ಅವರು ಒಂದು ಮಾತನ್ನು ಹೇಳಲಿ, ನೂರು ಭಾರಿ ಹೇಳಬೇಡಿ, ಒಂದು ಅಂಶ ಸತ್ಯ ಹೇಳಿಬಿಟ್ಟರೆ ಸಾಕು. ಅದಾದಮೇಲೆ ನಿಮ್ಮ ಕಾಂಗ್ರೆಸ್‌ನ ಅನೇಕ ಶಾಸಕರು ಒಂದು ಮೆಮೊರಾಂಡ್‌ಮನ್ನು ಪ್ರಧಾನಮಂತ್ರಿಗಳವರೆಗೂ ಈ ಸರ್ಕಾರದಲ್ಲಿ ಏನೇನು ನಡೀತಿದೆ ಅಂತ ಹೋಗಿ ಕೊಟ್ಟಿದ್ದಾರೆ. ಆ ಮೆಮೊರ್‍ಯಾಂಡಮನ್ನು ಡ್ರಾಫ್ಟ್ ಮಾಡುವುದರಲ್ಲಿ ರಾಮಸ್ವಾಮಿಯವರದು ಬಹಳ ಪ್ರಮುಖ ಪಾತ್ರವಹಿಸಿದ್ದಾರೆ. ಅದರಲ್ಲಿ ಪ್ರಮುಖ ಒಂದು ಆರೋಪ ಇರುವುದೆಂದರೆ ಈ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಮಾನ್ಯತೆ ಪಡೆಯದ ಅಂದರೆ ಅವರಿಗೆಷ್ಟು ಪ್ರವೇಶಕ್ಕೆ ಅವಕಾಶ ಇರುತ್ತದೆಯೋ ಅದಕ್ಕಿಂತ ಹೆಚ್ಚಿಗೆ ಪ್ರವೇಶ ಕೊಡಿಸಿ ಮನಸ್ಸು ಬಂದಂತೆ ಕೆಲವು ಪ್ರವೇಶ ಕೊಡಿಸಿದ್ದಾರೆ, ಅದರಲ್ಲಿ ಕೋಟ್ಯಂತರ ರೂಪಾಯಿಗಳ ದುರ್ವ್ಯವಹಾರ ನಡೆಸಿದ್ದಾರೆ ಜೋಬಿಗೆ, ಹೋಗಿದೆ ಎಂದೇ ಪದ ಅಲ್ಲಿ ಬಳಸಿರುವುದು. ಇವತ್ತು ಆ ಮಂತ್ರಿ ಸ್ಥಾನದಲ್ಲಿ ಕುಳಿತು ನೀವೇ ತಯಾರು ಮಾಡಿರುವ ಮೆಮೊರ್‍ಯಾಂಡ್‌ಮನ್ನು ಒಪ್ಪಿ ಸತ್ಯವನ್ನು ಹೇಳಲೇಬೇಕಾಗುತ್ತದೆ. ನೀವು ಆ ಸತ್ಯ ನುಡಿಯುತ್ತೀರೆಂಬ ನಂಬಿಕೆ ನನಗಿದೆ, ನುಡಿಯದಿದ್ದರೆ ಆತ್ಮವಂಚನೆಯನ್ನು ನೀವು ಮಾಡಿಕೊಳ್ತೀರಿ, ಅಥವಾ ಏನೋ ಉದ್ದೇಶಕ್ಕಾಗಿ ಆ ಮೆಮೊರ್‍ಯಾಂಡಮನ್ನು ಕೊಟ್ಟಿರಬಹುದು ಎನ್ನುವ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ.

12-30 P.M

ರಾಜ್ಯದ ಜನತೆ ಕೂಡ ಆ ತೀರ್ಮಾನಕ್ಕೆ ಬರುತ್ತಾರೆ. ಇದಾದಮೇಲೆ ಎಷ್ಟು ದಿವಸ ಬೇಕಾದರೂ ಹೇಳುವಷ್ಟು ಸಾಮಗ್ರಿ, ಸರಕು ಇದರಲ್ಲಿ ಇದೆ. ಅನೇಕ ಮಾನ್ಯ ಮಂತ್ರಿಗಳಾಗಿರತಕ್ಕಂಥವರು, ಮಾನ್ಯ ವೀರಪ್ಪ ಮೊಯಿಲಿಯವರು ಸಮೇತ ಇಂಜಿನಿಯರಿಂಗ್ ಕಾಲೇಜುಗಳಿಗೆ, ಮೆಡಿಕಲ್ ಕಾಲೇಜುಗಳಿಗೆ ಮಾನ್ಯ ಮಂತ್ರಿ ಮಹೋದಯರ ಪತ್ರದ ಮೇಲೆ ಅಡ್ಮಿಶನ್ ಸಿಕ್ಕಿದೆ. ವಿ.ಐ.ಪಿ.ಸೀಟ್ಸ್. ಇಲ್ಲಿ ಬಹಳ ಸ್ವಾರಸ್ಯ ಇದೆ. ಅಲ್ಲಿ ಸಂಸ್ಥೆಗಳನ್ನು ಯಾರು ನಡೆಸುತ್ತಾರೆ, ಅದೇನು ಧರ್ಮ ಸಂಸ್ಥೆಗಳಲ್ಲ. ದುಡ್ಡು ತೆಗೆದುಕೊಂಡು ನಡೆಸುವುದಕ್ಕೆ ಸಂಸ್ಥೆಗಳು ಇರತಕ್ಕಂಥದ್ದು. ಹೌದೇ ಜಾಲಪ್ಪನವರೇ.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ, ವೇದಾಂತ ಹೇಳುವುದು ಬಹಳ ಸುಲಭ. ಪುಸ್ತಕದ ಬದನೆಕಾಯಿ. ಕರ್ನಾಟಕದಲ್ಲಿರುವ ಎಜುಕೇಷನ್ ಪರಿಸ್ಥಿತಿಯನ್ನು ನೋಡಿದರೆ ನೂರಕ್ಕೆ ಎಪ್ಪತ್ತೈದರಷ್ಟು ಪ್ರೈಮರಿ ಸ್ಕೂಲ್‌ಗಳಲ್ಲಿ 13 ಲಕ್ಷ ಪ್ರೈಮರಿ ಸ್ಕೂಲ್‌ಗಳಲ್ಲಿ ಮುಕ್ಕಾಲು ಭಾಗ ಸಿಂಗಲ್ ರೂಮ್ ಕ್ಲಾಸಸ್. ಮುಕ್ಕಾಲು ಭಾಗ ಸಿಂಗಲ್ ಟೀಚರ್‌ಸ್ಕೂಲ್ಸ್. ಕಾಲೇಜುಗಳಲ್ಲಿ ಎಕ್ವಿಪ್‌ಮೆಂಟ್ ಇಲ್ಲ. ಲೈಬ್ರರಿ ಇಲ್ಲ. ಸ್ಪೋರ್ಟ್ಸ್ ಫೀಲ್ಡ್ ಇಲ್ಲ. ಇದನ್ನು ನಾನು ಹೇಳುವುದಿಲ್ಲ. ಕರ್ನಾಟಕ ಸರ್ಕಾರದವರೇ ಇದನ್ನು ಒದಗಿಸಿದ್ದಾರೆ. ಇದು ಸುಪ್ರೀಂ ಕೋರ್ಟ್ ಮುಂದೆ ಇದೆ. ಒಂದು ಸಮಯ ಪ್ರೈವೇಟ್ ಎಜುಕೇಷನಿಸ್ಟ್ ಮುಂದೆ ಬರದಿದ್ದರೆ ಇರಬಹುದು.

ರಾಜಕಾರಣಿಗಳೆಲ್ಲ ಸತ್ಯವಂತರಲ್ಲ ಇವರು. ಅದೇ ರೀತಿ ಕೆಲವು ಇನ್ಸ್‌ಟಿಟ್ಯೂಷನ್ಸ್‌ಗಳೂ ಅಂಡರ್ ಡೀಲಿಂಗ್ಸ್ ಮಾಡಿಕೊಂಡು ಕ್ಯಾಪಿಟೇಶನ್ ಫೀಯನ್ನು ತೆಗೆದುಕೊಳ್ಳುತ್ತಿರಬಹುದು. ಇಲ್ಲ, ಎಂದು ನಾನು ಹೇಳುವುದಿಲ್ಲ. ಆದರೆ ಹುಬ್ಬಳ್ಳಿ, ಬಳ್ಳಾರಿ ಮೆಡಿಕಲ್ ಕಾಲೇಜುಗಳ ಗತಿ ಏನಾಗಿದೆ? ಅದಕ್ಕೆ ಸ್ಟಾಂಡರ್ಡ್ ಇದೆಯೇ? ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಸೊಫಿಸ್ಟಿಕೇಟೆಡ್ ಎಕ್ವಿಪ್‌ಮೆಂಟನ್ನು ಪ್ರೊವೈಡ್ ಮಾಡಿದ್ದಾರೆ ಮತ್ತು ಸರ್ಕಾರ ಏನು ಕೆಲಸವನ್ನು ಮಾಡಬೇಕಾಗಿತ್ತು, ಅದರ ಹತ್ತರಷ್ಟು ಇವತ್ತಿನ ದಿವಸ ಕೆಲಸ ಮಾಡಿ ಜನತೆಗೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೂಡ ಲೇಟೆಸ್ಟ್ ಎಕ್ವಿಪ್‌ಮೆಂಟ್‌ಗಳನ್ನು ತರಿಸಿ ಸ್ಟೂಡೆಂಟ್ಸ್‌ಗೆ ಟ್ರೈನಿಂಗನ್ನು ಕೊಡುತ್ತಿದ್ದಾರೆ. ಸುಮ್ಮನೆ ಏನೂ ಇಲ್ಲದೆ ಕುಳಿತುಕೊಂಡು ಏನೊ ಒಂದು ಸೀಟು ಕೇಳಿದಾಗ ಸಿಕ್ಕಲಿಲ್ಲ ಎಂದು ಹೇಳಿ ಕ್ರಿಟಿಸೈಜ್ ಮಾಡುವುದಕ್ಕೂ ಕೂಡ, ಕಾಲೇಜು ನಡೆಸುವುದಕ್ಕೂ ಬಹಳ ವ್ಯತ್ಯಾಸ ಇದೆ ಅಧ್ಯಕ್ಷಿಣಿಯವರೇ? ಕಾಲೇಜು ನಡೆಸಬೇಕು. ನಾವು ಕಾಲೇಜುಗಳನ್ನು ನಡೆಸುತ್ತಿರುವವರು ದ್ರೋಹಿಗಳೇನಲ್ಲ. ಅಥವಾ ನಾವೇನೂ ಎಲ್ಲಾ ತೆಗೆದುಕೊಂಡು ಹೋಗಿ ಮನೆಯಲ್ಲಿ ಹೆಂಡತಿ ಮಕ್ಕಳನ್ನು ನಾವು ಸಾಕುತ್ತಿಲ್ಲ. ನಾನು ಒಬ್ಬ ಇಲ್ಲಿ ಅಧ್ಯಕ್ಷನಾಗಿ ಕುಳಿತುಕೊಂಡಿದ್ದೇನೆ. ವಿಧಿ ಇಲ್ಲ, ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕು. The some thing is with Mr.Harnahalli Ramaswamy also. ಇವರು ಯಾರು ಇಲ್ಲಿ ಭಾಷಣವನ್ನು ಮಾಡುತ್ತಾರೋ ಅವರು ಸೀಟನ್ನು ಕೇಳಲಿಲ್ಲವೇ? ಸುಮ್ಮನೆ ಏನು ಹುಡುಗಾಟ? ಆಯಿತು, ತೆಗೆದುಕೊಳ್ಳಿ. ನಾನಂತೂ ತಯಾರಾಗಿದ್ದೇನೆ ಇವತ್ತಿನ ದಿವಸ ನಾನು ಸರ್ಕಾರಕ್ಕೆ ಆ ಸಂಸ್ಥೆಯನ್ನು ಹ್ಯಾಂಡ್ ಓವರ್ ಮಾಡುವುದಕ್ಕೆ ತಯಾರಾಗಿದ್ದೇನೆ, Let the Government take over by college.

ಶ್ರೀ ಸಿ. ಬೈರೇಗೌಡ:- ಮಾನ್ಯ ಜಾಲಪ್ಪನವರು ಯಾರನ್ನು ಕುರಿತು ಈ ಮಾತನ್ನು ಹೇಳಿದರೋ ಗೊತ್ತಿಲ್ಲ. ನಾನಂತೂ ಇವರನ್ನು ಯಾವತ್ತು ಸೀಟು ಕೊಡಿ ಎಂದು ಕೇಳಲಿಲ್ಲ.

ಶ್ರೀ ಆರ್.ಎಲ್ ಜಾಲಪ್ಪ:- ನೀವೂ ಕೇಳಿದ್ದೀರಿ. ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಿಮಗೂ ನಮಗೂ ವೈಮನಸ್ಸು ಬಂತು ಸೀಟು ಕೇಳಿದ್ದರಿಂದ. ಒಂದು ಸೀಟು ಕೊಟ್ಟೆ ನಾನು. ಮೊದಲನೆ ವರ್ಷ. ಎರಡನೆಯ ಸೀಟು ಕೊಡಲಿಲ್ಲ. ಅದಕ್ಕೆ ವೈಮನಸ್ಸು ಬಂತು.

(ಗೊಂದಲ)

ಶ್ರೀ ಸಿ. ಬೈರೇಗೌಡ:- ನೋಡಿ. ಅವರು ಲೆಕ್ಕ ಬರೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:- ನೀವೂ ಕೇಳಿದ್ದೀರಿ. ನಾನು ಬೇಕಾದರೆ ಪ್ರಮಾಣ ಮಾಡಿ ಹೇಳುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅಧ್ಯಕ್ಷರೇ, ಇದೇ ತರಹ ಮಾನ್ಯ ಜಾಲಪ್ಪನವರು ಈಗ ಏನು ಹೇಳುತ್ತಿದ್ದಾರೆ, ಇದೇ ರೀತಿ ಅಲ್ಲಿ ನಡೆಯುತ್ತಿರತಕ್ಕಂಥದ್ದು. ಇದು ಇವರ ಸೀಟು, ಅವರ ಸೀಟು ಎಂದು ಹೆಸರುಗಳನ್ನು ಬರೆದುಕೊಳ್ಳತಕ್ಕಂಥದ್ದು ಇದು. ಹಣವನ್ನು ಲೂಟಿ ಮಾಡತಕ್ಕಂಥದ್ದು ಇದೇ ರೀತಿ ನಡೆಯುತ್ತಿರತಕ್ಕಂಥದ್ದು. ಇದಕ್ಕೆ ಸಾಕ್ಷಿ ಬೇರೆ ಕಡೆ ಎಲ್ಲೂ ಬೇಕಾಗಿಲ್ಲ. ನಾನು ಹೇಳುತ್ತಿರುವಂಥದ್ದಕ್ಕೆ ಇಲ್ಲೇ ಸದನದಲ್ಲೇ ಸಾಕ್ಷ್ಯ ಸಿಕ್ಕಿದೆ. ಇವತ್ತಿನ ದಿವಸ ಜಾಲಪ್ಪನವರು ನಡೆಸುತ್ತಿರತಕ್ಕಂಥದ್ದು ಒಪ್ಪಿಕೊಂಡಿದ್ದೇವೆ. ಅವರಿಗೆ ಧನ್ಯವಾದಗಳು. ಏಕೆಂದರೆ...

ಶ್ರೀ ಆರ್.ಎಲ್. ಜಾಲಪ್ಪ:- ನನ್ನ ಶಾಲೆ ಪ್ರಾರಂಭವಾಗಿರತಕ್ಕಂಥದ್ದು 86-87ರಲ್ಲಿ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಆ ಶಾಲೆಯನ್ನು ಕೊಡಿಸಬೇಕಾಗಿದ್ದರೆ ಅದಕ್ಕೆ ನಾನು ಕೂಡ ಕಾರಣ. ಅದನ್ನು ನೀವು ಮರೆತಿದ್ದೀರಿ. ಅದಕ್ಕೆ ನಾನೇನು ಹೇಳಲಿ. ಆ ಕಾಲೇಜನ್ನು ಕೊಡಿಸಬೇಕಾಗಿದ್ದರೆ ನಾನೂ ಕಾರಣ. ಅದನ್ನು ಮರೆತಿದ್ದೀರಿ. ಆ ಪ್ರಶ್ನೆ ಬೇರೆ. ಇವತ್ತು ಜಾಲಪ್ಪನವರು ಹೇಳಿರತಕ್ಕಂಥದ್ದು....

(ಗೊಂದಲ)

ಛೇರ್ಮನ್:- ಬೈರೇಗೌಡರೇ, ನೀವು ಅವರಿಗೆ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿರೆ. ಈಗ ನಿಮ್ಮ ನಿಮ್ಮಲ್ಲೇ ಇಂಟರ್‌ಪ್ಸನ್ಸ್ ಬರುತ್ತಿದೆ. ನೀವು ಮುಂದುವರಿಸಿ. ಇನ್ನೊಂದು ಮೂರು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿ. ಬೈರೇಗೌಡ:- ಇನ್ನು ಬಹಳ ಹೇಳಬೇಕಾಗಿರುವುದು ಇದೆ.

ಛೇರ್ಮನ್:- ನೀವು ಇನ್ನೂ ಪೀಠಿಕೆಯಲ್ಲೇ ಕುಳಿತಿದ್ದೀರಿ.

ಶ್ರೀ ಸಿ. ಬೈರೇಗೌಡ:- ಹೌದೌದು.

CHAIRMAN:- Come to the subject please.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅದಕ್ಕೆ ನಾನು ಪ್ರಾರಂಭದಲ್ಲೇ ಹೇಳಿರತಕ್ಕಂಥದ್ದು ಆತ್ಮವಂಚನೆ ಎಂದು. ನಾನು ಆ ಪದವನ್ನು ಹೇಳಿದ್ದದನ್ನು ನೀವು ಕೇಳಿದರೋ ಇಲ್ಲವೋ? ಹೌದು ಆತ್ಮ ವಂಚನೆ ಮಾಡಿಕೊಳ್ಳುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಆಗಲೇ ನಾನು ಹೇಳುತ್ತಿದ್ದೆ.

ಛೇರ್ಮನ್:- ಮಾನ್ಯತೆ ಪಡೆಯದ ಸಂಸ್ಥೆಗಳ ಬಗ್ಗೆ ಮಾತನಾಡಿ. ಮಾನ್ಯತೆ ಪಡೆದಿರುವಂತಹ ಸಂಸ್ಥೆಗಳನ್ನೆಲ್ಲಾ ತೆಗೆದುಕೊಂಡು ಹೇಳಿದ್ದನ್ನೇ ಹೇಳುತ್ತಾ ಇದ್ದರೆ ಎಲ್ಲಿಯವರೆಗೂ ಸಮಯ ಸಾಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ:- ನೀವು ಆ ಬಿಲ್ಲನ್ನು ನೋಡಿ. ಮಾನ್ಯತೆ ಪಡೆಯದೇ ಇರತಕ್ಕಂಥಹವು ಮತ್ತು ಈಗ ಅಕ್ರಮವಾಗಿ ಏನು ಪ್ರವೇಶ ಪಡೆದಿದ್ದಾವೆ, ಅದೂ ಕೂಡ ಮುಖ್ಯವಾಗಿ ಅಕ್ರಮವಾಗಿ ಏನು ಪ್ರವೇಶ ಪಡೆಯುತ್ತಾ ಇವೆ ಅದು ಮುಖ್ಯವಾಗಿ ಇದೆ. ಆದ್ದರಿಂದ ಆ ವಿಚಾರವನ್ನೆಲ್ಲಾ ಪ್ರಸ್ತಾಪ ಮಾಡಬೇಕಾಗಿದೆ. ನಾನು ಹೇಳುತ್ತಾ ಇದ್ದೆ. ಇವು ಯಾವುದೂ ಧರ್ಮ ಸಂಸ್ಥೆ ಅಲ್ಲ ಎಂದು. ಮಾನ್ಯ ಜಾಲಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅನೇಕ ಖಾಸಗಿ ಕಾಲೇಜುಗಳು ಏನು ಇವೆ ಅವು ಚೆನ್ನಾಗಿ ನಡೆಯುತ್ತಾ ಇವೆ. ಅದರೊಳಗೆ ಜಾಲಪ್ಪನವರ ಜೊತೆಗೆ ಸಹಮತ ಇದೆ. ಇವತ್ತು ಸರ್ಕಾರದ ಮೆಡಿಕಲ್ ಕಾಲೇಜು ಹುಬ್ಬಳ್ಳಿಯಲ್ಲಿದೆ, ಅದರ ಗತಿ ಏನಾಗಿದೆ? ಏನು ಆಗಿದೆ ಹುಬ್ಬಳ್ಳಿ ಮೆಡಿಕಲ್ ಕಾಲೇಜು? ಬಳ್ಳಾರಿ ಮೆಡಿಕಲ್ ಕಾಲೇಜು ಏನು ಆಗಿದೆ. ಇಲ್ಲಿ ಚರ್ಚೆ ಆಗಿದೆ. ಎಷ್ಟು ಬೋಧಕರ ವರ್ಗ ಇರಬೇಕಾಗಿತ್ತೋ ಯಾವ ವರ್ಷವೂ ಇಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜಾಗಲಿ ಅಥವಾ ಹುಬ್ಬಳ್ಳಿ ಮೆಡಿಕಲ್ ಕಾಲೇಜಾಗಲಿ ಬೋಧಕ ವರ್ಗ ಇಲ್ಲವೇ ಇಲ್ಲ. ಅವರನ್ನು ನೀವು ವೈದ್ಯರನ್ನಾಗಿ ತಯಾರು ಮಾಡಿ ತಂದು ಬಿಟ್ಟರೆ ಅವರು ಎಷ್ಟು ಜನರ ಪ್ರಾಣ ಉಳಿಸುವುದಕ್ಕೆ ಬದಲು ಎಷ್ಟು ಜನರ ಪ್ರಾಣ ತೆಗೆಯುತ್ತಾರೋ ಗೊತ್ತಿಲ್ಲ. ಅವರು ಔಷಧಿಗೆ ಚೀಟಿ ಬರೆದುಕೊಡುವುದಕ್ಕೆ ಬದಲಾಗಿ ಯಮನ ಹತ್ತಿರ ಚೀಟಿ ಬರೆದುಕೊಡತಕ್ಕಂಥ ಡಾಕ್ಟರ್‌ಗಳನ್ನು ತಯಾರು ಮಾಡತಕ್ಕಂಥ ಈ ಸರ್ಕಾರಿ ಕಾಲೇಜುಗಳು ಇವತ್ತು ಇವೆ. ಅದು ಬೇರೆ ಕಡೆ. ಆದರೆ ಇವತ್ತು

ಇಲ್ಲಿರತಕ್ಕಂಥದ್ದು ಏನು ಎಂದರೆ ಈ ಮಂತ್ರಿ ಮಹೋದಯರಿಂದ ಅನೇಕ ಕಡೆ ಇವತ್ತಿನ ದಿವಸ ಲೆಟರ್ ಹೋಗಿದೆ ಹೋಗಲಿ ಕೊಡಲಿ. ನಮ್ಮ ಹತ್ತಿರ ಕೂಡ ಬರುತ್ತಾರೆ, ಸೀಟು ಕೊಡಿಸಪ್ಪ ಎಂದು ಹೇಳುತ್ತಾರೆ. ಅದೇ ತರಹ ಮಂತ್ರಿಗಳ ಹತ್ತಿರ ಕೂಡ ಹೋಗುತ್ತಾರೆ. ಹೋಗಲಿ, ಅದು ಈ ನಮ್ಮ ಸಮಾಜದಲ್ಲಿ ಇವೆಲ್ಲ ಇಲ್ಲ ಎಂದು ಒಪ್ಪಿಕೊಂಡರೆ, ಅದೂ ನಾನು ಮೊದಲೇ ಒಪ್ಪಿಕೊಂಡ ಹಾಗೆ ಆತ್ಮವಂಚನೆ ಆಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಸ್ವಾಮಿ ಏನು ನಡೆಯುತ್ತದೆ ಎಂದರೆ ಹಣವಿಲ್ಲ ಇಲ್ಲಿ ವಸೂಲಿ ಮಾಡಿಕೊಳ್ಳುತ್ತಾರೆ. ಆ ಇನ್‌ಸ್ಟಿಟ್ಯೂಷನ್ಸ್‌ಗೂ ಹಣ ಹೋಗುವುದಿಲ್ಲ. ಯಾವ ಇನ್‌ಸ್ಟಿಟ್ಯೂಷನ್‌ಗೆ ಇವರು ಅಡ್ಮಿಶನ್ಸ್ ಕೊಟ್ಟಿರುತ್ತಾರೋ ಅಲ್ಲಿಗೂ ಕೂಡ ಹೋಗುವುದಿಲ್ಲ. ವಸೂಲಿ ನಡೆಯುತ್ತದೆ. ಅದಕ್ಕೋಸ್ಕರ ಇದೆಲ್ಲಾ ಹೊರಗಡೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕಾಗುತ್ತದೆ. ಈ ಸದನದ ಸಮಿತಿ ಆಗಬೇಕು. ಒಂದು ಕಡೆ ಆ ಸಂಸ್ಥೆಗಳಲ್ಲಿ ಲೂಟಿ ಆದರೆ, ಈ ಮಧ್ಯಸ್ಥಗಾರರದ್ದು ಒಂದು ಕಡೆ ಲೂಟಿ. ಒಂದೊಂದು ಅಡ್ಮಿಶನ್ ಸೀಸನ್ಸ್ ಬಂತು ಕೆಲವರು ಅಂದರೆ ಕೋಟಿಗಟ್ಟಲೆ ಹಣ ಮಾಡಿರತಕ್ಕವರೂ ಇದ್ದಾರೆ. ಈ ವ್ಯವಸ್ಥೆಯಲ್ಲಿ ಆದ್ದರಿಂದ ಮಾನ್ಯ ರಾಮಸ್ವಾಮಿಯವರು ಏನು ಬಿಲ್ಲನ್ನು ತಂದಿದ್ದಾರೆ, ಈ ಬಿಲ್ಲು ಸುಮ್ಮನೇ ಕಾಗದದಲ್ಲಿ ಇರುತ್ತದೆ ಅಷ್ಟೇ, ಈ ಕಾಗದದ ಹುಲಿಗೆ ಯಾರೂ ಗೌರವ ಕೊಡುವುದಿಲ್ಲ. ಈ ಕಾಗದದ ಹುಲಿಗೆ ಅಧಿಕಾರ ನಡೆಸತಕ್ಕವರೇ ಅಡ್ಮಿಶನ್‌ಗೆ ಅವಕಾಶ ಕೊಡುತ್ತೀರಿ. ಸ್ವಾಮಿ ಎಕ್ಸಸ್ ಅಡ್ಮಿಶನ್ಸ್ ಹೇಗೆ ಸಿಗುತ್ತದೆ? ನೀವೇ ಹೇಳುತ್ತೀರಿ. ರೀ ಕೊಡಿರಿ, ನಾವು ಅಪ್ರೂವಲ್ ಮಾಡಿಸುತ್ತೇವೆಂದು, ಇಲ್ಲದಿದ್ದರೆ ಅವರಿಗೆ ಹೇಗೆ ಸಿಗುತ್ತದೆ. ಹೌದೇ? ಎಕ್ಸಸ್ ಅಡ್ಮಿಶನ್ಸ್ ಬಗ್ಗೆ ಇವರನ್ನು ಅಡ್ಮಿಟ್ ಮಾಡಿಕೊಳ್ಳಿರಿ ನಾವು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು ಮೇಲಿಂದಲೇ ಆದೇಶ ಬರುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ:- ನನ್ನ ಮಟ್ಟಿಗೆ ಹೇಳುವುದಾದರೆ ಯಾರು ಎಕ್ಸಸ್ ಅಡ್ಮಿಶನ್ ಮಾಡಿ ಎಂದು ಹೇಳಿಲ್ಲ, ನಾನು ಎಕ್ಸಸ್ ಅಡ್ಮಿಶನ್ಸ್ ಮಾಡಿಕೊಂಡಿಲ್ಲ. ನನಗೆ ಯಾವ ಮಂತ್ರಿಯೂ ಹೇಳಿಲ್ಲ, ನಾನು ಮಾಡಿಕೊಳ್ಳುತ್ತಲೂ ಇಲ್ಲ.

ಶ್ರೀ ಸಿ. ಬೈರೇಗೌಡ:- ಇವತ್ತು ಇರತಕ್ಕ ವ್ಯವಸ್ಥೆ ಬಗ್ಗೆ ಹೇಳುತ್ತಿದ್ದೇನೆ. ಹಾಗಾದರೆ ಇವತ್ತಿನ ದಿವಸ ಎಕ್ಸಸ್ ಅಡ್ಮಿಶನ್ ಅನೇಕ ಕಾಲೇಜುಗಳಲ್ಲಿ ಆಗಿವೆ. ಕೆಲವು ರೆಗ್ಯುಲರೈಸ್ ಮಾಡಿದ್ದಾರೆ, ಕೆಲವನ್ನು ರೆಗ್ಯುಲರೈಸ್ ಮಾಡಿಲ್ಲ. ರೆಗ್ಯುಲರೈಸ್ ಮಾಡದೇ ಇರುವುದಕ್ಕೆ ಕೂಡ ಕಾರಣ ಇದೆ. ಏಕೆಂದರೆ ಇವರ ಸ್ಕೇಲ್‌ಗೆ ಅವರು ಬಂದಿರುವುದಿಲ್ಲ. ಅಷ್ಟೇ ಅಲ್ಲ ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದ ಮುಂದೆ ಒಂದು ಸಮಿತಿ ವರದಿ ಇದೆ. ಈ ಸಮಿತಿ ವರದಿಯಲ್ಲಿ ಏನು ಹೇಳುತ್ತದೆ? ಹೊರ ರಾಜ್ಯಗಳಿಂದ ಬಂದ, ಹೊರ ದೇಶಗಳಿಂದ ಬಂದಿರತಕ್ಕ ವಿದ್ಯಾರ್ಥಿಗಳು ಏನು ಇದ್ದಾರೆ. ಆ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಖೋಟಾದಲ್ಲಿ ಬೋಗಸ್, ಏನು ಫೋರ್ಜರಿ ಕಾಗದದ ಮೇಲೆ, ಫೋರ್ಜರಿ ಟೆಲೆಕ್ಸ್ ಮೇಲೆ ಇಲ್ಲಿ ಅವರಿಗೆ ಪ್ರವೇಶ ದೊರಕಿದೆ. ಇದೇನು ಕಡಿಮೆ ವ್ಯವಹಾರವೇ? ಇದು ಇಂಟರ್‌ನ್ಯಾಶನಲ್ ಚೀಟಿಂಗ್. ಹೀನಾಯಕರವಾದಂಥ ರೀತಿಯಲ್ಲಿ, ಹೀನಾಯಕರವಾದಂಥ ವ್ಯವಸ್ಥೆ ಇಲ್ಲಿದ್ದರೂ ಸಹ ಏನೂ ಕ್ರಮ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳಾಗುವುದಕ್ಕಿಂತ ಮೊದಲೇ ಮೇಜರ್ ಸರ್ಜರಿ ಎಂದು ಮೊಧಲೇ ಹೇಳಿದ್ದರು. ಸಮಿತಿಯ ವರದಿ ಇದೆ. ಅದು ಕೇವಲ ಒಬ್ಬ ವ್ಯಕ್ತಿ ಕೊಟ್ಟಿರತಕ್ಕಂಥ ವರದಿ ಅಲ್ಲ. ಎರಡೂ ಸದನಗಳ ಸದಸ್ಯರುಗಳು ಸೇರಿದಂತಹ ಸಮಿತಿ. ಅದು ಒಂದು ಪಕ್ಷದ ಸದಸ್ಯರು ಕೊಟ್ಟಿರತಕ್ಕಂಥ ವರದಿ ಅಲ್ಲ. ಎಲ್ಲಾ ಪಕ್ಷದ ಸದಸ್ಯರೂ ಸಹ ಆ ಸಮಿತಿಯಲ್ಲಿದ್ದಾರೆ. ಆಡಳಿತ ಪಕ್ಷದ ಸದಸ್ಯರೂ ಸಹ ಸಮಿತಿಯಲ್ಲಿದ್ದಾರೆ. ಇವರೆಲ್ಲರೂ ಅವಿರೋಧವಾಗಿ ಕೊಟ್ಟಿರತಕ್ಕ ವರದಿ. ಇದರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ. ಅದಕ್ಕೆ ಇದು ಒಂದು ಕಾಗದದ ಹುಲಿಯೆಂದು ನಾನು ಹೇಳಿದ್ದುದು. ಈ ಕಾಗದದ ಹುಲಿಯನ್ನು ಮಾಡಿಕೊಂಡು ಜನರ ಕಣ್ಣಿಗೆ ಮಣ್ಣನ್ನು ಎರೆಚುವಂತಹ ಮಸೂದೆಯನ್ನು ಇವತ್ತು ನೀವು ತಂದಿದ್ದೀರಿ. ಈ ಮಸೂದೆಯನ್ನು

ತರುವ ಬದಲು ಸರ್ಕಾರ ದಿಟ್ಟವಾದಂತಹ ಹೆಜ್ಜೆಯನ್ನು ಇಡಬೇಕಾಗಿತ್ತು. ನಮ್ಮ ಎದುರಿಗೆ ವರದಿ ಇದೆ, ಈ ವರದಿ ಸದನದ ಸ್ವತ್ತಾಗಿದೆ. ಇದೊಂದು ಉದಾಹರಣೆ ಮಾತ್ರ. ಪ್ರತಿಯೊಂದು ಕಾಲೇಜಿನಲ್ಲಿಯೂ ಕೂಡ ನಡೆದಿದೆ. ಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದರು. ಕಾಲಿಗೆ ಚಪ್ಪಲಿ ಇಲ್ಲದೇ ಇದ್ದವರು ಇವತ್ತು ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಬೆಂಗಳೂರಿನಲ್ಲಿ ಸಂಪಾದನೆ ಮಾಡಿ, ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡುತ್ತಿದ್ದಾರೆ. ಯಾರು ಕೋಟ್ಯಾಂತರ ರೂಪಾಯಿಗಳನ್ನು ಅಕ್ರಮವಾಗಿ ಸಂಪಾದನೆ ಮಾಡಿರತಕ್ಕಂಥವರು ಇದ್ದಾರೆ, ಇವರ ಮೇಲೆಲ್ಲಾ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆ ರೀತಿ ಕ್ರಮ ತೆಗೆದುಕೊಂಡಿದ್ದರೆ ನೀವು ಈ ಬಿಲ್ಲನ್ನು ತಂದಿರತಕ್ಕಂಥ ಉದ್ದೇಶ ಹೌದು ಇದು ಆತ್ಮವಂಚನೆ ಅಲ್ಲ, ಎನ್ನತಕ್ಕಂಥ ಭಾವನೆ ನನಗಾದರೂ ಕೂಡ ಬರುತ್ತಿತ್ತು. ರಾಜ್ಯದ ಜನತೆಯಾದರೂ ನಂಬುತ್ತಿದ್ದರು. ನೀವು ವಂಚನೆಯ ಕೆಲಸವನ್ನು ಮಾಡಬೇಡಿ. ಇವತ್ತು ನಿಮ್ಮ ಉದ್ದೇಶ ಏನಿದೆ, ನಾನು ಖಾಸಗಿ ಕಾಲೇಜುಗಳು ಖಾಸಗಿ ಸಂಸ್ಥೆಗಳು ಬರಬಾರದೆಂದು ಹೇಳತಕ್ಕವನು ಅಲ್ಲ. ಜಾಲಪ್ಪನವರ ಅನೇಕ ಅಂಶಗಳನ್ನು ಒಪ್ಪದೇ ಇದ್ದರೂ ನಾನು ಈ ಅಂಶವನ್ನು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಅದು ವ್ಯವಸ್ಥಿತವಾದಂತಹ ರೀತಿಯಲ್ಲಿ ಕಾಲೇಜನ್ನು ನಡೆಸತಕ್ಕಂಥವರು ಇದ್ದಾರೆ. ಆದರೆ, ಹಣದ ವ್ಯವಹಾರ ಸಂಸ್ಥೆಗಳಿಗೆ ಸರಿಯಾಗಿ ಹೋಗಬೇಕು. ಆ ಸಂಸ್ಥೆಗೆ ಹೋಗುವುದಕ್ಕೆ ಬದಲಾಗಿ ನಮ್ಮಂತವರ ಜೇಬಿಗೆ ಹೋಗುತ್ತದಲ್ಲ ಅದಕ್ಕೆ ನನ್ನ ಆಕ್ಷೇಪ ಇರತಕ್ಕಂಥದ್ದು ಆ ರೀತಿಯಾಗಿ ನೀವು ಅವಕಾಶವನ್ನು ಕೊಡದೆ ಈ ಕಾನೂನನ್ನು ಉಪಯೋಗಿಸಿ, ಈ ಮಸೂದೆ ಇಲ್ಲದೆ ನೀವು ಅದರ ಮೇಲೆ ಕ್ರಮ ತೆಗೆಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನವುದು ಏನಿಲ್ಲ. ನಮ್ಮ ವರದಿ ಇದೆ. ಇವತ್ತು ಅಲ್ಲಿ ಫೋರ್ಜರಿಯಾಗಿದೆ. ಕೇಂದ್ರ ಸರ್ಕಾರದ ಟೆಲೆಕ್ಸ್ ಫೋರ್ಜರಿ ಆಗಿದೆ ಅದರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೂ ಸಹ ಇವತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ನಿಮ್ಮ ಉದ್ದೇಶ ಏನು ಎನ್ನತಕ್ಕದ್ದು ಇದರಿಂದ ಸಾಬೀತವಾಗುತ್ತಿದೆ. ಆದರಿಂದ ಆತ್ಮವಂಚನೆಯ ಕೆಲಸವನ್ನು ಬಿಟ್ಟು ನೇರವಾಗಿ ಎಲ್ಲೆಲ್ಲಿ ಅಕ್ರಮ ನಡೆದಿದೆ ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರದವರು ಹೇಳಬೇಕಾಗಿತ್ತು. ಅದರಲ್ಲೂ ಪ್ರಮುಖವಾಗಿ ಮಾನ್ಯ ರಾಮಸ್ವಾಮಿಯವರು ಹೇಳಬೇಕಾಗಿತ್ತು. ಏಕೆಂದರೆ ಅವರು ಕೊಟ್ಟಿರತಕ್ಕಂಥ ಮೇಮೊರಾಂಡಂ ಅನ್ನು ಡ್ರಾಫ್ಟ್ ಮಾಡಿರತಕ್ಕಂಥವರು ಇವರೇ. ನನಗಿಂತ ಹೆಚ್ಚಿಗೆ ವಿಚಾರ ಅವರಿಗೆ ಗೊತ್ತಿದೆ. ಆದರಿಂದ ಇವತ್ತು ಮಂತ್ರಿಗಳಾಗಿ ಬಂದು ಕುಳಿತ್ತಿದ್ದಾರೆ. ಅವರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಬೇಕು. ಹಾಗೆ ಹೇಳದೆ ಇದ್ದರೆ ಇದೊಂದು ಆತ್ಮವಂಚನೆಯ ಕೆಲಸವೆಂದು ಒತ್ತಿ ಒತ್ತಿ ಹೇಳಿ, ಈ ಮಸೂದೆಯನ್ನು ವಿರೋಧಿಸಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ):- ಇವತ್ತಿನ ದಿವಸ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿರತಕ್ಕಂಥ ಬಿಲ್ಲನ್ನು ನಾನು ವಿರೋಧಿಸುತ್ತಾ ಮಾತನಾಡುತ್ತೇನೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಯಾವುದಾದರೂ ಒಂದು ಬಿಲ್, ಯಾವುದಾದರೂ ಒಂದು ಕಾಯಿದೆ ಮಾಡಿದ ಮೇಲೆ ಕಾಯಿದೆಯನ್ನು ನಾವು ಅನುಷ್ಠಾನಕ್ಕೆ ತರುವುದು ಬಹಳ ಮಹತ್ವದ್ದು. ನಿಜವಾಗಿಯೂ ಅದು ಸತ್ಯ. ಇವತ್ತಿನ ದಿವಸ ಒಂದು ಕಾಯಿದೆಯನ್ನು ಮಾಡಿ ಆ ಕಾಯಿದೆ ಅನುಷ್ಠಾನಕ್ಕೆ ಬರದೇ ಇದ್ದಲ್ಲಿ ನಾವು ಮಾಡಿದ್ದಾದರೂ ಏನು ಪ್ರಯೋಜನ? ಇವೊತ್ತಿನ ದಿವಸ ತಾವು ತಂದಿರುವಂಥ ಈ ಒಂದು ಮಸೂದೆ ಬಹಳ ಮಹತ್ವದ್ದಾಗಿದೆ. ಏಕೆಂದರೆ, ರಾಜ್ಯದ ನಾನಾ ಭಾಗಗಳಲ್ಲಿ ಕಿಂಡರ್‌ಗಾರ್ಟನ್‌ನಿಂದ ಹಿಡಿದು ಮೆಡಿಕಲ್ ಕಾಲೇಜ್‌ವರೆಗೆ ಅನುಮತಿ ಪಡೆಯದೆ ಶಾಲಾ-ಕಾಲೇಜುಗಳನ್ನು ನಡೆಸುತ್ತಿರುವುದು ಹಾಗೂ ಇನ್ಸ್‌ಟಿಟ್ಯೂಷನ್‌ಗಳನ್ನು ಸಹ ಹೆಚ್ಚು ಮಾಡುತ್ತಿರುವಂಥಾದ್ದನ್ನು ತಾವು ನೋಡುತ್ತಿದ್ದೀರಿ. ಒಂದು ಮಾತನ್ನು ತಮ್ಮಲ್ಲಿ

ಕೇಳಬಯಸುತ್ತೇನೆ. ಯಾವುದೇ ಒಂದು ಕಾಲೇಜಿಗೆ ಅನುಮತಿ ಕೊಡಬೇಕಾದರೆ ಯೂನಿವರ್ಸಿಟಿಯಿಂದ ಒಂದು ಆಥರೈಜೇಷನ್ ಮೊದಲು ಬೇಕಾಗುತ್ತದೆ. ಇದು ತುಂಬಾ ಮಹತ್ವವಾದುದು. ಆದರೆ, ಇದನ್ನು ಬಿಟ್ಟು ತನಗೆ ಬೇಕಾದಂಥ ಕಾಲೇಜುಗಳಿಗೆ ಅನುಮತಿ ಕೊಡಬೇಕೆಂದು, ಆ ಕಾರಣ ಆಥರೈಜೇಷನ್ ಕೊಡಬೇಕೆಂದು ಸರ್ಕಾರದವರೇ ಕೇಳುತ್ತಿರುವುದು ಇದೆಂಥ ನ್ಯಾಯ? ತಮಗೆ ಗೊತ್ತಿರುವಂತೆ ಹೋದ ವರ್ಷ 4-5 ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜುಗಳಿದ್ದವು. ಧಾರವಾಡ ಯೂನಿವರ್ಸಿಟಿ ಹಾಗೂ ಬೆಂಗಳೂರು ಯೂನಿವರ್ಸಿಟಿಗೆ ಸರ್ಕಾರ ನಿವೇಶನ ಕೊಟ್ಟಿದೆ. "The Government has decided to give the sanction for the following colleges. The necessary affiliation may be given." ಯಾವುದನ್ನು ಮೊದಲು ಮಾಡಬೇಕೋ ಅದನ್ನು ಬಿಟ್ಟು ಯಾವುದೋ ಇನ್ಸ್‌ಟಿಟ್ಯೂಷನ್ ಅನ್ನು ಪ್ರಾರಂಭ ಮಾಡುತ್ತೇವೆನ್ನತಕ್ಕಂಥ ಮನೋಧೈರ್ಯ ಸರ್ಕಾರಕ್ಕೆ ಏಕಿದೆ ಎಂದು ಕೇಳುತ್ತಿದ್ದೇನೆ. ಇಲ್ಲಿಯವರೆಗೂ ಸರ್ಕಾರ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಯಾವುದೇ ತರಹದ ದಿಟ್ಟ ನಿರ್ಣಯ ತೆಗೆದುಕೊಂಡಿಲ್ಲ. ಈಗಾಗಲೇ ನಡೆಸುತ್ತಿರತಕ್ಕಂಥ ಅನ್‌ರೆಕಗ್ನೈಸ್ಡ್ ಸ್ಕೂಲುಗಳ ಮುಂದಿನ ಪರಿಸ್ಥಿತಿ ಏನು? ವಿದ್ಯಾರ್ಥಿಗಳು ಏನು ಮಾಡಬೇಕು? ಇದರ ಬಗ್ಗೆ ಇಲ್ಲಿಯ ತನಕವೂ ಸರ್ಕಾರ ಯಾವೊಂದು ನಿರ್ಣಯವನ್ನು ತೆಗೆದುಕೊಂಡಿಲ್ಲ. ಹೀಗಾಗಿ ದಿನೇದಿನೇ ಅನ್‌ರೆಕಗ್ನೈಸ್ಡ್ ಸ್ಕೂಲುಗಳು ಏಳುತ್ತಿವೆ. ಹೋದ ವರ್ಷ ಧಾರವಾಡದ ಬಾಂಬೆ-ಕರ್ನಾಟಕ ಪ್ರದೇಶದಲ್ಲಿ ಒಮ್ಮೆಲೇ 5 ಬಿ.ಎಡ್. ಕಾಲೇಜುಗಳು ಬಂದವು. ಈ 5 ಕಾಲೇಜುಗಳಿಗೂ ಯುನಿವರ್ಸಿಟಿಯವರು ಆಥರೈಜೇಷನ್ ಕೊಟ್ಟಿಲ್ಲ, ಶಿಫಾರಸ್ಸು ಸಹ ಮಾಡಿಲ್ಲ. ಆದರೆ, ಕೊನೆಯ ಹಂತದಲ್ಲಿ ಆ ಕಾಲೇಜುಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿತು. ಈಗಾಗಲೇ ಕಾಲೇಜು ಪ್ರಾರಂಭವಾಗಿರುವುದರಿಂದ ಪರೀಕ್ಷೆಗೆ ಕೂಡುವುದಕ್ಕೆ ಅನುಮತಿ ಕೊಡಬೇಕೆಂದು ಅವರು ಕೋರ್ಟಿಗೆ ಹೋಗಿದ್ದರಿಂದ ಸರ್ಕಾರ ಅನುಮತಿ ಕೊಟ್ಟಿತು. ಹೀಗಾಗುವುದರಿಂದ ಏನಾಗುತ್ತದೆಂದರೆ, ಯಾರು ನ್ಯಾಯವಾದ ರೀತಿಯಿಂದ ನಡೆಯುತ್ತಾರೋ ಅವರಿಗೆ ನ್ಯಾಯ ಸಿಗುವುದಿಲ್ಲ, ಯಾರು ಅನ್ಯಾಯದ ಹಾದಿ ಹಿಡಿಯುತ್ತಾರೋ, ಅವರಿಗೆ ಲಾಭ ಸಿಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವಂಥ ಪ್ರಸಂಗವೂ ಬರುತ್ತದೆ. ಇವೊತ್ತು ಅನ್‌ರೆಕಗ್ನೈಜಸ್ಡ್ ಸ್ಕೂಲುಗಳನ್ನು ನಡೆಸುತ್ತಿದ್ದು, ಸರ್ಕಾರ ಇದಕ್ಕೆ ಮುಂದೊಂದು ದಿನ ಪರ್ಮಿಶನ್ ಕೊಡುತ್ತದೆನ್ನುವ ಉದ್ದೇಶದಿಂದ ವಿದ್ಯಾರ್ಥಿಗಳು ಅಂತಹ ಕಾಲೇಜುಗಳಿಗೆ ಹೋಗುತ್ತಾರೆ. ಈಗಾಗಲೇ ತಾವು ಹೇಳಿರುವಂತೆ, ಸೆಕ್ಷನ್ 5ರ ಪ್ರಕಾರ ಯೂನಿವರ್ಸಿಟಿಯಿಂದ ಅನುಮತಿ ಪಡೆಯದಿರುವ, ಅನ್‌ರೆಕಗ್ನೈಜಸ್ಡ್ ಕಾಲೇಜುಗಳು ಇಷ್ಟು ಇವೆ ಎಂದು. ಈ ಕಾಲೇಜುಗಳಲ್ಲಿ ಪ್ರವೇಶ ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ. ಇಷ್ಟಾದರೂ ಯೂನಿವರ್ಸಿಟಿಯಿಂದ ಪೇಪರ್ ಪಬ್ಲಿಸಿಟಿ ಕೊಟ್ಟಿದ್ದರೂ, ಸರ್ಕಾರದಿಂದ ಪಬ್ಲಿಸಿಟಿ ಕೊಟ್ಟಿದ್ದೂ ಸಹ ಸೆಕ್ಷನ್ 5ರ ಪ್ರಕಾರ ನೀವು ಏತಕ್ಕೆ ಇನ್‌ಕಾರ್ಪೊರೇಟ್ ಮಾಡಿದ್ದೀರಿ? ಸರ್ಕಾರಕ್ಕೆ ಗೊತ್ತಿಲ್ಲದೆ ಈ ರೀತಿ ಮಾಡಿದ್ದರೆ ನಾನು ಕೇಳುತ್ತಿರಲಿಲ್ಲ. ಅಲ್ಲದೆ, ಇಂಥಿಂಥ ಕಾಲೇಜುಗಳು ರೆಕಗ್ನೈಷನ್ ಪಡೆದಿವೆ, ಪಡೆದಿಲ್ಲ, ಇಂಥಿಂಥ ಕಾಲೇಜುಗಳಲ್ಲಿ ಕಲಿಯಬೇಕು, ಬೇರೆ ಕಡೆ ಕಲಿಯಬಾರದೆಂದು ಯೂನಿವರ್ಸಿಟಿಯವರು ಆದೇಶ ಕೊಟ್ಟಿದ್ದಾರೆ. ಅಷ್ಟಿದ್ದರೂ ಸಹ ಸರ್ಕಾರ ಲೂಪ್‌ಹೋಲ್ ಮಾಡಿ ಅವರಿಗೆ ಸ್ಕೋಪ್ ಕೊಡುತ್ತಿದೆ. ಅಲ್ಲದೆ, ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಕೂಡ ಯಾರು ಒಳ್ಳೆಯ ವ್ಯವಹಾರ ಮಾಡುವುದಿಲ್ಲವೋ ಅವರ ಜೊತೆ ಸರ್ಕಾರದವರು ಶಾಮೀಲಾಗಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಆದಕಾರಣ, ಸೆಕ್ಷನ್ 5 ಅನ್ನು ತೆಗೆದುಹಾಕಬೇಕು. ಅಷ್ಟೇ ಅಲ್ಲ ಏನು ಒಂದು ಮಸೂದೆ ತಂದಿದ್ದೀರಿ, ಇದು ಒಳ್ಳೆಯ ಮಸೂದೆಯಾಗಿದ್ದು, ಇದೇ ರೀತಿ ಸರ್ಕಾರ ಅನುಷ್ಠಾನ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):- ಈ ಶಿಕ್ಷಣ ಕ್ಷೇತ್ರದ ತಿದ್ದುಪಡಿ

ಮಸೂದೆಯನ್ನು ಪ್ರಸ್ತಾಪ ಮಾಡುತ್ತಾ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಮತ್ತು ಶ್ರೀ ಸಿ. ಬೈರೇಗೌಡರು ಯಾವುದೋ ಒಂದು ಟೆಲೆಕ್ಸ್ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ನೀಡಿದ್ದಾರೆ, ಇದು ಅಕ್ರಮವಾದಂಥ ಪ್ರವೇಶಾವಕಾಶ. ಈ ಅಕ್ರಮ ಪ್ರವೇಶಾವಕಾಶದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಬಿದ್ದಿದೆ ಎನ್ನತಕ್ಕಂಥ ಒಂದು ಸಂಶಯದ ಮಾತನ್ನು ಹೇಳಿದ್ದಾರೆ. ನಾನು ಆ ಸಂದರ್ಭದಲ್ಲಿ ಆರೋಗ್ಯ ಮಂತ್ರಿಯಾಗಿದ್ದೆ. ಆದುದರಿಂದ, ಸದನಕ್ಕೆ ಸರಿಯಾದಂಥ ರೀತಿಯಲ್ಲಿ ಮಾಹಿತಿ ಕೊಡತಕ್ಕಂಥಾದ್ದು ನನ್ನ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಟೆಲೆಕ್ಸ್ ಆಧಾರದ ಮೇಲೆ ಪ್ರವೇಶಾವಕಾಶ ಕೊಟ್ಟಿದ್ದರಿಂದ ಇದು ಸರ್ಕಾರದ ಗಮನಕ್ಕೆ ತಕ್ಷಣ ಬಂದು, ಈ ವಿಚಾರವಾಗಿ ಮೇಲ್ಮನೆಯಲ್ಲಿ ಚರ್ಚೆಗೆ ಬಂದ ತಕ್ಷಣ ಸರ್ಕಾರ ಸಂಬಂಧಪಟ್ಟವರ ಮೇಲೆ ಕೂಡಲೇ ಕ್ರಮ ತೆಗೆದುಕೊಂಡಿದೆ. ಅಲ್ಲದೆ, ಆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿ ವಿರುದ್ಧ ತನಿಖೆ ನಡೆಸುವುದಕ್ಕೆ ಮುಖ್ಯಮಂತ್ರಿಗಳ ಮುಖಂಡತ್ವದಲ್ಲಿ ಒಂದು ತನಿಖಾ ಸಮಿತಿಯನ್ನು ಸಹ ರಚಿಸಲಾಗಿದೆ. ಮತ್ತು ಪ್ರವೇಶವನ್ನು ಕೊಟ್ಟಂಥ ಎಲ್ಲಾ ವಿದ್ಯಾರ್ಥಿಗಳನ್ನು ವಜಾ ಮಾಡುವುದಕ್ಕೆ ಸರ್ಕಾರ ಹುಕ್ಕುಂ ಮಾಡಿದೆ. ಮತ್ತು ಅದನ್ನು ಸಂಬಂಧಪಟ್ಟ ಪೋಲೀಸರಿಗೆ ವಹಿಸತಕ್ಕಂಥ ಆಜ್ಞೆಯನ್ನು ಕೂಡ ಮಾಡಿದೆ. ಆ ದಾಖಲೆಯ ಆಜ್ಞೆಗಳು ನನ್ನ ಹತ್ತಿರ ಇದೆ ಅದನ್ನು ಸಭೆಯ ಮಾಹಿತಿಗೋಸ್ಕರ ಮುಂದಿಡಬಯಸುತ್ತೇನೆ. ಅದರಲ್ಲಿ ಯಾವುದೋ ವಿಧವಾದಂಥ ಸಂಶಯ ಬರತಕ್ಕ ರೀತಿಯ ಕೃತ್ಯ ನಡೆದಿಲ್ಲ, ಸರ್ಕಾರ ನಿಷ್ಪಕ್ಷಪಾತವಾಗಿ ಸ್ವಚ್ಛ ಮತ್ತು ದಕ್ಷತೆಯ ಹಿನ್ನೆಲೆಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ. ಈ ಆಪಾದನೆ ಆಧಾರರಹಿತವಾದುದೆಂದು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

† ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರಿಕೆರೂರು):- ಸನ್ಮಾನ್ಯ ಸಭಾಧ್ಯಕ್ಷಿಣಿಯರೆ, ನಾನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ ಆದ್ದರಿಂದ ದಯಮಾಡಿ ಸ್ವಲ್ಪ ಸಮಯ ಹೆಚ್ಚು ಕೊಡಬೇಕು.

ಈ ಒಂದು ಕಾನೂನನ್ನು ಏನು ತಂದಿದ್ದಾರೆ ಇದು ಸುಂದರವಾಗಿದೆ, ಬಹಳ ಉತ್ತಮವಾಗಿದೆ ಎನ್ನತಕ್ಕ ರೀತಿಯಲ್ಲಿ ಇದ್ದರೂ ಸಹಿತ, ಇದರ ಪರಿಣಾಮವೇನು ಎನ್ನುವ ಬಗ್ಗೆ ಹೇಳುವುದಾದರೆ, ಈಗಾಗಲೇ ಪ್ರಾಥಮಿಕ ಹಂತದಿಂದ ಹಿಡಿದು, ಪ್ರೌಢಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಬೆಳೆದಿವೆ. ಮತ್ತೆ ಜಿಲ್ಲಾ ಪರಿಷತ್‌ನವರು ತಮ್ಮ ಅಧಿಕಾರ ವ್ಯಾಪ್ತಿ ಇದೆಯೆಂದು ಆಯಾ ಜಿಲ್ಲೆಗಳಲ್ಲಿ ಸಾಕಷ್ಟು ವಿದ್ಯಾಸಂಸ್ಥೆಗಳು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಅವುಗಳು ಪ್ರಾರಂಭವಾಗಿ ಈಗಾಗಲೇ 2-3 ವರ್ಷಗಳಾಯಿತು. ಸುಮಾರು ನೂರಾರು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಅನುಮತಿಯನ್ನು ಕೊಟ್ಟಿದ್ದರೂ ಸಹ ಇನ್ನೂ ಅಂಥ ಶಾಲೆಗಳಿಗೆ ಸರ್ಕಾರ ಅನುಮತಿಯನ್ನು ಕೊಟ್ಟಿಲ್ಲ. ಈಗಾಗಲೇ ವಿದ್ಯಾರ್ಥಿಗಳು 8-9-10ನೇ ತರಗತಿಯವರೆಗೆ ವ್ಯಾಸಾಂಗ ಮಾಡಿ ಶಾಲೆಯಿಂದ ಹೋಗಿದ್ದಾರೆ ಆದರೆ ಇಂಥ ಶಾಲೆಗಳಿಗೆ ಸರ್ಕಾರ ಇನ್ನೂ ಕೂಡ ಅನುಮತಿಯನ್ನು ಕೊಟ್ಟಿಲ್ಲ. ಜಿಲ್ಲಾಪರಿಷತ್ತು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ 3-4 ವರ್ಷಗಳಿಂದ ಅನುಮತಿಯನ್ನು ಕೊಟ್ಟರೂ ಕೂಡ ಸರ್ಕಾರ ಮಾತ್ರ ಅನುಮತಿಯನ್ನು ಕೊಟ್ಟಿಲ್ಲ. ಇವತ್ತು ಈ ಕಾನೂನನ್ನು ಜಾರಿಗೆ ತಂದರೆ ಆದರ ಪರಿಣಾಮವೇನಾಗುತ್ತದೆ? ಆ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕವರಿಗೆ ಅಲ್ಲಿರತಕ್ಕ ಕಾರ್ಯದರ್ಶಿಯವರಿಗೆ, ಅಧ್ಯಕ್ಷರಿಗೆ, ಸದಸ್ಯರುಗಳಿಗೆ ಈ ಕಾನೂನಿನ ಪ್ರಕಾರ ಕನಿಷ್ಟ ಒಂದು ವರ್ಷದ ಸೆರೆಮನೆ ಅಥವಾ ಮೂರು ವರ್ಷದವರೆಗೆ ಜೈಲುವಾಸವಾಗುತ್ತದೆ. ಅನಂತರ ಮೂರು ಸಾವಿರ ರೂಪಾಯಿ ದಂಡ, ಕೊಡಬೇಕಾಗುತ್ತದೆ. ಮತ್ತು ಪ್ರತಿದಿನ ಆ ಶಾಲೆಗಳನ್ನು, ಸಂಸ್ಥೆಗಳನ್ನು ಮುಂದುವರೆಸಿದರೆ ಮುಂದುವರಿದ ಅಪರಾಧವೆಂದು 250 ರೂಪಾಯಿಗಳ ದಂಡವನ್ನು ವಿಧಿಸಲು ಅವಕಾಶವಾಗಿದೆ.

ಆದ್ದರಿಂದ ಈ ಬಗ್ಗೆ ಸರ್ಕಾರ ಸಮಗ್ರವಾದ ಒಂದು ವರದಿಯನ್ನು ತರಿಸಿದೆಯೇ? ನಾವೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತೇವೆ. ಎಷ್ಟು ಮಕ್ಕಳಿಗೆ ಇವತ್ತು ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಅಲ್ಲಿ ಶಿಕ್ಷಕರ ಸೌಲಭ್ಯ ಏನಿದೆ ಮತ್ತು ಶಾಲೆಗಳ ಕಟ್ಟಡಗಳ ಅನುಕೂಲತೆಯನ್ನು ಮಾಡಿಕೊಟ್ಟಿದ್ದೇವೆಯೇ? ಈಗಾಗಲೆ, ಜಿಲ್ಲಾಪರಿಷತ್ತಿನಿಂದ ಮಂಜೂರಾತಿಯಾಗಿರತಕ್ಕ ವಿದ್ಯಾಸಂಸ್ಥೆಗಳಲ್ಲಿ ಸರಿಯಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರೂ ಅವುಗಳು ಸರಿಯಾಗಿ ನಡೆಯುತ್ತಿದ್ದರೂ ಸರ್ಕಾರ ಅದಕ್ಕೆ ಏಕೆ ಮಂಜೂರಾತಿಯನ್ನು ಕೊಟ್ಟಿಲ್ಲ? ಈ ರೀತಿ ಕಾನೂನನ್ನು ತಂದು ಸಾರ್ವಜನಿಕರಿಗೆ, ವಿದ್ಯೆಯನ್ನು ಕಲಿಸಬೇಕು, ಅಜ್ಞಾನವನ್ನು ತೊಡೆದುಹಾಕಬೇಕೆ, ಈ ಒಂದು ಶಿಕ್ಷಣವನ್ನು ಕೊಡದಿದ್ದರೆ ಸರ್ಕಾರ ಅಪರಾಧ ಮಾಡುತ್ತದೆಂದು ಹೇಳುತ್ತಿದ್ದೇನೆಯೇ ವಿನಃ ಸರ್ಕಾರಕ್ಕೂ ಅದನ್ನು ಮಾಡಲು ಶಕ್ತಿ ಇಲ್ಲ, ಇವತ್ತು ಉದಾಹರಣೆಗೆ ಸರ್ಕಾರದವರು ನಡೆಸತಕ್ಕ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಅದನ್ನು ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ. ಸುಮಾರು 20 ಸಾವಿರ ಶಿಕ್ಷಕರು ಕೊರತೆ ಪ್ರಾಥಮಿಕ ಶಾಲೆಗಳಲ್ಲಿ ಇದೆ. ಒಂದರಿಂದ ಏಳನೇ ತರಗತಿಯವರೆಗೆ ಒಬ್ಬರೇ ಶಿಕ್ಷಕರಿರತಕ್ಕ ದುರತರವಾದ ಪರಿಸ್ಥಿತಿ ರಾಜ್ಯದಲ್ಲಿದೆ. ಖಾಸಗೀ ವಿದ್ಯಾಸಂಸ್ಥೆಗಳೆಲ್ಲವೂ ಕೂಡ ಉತ್ತಮವಾಗಿದೆ ಎಂದು ನಾನು ಹೇಳುತ್ತಿಲ್ಲ. ಉತ್ತಮವಾದಂಥ ವಿದ್ಯಾಸಂಸ್ಥೆಗಳಿವೆ, ಸರಿಯಾಗಿ ನಡೆಸುತ್ತಿರುವ ವಿದ್ಯಾಸಂಸ್ಥೆಗಳಿವೆ, ರಾಜ್ಯದಲ್ಲಿರತಕ್ಕ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವಾಗ ಉತ್ತಮ ರೀತಿಯಲ್ಲಿ ನಡೆಸತಕ್ಕ ಈ ವಿದ್ಯಾಸಂಸ್ಥೆಗಳಿಗೆ ನಾವು ನಿರ್ಬಂಧ ಮಾಡತಕ್ಕದ್ದು ಮತ್ತು ಅವುಗಳನ್ನು ಅಪರಾಧಿ ಮಾಡುವುದರಿಂದ ಇದರ ಸಂಪೂರ್ಣವಾದ ಜವಾಬ್ದಾರಿಯನ್ನು ಇವರು ಹೊರಬೇಕಾಗುತ್ತದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಮಾತ್ರ ಇಂಥ ಕಾನೂನನ್ನೂ ನಾವು ಜಾರಿಗೆ ತರಬಹುದು. ಇದನ್ನು ಬೇಡ ಎಂದು ಹೇಳುವುದಿಲ್ಲ. ಅಲ್ಲಿ ವ್ಯವಹಾರ ನಡೆಯುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ಕಾರಣ ಸರ್ಕಾರ ತಾನು ಮಾಡತಕ್ಕಂಥ ಕರ್ತವ್ಯವನ್ನು ಮಾಡದೇ ಹೋದುದಕ್ಕೆ, ಅವಕಾಶವನ್ನು ಕೊಟ್ಟಿದ್ದೇ ಸರ್ಕಾರ, ತಮಗೆ ಬೇಕಾದವರಿಗೆ, ವೈಯಕ್ತಿಕವಾಗಿ, ಲಾಭಕ್ಕಾಗಿ ಕೊಟ್ಟಂಥ ಸಂಸ್ಥೆಗಳು ಇವತ್ತು ದುರ್ವ್ಯವಹಾರದಲ್ಲಿ ತೊಡಗಿವೆ. ಮೊದಲು ಪ್ರಾಥಮಿಕ ಶಾಲಾ ಶಿಕ್ಷಕರನ್ನು ತುಂಬಿ, ಹಳ್ಳಿಗಳಲ್ಲಿ ಎಷ್ಟು ಮಕ್ಕಳು ಶಾಲೆಗೆ ಹೋಗುತ್ತಾರೆ, ಎಷ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕು. ಎಷ್ಟು ಶಿಕ್ಷಕರನ್ನು ಕೊಡಬೇಕು, ಹೈಸ್ಕೂಲುಗಳು ಎಷ್ಟು ಬೇಕು? ಇದನ್ನೆಲ್ಲಾ ಬಿಟ್ಟು ನಾವು ಈ ರೀತಿ ಒಂದು ಕಾನೂನನ್ನೂ ಮಾಡಿ ಇಲ್ಲಿ ಖಾಸಗೀಯವರನ್ನು ಅಪರಾಧಿಗಳು ಎಂದು ನಿಲ್ಲಿಸಿದ್ದೇ ಆದರೆ ಮಕ್ಕಳಿಗೆ, ನಾಗರಿಕರಿಗೆ, ಹಾಗೂ ಈ ರಾಜ್ಯಕ್ಕೆ ಈ ಕಾನೂನನ್ನು ತರುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅಶಾಂತಿಗೆ ಇದು ನಾಂದಿ ಹಾಕೀತು. ಯಾವ ವ್ಯವಸ್ಥೆಯನ್ನೂ ಮಾಡದೆ ನಾವು ಈ ರೀತಿ ಕಾನೂನನ್ನೂ ಸುಲಭವಾಗಿ ತಂದರೆ ಅಧಿಕಾರಿಗಳ ಮಟ್ಟದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ನಾವು ಏನು ಹೇಳುತ್ತೇವೆ, ಅದನ್ನು ಸರ್ಜರಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಆದರೂ ಇಂಥ ಕಾನೂನನ್ನು ತರುವುದರಿಂದ ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಸಾಧ್ಯವಿಲ್ಲ. ಇನ್ನಷ್ಟು ಭ್ರಷ್ಟಾಚಾರ ತನ್ನ ಉತ್ತುಂಗವನ್ನು ಮುಟ್ಟುವುದಕ್ಕೆ ಅವಕಾಶವಾಗುತ್ತದೆಂದು ಹೇಳುವುದು ಅನಿವಾರ್ಯವಾಗುತ್ತದೆ. ಸರ್ಕಾರದವರು ಸಮಗ್ರವಾಗಿ ಒಂದು ತನಿಖೆ ಮಾಡಬೇಕು. ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣದ ಹಂತದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಈಗ ಅವಕಾಶ ಇದೆ, ಇನ್ನೂ ಎಷ್ಟು ಜನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು. ಎಲ್ಲಿ ಉತ್ತಮ ಸಂಸ್ಥೆಗಳು ಇವೆ, ಅವುಗಳಿಗೆ ಮಂಜೂರಾತಿ ಕೊಟ್ಟ ನಂತರ ಇಂಥ ಕಾನೂನು ತರಬೇಕು. ಸೆಕ್ಷನ್ 5 ಇದರಲ್ಲಿ 1991–92ನೇ ಸಾಲಿನಲ್ಲಿ ಯಾವುದೋ ವಿದ್ಯಾಸಂಸ್ಥೆಯಿಂದ ಪರೀಕ್ಷೆ ಕೊಡಲಿಕ್ಕೆ ಅನುಮತಿ

ಸಿಕ್ಕದೇ ಇರತಕ್ಕ ವಿದ್ಯಾರ್ಥಿಗಳಿಗೆ ಅನುಮತಿ ಕೊಡುತ್ತೇವೆಂದು ಹೇಳಿದ್ದೀರಿ. 1992-93ರ ಪರೀಕ್ಷೆಗಳು ಪ್ರಾರಂಭವಾಗುತ್ತಿವೆ. ಇಲ್ಲಿಯವರೆಗೆ ಅಂತಹ ಮಂಜೂರಾತಿ ಸಿಕ್ಕದಂಥ ವಿದ್ಯಾಸಂಸ್ಥೆಯಲ್ಲಿ ಕಲಿತಂಥ ವಿದ್ಯಾರ್ಥಿಗಳ ಪಾಡು ಏನು? ಈಗ ಪರೀಕ್ಷೆಗೆ ಕೂಡಲಿಕ್ಕೆ ಅವಕಾಶ ಇಲ್ಲ. ಆದ್ದರಿಂದ ಮೂಲತಃ ಸಮಗ್ರ ತನಿಖೆ ಮಾಡಿಸಬೇಕು.

ಶಿಕ್ಷಣದ ಬಗ್ಗೆ ಸಂಪೂರ್ಣ ಜವಾಬ್ದಾರಿ ಹೊತ್ತರೆ ಮಾತ್ರ ಸಮಾಜವನ್ನು ಸರಿಯಾದ ದಾರಿಯಲಿ ಒಯ್ಯಲಿಕ್ಕೆ ಇದು ಸಹಕಾರಿಯಾಗುತ್ತದೆ. ಸರ್ಕಾರ ಹೇಳುವಂತೆ ವಿದ್ಯೆಯನ್ನೂ, ಅಕ್ಷರ ಜ್ಞಾನವನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಈ ಕಾನೂನು ಯಾವ ರೀತಿ ಆಗುತ್ತದೆ ಎಂದರೆ ವರದಕ್ಷಿಣೆಯನ್ನು ನಾವು ಇವತ್ತು ನಿಷೇಧ ಮಾಡಿದ್ದೇವೆ ಆದರೆ ಈ ಸಮಾಜದಲ್ಲಿ ವರದಕ್ಷಿಣೆಯ ಪಿಡುಗನ್ನು ಹೋಗಲಾಡಿಸುವುದಕ್ಕೆ ಆಗಿಲ್ಲ. ಅದೇ ರೀತಿಯಲ್ಲಿ ವಿದ್ಯೆ ಕೂಡ ಆಗಿದೆ. ಆದ್ದರಿಂದ ವರದಕ್ಷಿಣೆಯ ಕಾಯಿದೆ ಏನು ವಿಫಲವಾಗಿದೆ, ಅದಕ್ಕೆ ಆ ಕಾನೂನನ್ನೂ ಮಾಡಿದ್ದರೂ, ಕಾನೂನನ್ನೂ ಅಮಲಿನಲ್ಲಿ ತರತಕ್ಕಂಥವರು ಎಲ್ಲರೂ ಅಪರಾಧಿಗಳೇ? ಆದುದರಿಂದ ಈ ಕಾನೂನು ಕೂಡ ಅದೇ ರೀತಿ ಆಗಬಾರದು. ತಾವು ಇದನ್ನು ವಾಪಸ್ಸು ತೆಗೆದುಕೊಂಡು, ಸರ್ಕಾರ ಆಲೋಚಿಸಿ ಸಮಗ್ರವಾದಂತಹ ರೀತಿಯಲ್ಲಿ ಕಾನೂನನ್ನು ಜಾರಿಯಲ್ಲಿ ತರಲಿ ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

† SRI D.B. CHANDRE GOWDA: Sir, I want to ask only one clarification. 'The Karnataka Prohibition of Admission of Students to the Un-recognised and Un-affiliated Educational Institutions Bill, 1992' is the heading of the Bill. Section 3 is 'Prohibition of admission of students to unrecognised and unaffiliated educational institutions' and Section 4 is 'Prohibition of admission of students in excess of intake.' These are the two objects behind this Bill. But, the puropose for which the Bill is introduced here and adopted is totally defeated under Section 5. What I am submitting to the Hon'ble Parliamentary Affairs Minister is that if that is the case, what is the purpose behind this Bill. Section 5 is 'Power to issue directions'. ಇಲ್ಲಿ, ಬಹುಶಃ ಇವರ ಮನಸ್ಸಿನಲ್ಲಿ ಸಾಕಷ್ಟು ವಿದ್ಯಾ ಸಂಸ್ಥೆಗಳು ನಡೆಯುತ್ತಾ ಇವೆ. ಆ ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಪರೀಕ್ಷೆಗೆ ಹೋಗತಕ್ಕಂಥ ಸಮಯದಲ್ಲಿ ಈ ಪ್ರಶ್ನೆ ತಂದರೆ ಅವರ ಗತಿ ಏನಾಗಬಹುದೆಂಬುದನ್ನು ಯೋಚಿಸಿ. ಅದನ್ನು ಸರಿಪಡಿಸುವುದಕ್ಕಾಗಿ ಈ ರೀತಿ ಮಾಡಿದ್ದೇವೆ ಎಂದು ಹೇಳಿದ್ದೀರಿ.

Wording of Section 5 is as follows:

"Notwithstanding anything contained in this Act or in any law for the time being in force, where Students have been admitted to a new college or to a new course of study in an existing college, to which affiliation has not been granted or where students have been admitted in excess of the intake prior to the commencement of this Act....."

1-00 P.M.

Government has got powers to give directions? What are those institutions? PUC Board, Secondary Education Examinations Board or any other authority which conducted such examined for the academic year or to the university.

What is left? You can issue directions to any institution established well within the purview of the legislature we have done here or under any other Act. The last sentence of the wording is "it shall be the duty of the Board". There is not option left. It shall be the duty of the board or authority or the university to comply with these directions. This is section-5. So the purpose of Sections 3 and 4 is totally defeated under Section-5.

ಇಷ್ಟು ಹೊತ್ತು ನಮ್ಮ ಸ್ನೇಹಿತರುಗಳು ಮಾತನಾಡುತ್ತಿದ್ದರು. ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜು, ಈ ಸೆಕ್ಷನ್ 5 ಅನ್ನು ಬಳಸಿ ಅಡ್ಮಿಶನ್ ಮಾಡಿದವರೆಲ್ಲರನ್ನೂ ರೆಗ್ಯುಲರೈಸ್ ಮಾಡಬಹುದು. ನೀವು ಏತಕ್ಕೆ ಈ ಬಿಲ್ಲನ್ನು ಹೊಗಳುತ್ತಿದ್ದೀರಿ ಅಂದರೆ ಬಹುಶಃ ಇನ್ನು ಮುಂದೆ ಈ ಕೆಲಸ ನಡೆಯುವುದಿಲ್ಲ ಎಲ್ಲಾ ಕೆಲಸವನ್ನು ನಡೆಸುವ ಅಧಿಕಾರವನ್ನು ಸರಕಾರ ತೆಗೆದುಕೊಳ್ಳುತ್ತಿದೆ. This is the purpose ಆದ್ದರಿಂದ ಈ ಖಾಸಗಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಏನು ಮಾಡುತ್ತಾರೋ ಏನು ಬಿಡುತ್ತಾರೋ ನನಗೆ ಗೊತ್ತಿಲ್ಲ ದುರ್ದೈವ ಈ ಸದನದಿಂದ we are trying to settle our scores whether it is private or public, political or otherwise. This is a very very unfortunate development. Any way I will leave it at that to the good sense of the members. ತಮ್ಮ ತಮ್ಮ ಮನಸ್ಸಿಗೆ ತೋಚಿದ ಹಾಗೆ ತಾವೇ ಆಲೋಚನೆ ಮಾಡಿಕೊಳ್ಳುವುದು ಒಳ್ಳೆಯದು. ಇವತ್ತು ನಾವು ಯಾರ್‍ಯಾರು ಆಪಾದನೆ ಮಾಡುತ್ತೇವೆಯೋ ಖಾಸಗೀ ಸಂಸ್ಥೆಯನ್ನು ಕೊಟ್ಟಂಥ ಹೊಣೆಗಾರಿಕೆ, ಇವತ್ತು ಆಪಾದನೆ ಮಾಡತಕ್ಕಂತಹ ಎಲ್ಲರಿಗೂ ಇದೆ ಎನ್ನುವ ಮಾತನ್ನು ಜವಾಬ್ದಾರಿಯಿಂದ ನಾನು ಹೇಳುತ್ತಿದ್ದೇನೆ. ಅದರಲ್ಲಿ ನಾವು ಕೊಟ್ಟಿದ್ದೇವೆ ಆದರ ಲಾಭ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ಯಾವುದೇ ಸಂಸ್ಥೆ ಇರಬಹುದು, ಬೆಳಗಾಂ ಸಂಸ್ಥೆ ಇರಬಹುದು, ಮೈಸೂರು ಸಂಸ್ಥೆ ಇರಬಹುದು, ಬೆಂಗಳೂರು ಸಂಸ್ಥೆ ಇರಬಹುದು. ಆದರೆ ಎಲ್ಲಿ ದುರ್ವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ವಿಚಾರಣೆ ಈ ಮಸೂದೆಯಲ್ಲಿ ಇಲ್ಲ. ಅದಕ್ಕೆ ಬೇರೆ ಇನ್ಸ್‌ಟ್ಯೂಷನ್ಸ್ ಇದೆ, ಅದನ್ನು ಇನ್‌ವೆಸ್ಟಿಗೇಷನ್ ಮಾಡುವವರಿದ್ದಾರೆ ಮಾಡಿಕೊಳ್ಳುತ್ತಾರೆ. ಮತ್ತೆ ಇಲ್ಲಿ ಯಾವುದನ್ನು ಮಂತ್ರಿಗಳು ನಿರ್ದೇಶನ ಕೊಟ್ಟು ಸೀಟುಗಳನ್ನು ತೆಗೆದುಕೊಂಡರು ಎಂದು ಹೇಳಿದ್ದೇವೋ ಅದಕ್ಕಿಂತಲೂ ಕೆಟ್ಟದಾಗಿ ಇಲ್ಲಿ ಸೆಕ್ಷನ್ - 5ರ ಒಳಗೆ ಕಾನೂನಿನಿಂದ ನೀವು ಇನ್ನೂ ಮಾಡಬಹುದು, ಯಾರಿಗೆ ಬೇಕಾದರೂ ಕೊಡಬಹುದು ಎಲ್ಲಾ ಜವಾಬ್ದಾರಿ ನಿಮ್ಮದು. The very purpose of the bill, the object behind the bill, the intentions behind the bill, I should say, I don't use the word deceive, but you are trying to deceive the whole House. Through this bill you are trying to defeat the whole society. Please don't do that. If you are genuinely interested, you delete Section-5 and show your good intention. If not, I would be drawing my conclusions that hither to.... ಯಾವುದು ಹಿಂದುಗಡೆ ನಡೆಯುತ್ತಿತ್ತು ಮುಸುಕಿನಲ್ಲಿ ನಡೆಯುತ್ತಿತ್ತು ಅದಕ್ಕೆ ಶಾಸನ ಬದ್ಧವಾದ ಅಧಿಕಾರವನ್ನು ಈ ಮಸೂದೆ ಮೂಲಕ ಕೊಡುತ್ತೀರಿ ಎನ್ನುವ ಆಪಾದನೆ ಮಾಡಿದರೆ ನಾನು ತಪ್ಪು ಮಾಡುತ್ತಿಲ್ಲ ಎಂದು ಭಾವನೆ ಮಾಡುತ್ತೇನೆ.

SRI S.M. YAHYA: Madam, The minimum purpose of this bill is very much...

ಶ್ರೀ ಸಿ. ಬೈರೇಗೌಡ:- ಬಿಲ್ಲನ್ನು ಫೈಲಟ್ ಮಾಡಿದವರು ಒಬ್ಬರು ಉತ್ತರ ಕೊಡುವವರು ಒಬ್ಬರು ಬಹುಶಃ ನಮ್ಮ ನಿಯಮಾವಳಿಯಲ್ಲಿ ಅದಕ್ಕೆ ಅವಕಾಶ ಇಲ್ಲ.

ಶ್ರೀ ಎಸ್.ಎಂ. ಯಾಹ್ಯಾ:- ನಾನು ಆ ಮನೆಯಲ್ಲಿದ್ದೆ ಇಲ್ಲಿರಲಿಕ್ಕೆ ಆಗಲಿಲ್ಲ.

ಶ್ರೀ ಸಿ ಬೈರೇಗೌಡ:- ಬಿಲ್ಲನ್ನು ಪೈಲಟ್ ಮಾಡಿರುವುದು ಒಬ್ಬರು, ಉತ್ತರ ಕೊಡುವವರು ಒಬ್ಬರು ಇದಕ್ಕೆ ನಿಯಮಾವಳಿಯಲ್ಲಿ ಅವಕಾಶವಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ:- ಹಾಗೇನೂ ಇಲ್ಲ. ನಿಮಗೆ ಒಳ್ಳೆ ಉತ್ತರ ಬೇಕಾದರೆ ನಾನು ಪ್ರಿಪೇರಾಗಿ ಬಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಅವರು ಕೆಟ್ಟ ಉತ್ತರ ಕೊಡುತ್ತಾರೆಯೇ?

ಶ್ರೀ ಸಿ. ಬೈರೇಗೌಡ:- ನಾವು ಗುರುತರವಾದ ಆಪಾದನೆ ಮಾಡಿದ್ದೇವೆ. ಅದಕ್ಕೆಲ್ಲ ತಾವು ಉತ್ತರ ನೀಡಬೇಕು.

ಶ್ರೀ ಎಸ್.ಎಂ. ಯಾಹ್ಯಾ:- ಲೀಗಲ್ ಬಾರ್ ಏನೂ ಇಲ್ಲ, ನಮ್ಮ ಫಾರ್ಮರ್ ಸ್ಪೀಕರ್ ಪ್ರಕಾರ ಅದೇನೂ ಇಲ್ಲ. ಕಾನೂನು ಪ್ರಕಾರ ಏನಿದೆಯೋ ಅದನ್ನು ಮಾಡೋಣ.

ಶ್ರೀ ಎಸ್.ಹೆಚ್. ಕೌಜಲಗಿ:- ನೀವು ಒಬ್ಬರು ಅಧ್ಯಕ್ಷರನ್ನು ಹಿಡಿದುಕೊಂಡು ಕುಳಿತಿದ್ದೀರಿ. ನಾವು ಒಬ್ಬರು ಅಧ್ಯಕ್ಷರನ್ನು ಹಿಡಿದುಕೊಂಡು ಕುಳಿತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್:- ಡಿಪಾರ್ಟ್‌ಮೆಂಟ್ ಯಾವ ಹೆಸರಿನಲ್ಲಿ ಇದೆಯೋ ಅವರು ಕನ್‌ಸರ್ನ್ ಬಿಲ್ ಬಂದರೆ, ಪಾಯ್‌ಲೆಟ್ ಮಾಡುತ್ತಾರೆ. In the absence of it anybody may move the Bill for consideration.

ಶ್ರೀ ಹೆಚ್. ಏಕಾಂತಯ್ಯ:- ನಿಮ್ಮ ಪುಸ್ತಕವನ್ನು ಓದುತ್ತೇನೆ. ಯಾರು ಬಿಲ್ಲನ್ನು ಕೊಟ್ಟಿದ್ದಾರೆ, ಮೂವ್ ಮಾಡಿದ್ದಾರೆ ಅವರೇ ಅದನ್ನು ಮೂವ್ ಮಾಡಬೇಕು. ಅವರ ಹೆಸರಿನಲ್ಲಿ ಇದ್ದರೆ, ಒಂದು ಪಕ್ಷ ಬೇರೆಯವರು ಮೂವ್ ಮಾಡುವುದಾದರೂ ಸಹ ಸಭಾಧ್ಯಕ್ಷರ ಅನುಮತಿಯನ್ನು ತೆಗೆದುಕೊಳ್ಳಬೇಕು.

ಛೇರ್ಮನ್:- ಅನುಮತಿ ಇದ್ದುದರಿಂದ ತಾನೇ ಅವರು ಮೂವ್ ಮಾಡಿದ್ದುದು.

SRI K.H. RANGANATH:- The Chair has permitted and the Bill is already before the House.

ಶ್ರೀ ಎಸ್.ಎಂ. ಯಾಹ್ಯ:- ಈ ಮಸೂದೆ ಯಾವುದಿದೆ, ಇದು ಬಹಳ ಲಿಮಿಟೆಡ್ ಪರ್ಪಸ್. ಮಾನ್ಯ ಚಂದ್ರೇಗೌಡರವರು ಸೆಕ್ಷನ್ 5ರ, ಬಗ್ಗೆ ಹೇಳಿದ್ದಾರೆ. ಸೆಕ್ಷನ್ 3, ಉದಾಹರಣೆಗೆ 3-4-5 ರಿಲವೆಂಟ್ ಸೆಕ್ಷನ್ ಇದು ಲಿಮಿಟೆಡ್ ಪರ್ಪಸ್ ಏತಕ್ಕೆ ಇದೆ ಎಂದರೆ 1991-92ರಲ್ಲಿ ಕೆಲವು ಸ್ಕೂಲ್‌ಗಳು, ಅಥವಾ ಕಾಲೇಜುಗಳು ಬಿ.ಎಡ್. ಕಾಲೇಜುಗಳು ಇವುಗಳನ್ನು ಅವರು ಓಪನ್ ಮಾಡಿದ್ದಾರೆ. ಪ್ರೊಸೆಸ್ ಸ್ಟೆಪ್ಸ್ ಯಾವುದು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಸರಿಯಾಗಿ ತೆಗೆದುಕೊಳ್ಳದೆ ಅವರು ಓಪನ್ ಮಾಡಿದರು. ಅದಕ್ಕೆ ಅವರಿಗೆ ರೆಕಾಗ್‌ನೆಷನ್ ಅಥವಾ ಅಪ್ರೂವಲ್ ಕೊಡುವ ಒಂದು ವಿಚಾರ ಮಾತ್ರ ಈ ಬಿಲ್‌ನಲ್ಲಿ ಅಡಕವಾಗಿದೆ. 1991-92ರಲ್ಲಿ ಯಾವುದೇ ಪ್ರಾಪರ್ ಲೀಗಲ್ ಫಾರ್ಮಾಲಿಟೀಸ್ ಇಲ್ಲದೆ ಓಪನ್ ಮಾಡಿದ್ದಾರೆ. ಅಂಥ ಸ್ಕೂಲ್ ಕಾಲೇಜುಗಳು ಏನಿವೆ ಆ ಒಂದು ವರ್ಷ ಮಾತ್ರ ಈ ಬಿಲ್‌ನ ಉದ್ದೇಶ. ಹೊಸ ಕಾಲೇಜಿಗೆ ಕೊಡಬಾರದೆಂದು ಕೊಡುವುದಕ್ಕೆ ಸಾಧ್ಯವಿಲ್ಲ. Due process, of law ಪ್ರಕಾರ ಹೋಗಬೇಕಾಗಿದೆ. ಮತ್ತು ಎಕ್ಸೆಸ್ ಇನ್‌ಟೇಕ್ ಆಗಬಾರದು. ಇದೂ ಸಹ ಅಕಾರ್ಡಿಂಗ್ ಟು ಲಾ ಆಗಬೇಕು. 1991-92ರಲ್ಲಿ ರೆಗ್ಯುಲರೈಸ್ ಮಾಡಲಿಕ್ಕೆ ಮೊದಲು ಆರ್ಡಿನೆನ್ಸ್ ಹೊರಡಿಸಿದರು. ಆ ಆರ್ಡಿನೆನ್ಸ್ 6 ತಿಂಗಳೊಳಗೆ ರೀಪ್ಲೇಸ್ ಆಗಬೇಕಾಗಿತ್ತು. ಕಾವೇರಿ ಬಗ್ಗೆ 1-2 ದಿವಸ ಸೆಷನ್ ಆಯಿತು.

ಅದನ್ನು ತರಲಿಕ್ಕೆ ಆಗಲಿಲ್ಲ. ಅದು ಲ್ಯಾಪ್ಸ್ ಆಯಿತು. It is fait accompli, what has already been done. ಪುನಃ ಒಂದು ಆರ್ಡಿನೆನ್ಸ್ ಹೊರಡಿಸಿ ಇದು ಒಂದು ರೀತಿ ಬಿಲ್ ಆಗಿದೆ. ಇದು ಆದ ಕಾರ್ಯಕ್ಕೆ ಬಿಲ್ ಆಗಿದೆ. ಬರುವ ಕಾರ್ಯಕ್ಕೆ ಅಲ್ಲ. ಅಲ್ಲಿಯೂ ಸಹ ಏನು ಮಾಡಿದೆ ಎಂದರೆ ರೆಗ್ಯುಲರೈಸ್ ಮಾಡುವಂಥ ಒಂದು ಅಧಿಕಾರವನ್ನು ಡೈರೆಕ್ಟಾಗಿ ಅವರಿಗೆ ಕೊಟ್ಟಿಲ್ಲ. ಸೆಕ್ಷನ್ 5ರ ಪ್ರಕಾರ ಯಾವುದು ಇರೆಗ್ಯುಲರ್ ಆಗಿದೆ ಅವರು inso facto ಆಯಿತು, ನಮ್ಮದು ಸರಿಯಾಯಿತು, ಲೀಗಲೈಸ್ ಆಯಿತು ಎಂದು ಹೇಳಲಿಕ್ಕೆ ಆಗಿಲ್ಲ ಅವರು ಸಹ ಸರ್ಕಾರಕ್ಕೆ ಬಂದ ಎಕ್ಸ್‌ಪ್ಲೈನ್ ಮಾಡಿದಮೇಲೆ ಡೈರೆಕ್ಷನ್ ಇಸ್ಯೂ ಮಾಡಿದನಂತರ ಆ ಸ್ಕೂಲ್ ಅಥವಾ ಕಾಲೇಜಿಗೆ ಅಪ್ರೂವಲ್ ಸಿಕ್ಕುತ್ತದೆಂದು ಹೇಳಿ, ಅದು ಸಹ ಬೈಂಡಿಂಗ್ ಪ್ರಾವಿಸೋ ಹಾಕಿಕೊಂಡು ಮಾಡಿದ್ದಾರೆ. ಅದಕ್ಕಾಗಿ ಯಾವುದೊಂದು ಬಿಲ್ ಇದೆ ಅದು ಬರೀ ಲಿಮಿಟೆಡ್ ಪರ್ಪಸ್‌ಗೆ ಇದೆ ಮುಂದೆ ಯಾವ ಕಾಲೇಜಿಗೂ ಮಾಡುವುದಕ್ಕೆ ಬರುವುದಿಲ್ಲ. 1991-92ರಲ್ಲಿ ಯಾವುದೇ ಕಾಲೇಜಿಗೆ ಅಪ್ರೂವಲ್ ಕೊಡುವಾಗ, ಯಾರು ಇರ್ರೆಗ್ಯುಲರ್ ಆಗಿ ಓಪನ್ ಮಾಡಿದರೋ ಯಾರು ನಿಯಮವನ್ನು ಉಪಯೋಗಿಸದೆ ಮಾಡಿದರೋ ಅಂಥವರಿಗೆ ಮಾತ್ರ ಈ ಬಿಲ್‌ನಲ್ಲಿ ಅಡಕವಾಗಿದೆ. ಇನ್ನು ಮುಂದೆ ಎಲ್ಲರೂ ಲೀಗಲ್ ಪ್ರೊಸೆಸ್ ಮಾಡಿಕೊಂಡು ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಇದೆ. ಈಗಲೂ ಅದು ಲಾಗುವಾಗುತ್ತದೆಂದು ಹೇಳಿದ ಸೆಕ್ಷನ್‌ನಿಂದ ಏನೂ ತೊಂದರೆ ಇಲ್ಲ. ಕೆಲವು ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಇಂಡಿಸಿಪ್ಲೀನ್ ಇದೆ ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಅದು ಒಪ್ಪಿಕೊಳ್ಳುವ ವಿಚಾರ. ಇಂಡಿಸಿಪ್ಲೀನ್ ಇಲ್ಲವೆಂದು ಹೇಳುವುದಿಲ್ಲ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲೂ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಏನು ಕೇಳಿದೆ ಎಂದರೆ, before you go to other things. 'Comply with the directions issued by the Government' This is what you have said. On the contrary, you should have said 'comply with the rules', 'comply with the law' Rule is already there. 'Comply with the directions' ಅಂದರೆ ಏನು ಅರ್ಥ? Please tell me

SRI S.M. YAHYA:- I am not only persuasive, and it is very very proper. ಇದೇ ಆರ್ಡಿನೆನ್ಸ್ ಡೈರೆಕ್ಷನ್ ಇಲ್ಲದಿದ್ದರೆ ಏನಾಗುತ್ತದೆಂದರೆ, ಸಾವಿರಾರು ಸ್ಕೂಲುಗಳನ್ನು ಮಾಡಿದ್ದಾರೆ, 1991-92ರಲ್ಲಿ ಓಪನ್ ಮಾಡಿದ್ದೇವೆಂದು ಸುಳ್ಳು ಹೇಳುತ್ತಿದ್ದರು. ನೀವು ರೂಲ್ಸ್ ಪ್ರಕಾರ ಕೊಟ್ಟರೆ ಪ್ರತಿಯೊಬ್ಬರೂ ಸ್ಕೂಲ್ ಓಪನ್ ಮಾಡದೆ ಇದ್ದವರು ಸ್ಕೂಲ್ ಇದೆ ಎಂದು ಹೇಳುತ್ತಿದ್ದರು. ಅದನ್ನು ಚೆಕ್ ಮಾಡಲಿಕ್ಕೆ, ಯಾರಾದರೂ ಅಂಥವರು ಬಂದರೆ, ನಾವು ಯೋಚನೆ ಮಾಡಿ ಸರಿಯೇ ಅಲ್ಲವೇ ಎಂದು ನಾವು ಡೈರೆಕ್ಷನ್ ಕೊಟ್ಟರೆ ಮಾತ್ರ ಲೀಗಲೈಸ್ ಆಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಅದು ಇಲ್ಲದಿದ್ದರೆ ಬಹಳಷ್ಟು ಹಾನಿ ಆಗುತ್ತಿತ್ತು. ಎಜುಕೇಷನಲ್ ಸಿಸ್ಟಂಗೆ ಹಾನಿಯಾಗುತ್ತಿತ್ತು. ಸರ್ಕಾರದ ಡೈರೆಕ್ಷನ್ ಇರುವುದರಿಂದ ಒಳ್ಳೆಯದಾಯಿತು. ಸಾವಿರಾರು ಶಾಲೆಗಳು ಸರ್ಕಾರಕ್ಕೆ ಬಂದು ಡೈರೆಕ್ಷನ್ ತೆಗೆದುಕೊಳ್ಳತಕ್ಕದ್ದು ಅವಶ್ಯಕ ಇದೆ. ಸುಳ್ಳೋ ಸತ್ಯವೋ ಎಲ್ಲಾ ಶಾಲೆಗಳು ಓಪನ್ ಆಗುತ್ತಿದ್ದವು. ಅದನ್ನು ಚೆಕ್ ಮಾಡಲಿಕ್ಕೆ ಪ್ರಾಮುಖ್ಯವಾಗಿ ಒಂದು ವ್ಯವಸ್ಥೆ ಬೇಕಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಯಾವ ಉದ್ದೇಶಕ್ಕಾಗಿ ಈ ಬಿಲ್ ತಂದಿರಿ ಅದು ಸೆಕ್ಷನ್ 3-4ರಲ್ಲಿ ಇದೆ. ನಾನು ಮಾತನಾಡುವಾಗ ಹೇಳಿದೆ 3-4ನೇ ಸೆಕ್ಷನ್ ಏನಿದೆ ಅದರ ಪರ್ಪಸ್ ಅನ್ನು 5ರಲ್ಲಿ ಡಿಫೀಟ್ ಮಾಡುತ್ತಿದ್ದೀರಿ ಎಂದು. ಎಲ್ಲೆಲ್ಲಿ ಇನ್‌ಟೇಕ್ ಹೆಚ್ಚು ಮಾಡಿದ್ದಾರೆ ಅಲ್ಲಿ ಪರ್ಮಿಷನ್ ಕೊಡಬಾರದು. ಯಾರಿಗೆ ಅಫಿಲಿಯೇಷನ್ ಇಲ್ಲ ಅಂಥವರ ಮೇಲೆ ಕ್ರಮ

ತೆಗೆದುಕೊಳ್ಳಬೇಕೆಂದು ಇದೆ. ಪರ್ಮಿಷನ್ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದ್ದರೆ 1991-92ರಲ್ಲಿ ಏತಕ್ಕೆ ಸ್ಕೂಲ್ ಸ್ಟಾರ್ಟ್ ಮಾಡುತ್ತಿದ್ದರು? Is it not against the spirit of sections 3, 4, and 5?

ಶ್ರೀ ಎಸ್.ಎಂ. ಯಾಹ್ಯಾ:- ಸೆಕ್ಷನ್ 3ನ್ನು ಓದಿ, ಅದರ ಪ್ರಕಾರ ಯಾರು no student should be admitted in any unauthorised institution; that is the aim and policy of the Government. ನಂತರ ಸೆಕ್ಷನ್ 4ನ್ನು ಓದಿ, no excess admission is permissible. ಇದು ಕಾನೂನು. ಈ ಕಾನೂನಿನಲ್ಲಿ ಸಡಿಲ ಮಾಡುವಂತಹ ಸೆಕ್ಷನ್ ಅಂದರೆ ಸೆಕ್ಷನ್ 5. ಅದು ಕೂಡ ಒಂದು ವರ್ಷಕ್ಕಾಗಿ. ಅದು ಇಲ್ಲದಿದ್ದರೆ ಈ ಶಾಲಾ ಕಾಲೇಜುಗಳಿಗೆ ಅಪ್ರೂವಲ್ ಸಿಕ್ಕುತ್ತಿರಲಿಲ್ಲ. ಈ ಶಾಲಾ ಕಾಲೇಜುಗಳಿಗೆ ಅಪ್ರೂವಲ್ ಸಿಗಬೇಕು. 1991-92ನಲ್ಲಿ ಅವು ಸರಿಯಾಗಿ ಕಾನೂನು ಪ್ರಕಾರ ಇಲ್ಲ. ಅವನ್ನು ರೆಗ್ಯುಲರೈಸ್ ಮಾಡುವುದಕ್ಕೆ ಕಾನೂನು ಸಡಿಲ ಮಾಡಿದೆ. ಲೀಗಲಿ ಕರೆಕ್ಟ್ ಆಗಿದೆ. ಸಡಿಲ ಮಾಡುವುದಕ್ಕೆ ಇರಬೇಕಲ್ಲ, ಆ ಕಾರಣದಿಂದ ಮಾಡಿದೆ. ಆ ಕಾರಣದಿಂದ ಏನು ಈ ಮಸೂದೆ ಇದೆ It is one time ordinance. This Bill is just for one time purpose; for 1991-92. Subsequently also they have to take permission and they have to follow the process. Only then they will be authorised. Starting without proper process and permission, they will never get it according to this Ordinance. To that extent this is a very simple Bill. Our main purpose is to check the proliferation of Institutions. There is unplanned proliferation. There has been too many institutions without proper infrastructure, proper trained teachers and there is too much indicipline among teachers and the management. There is indiscipline in the whole system. So, the Government has taken a decision to take these few steps to check this kind of indiscipline which has already been existing. This will help in curbing the failing standards in our educational institutions. It should be arrested. Already, the standards have fallen. So, we have steamlined the directorate of Collegiate Education. There is ailment in the Educational system and this ailment should be remedied. To that extent we are giving certain remedies.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಆತಂಕ ಇದೆ. 1991-92ರಲ್ಲಿ ಪರೀಕ್ಷೆಗೆ ಅವಕಾಶ ಕೊಡದಿದ್ದರೆ ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ಸೆಕ್ಷನ್ 5 ಇದೆ ಎಂದು ಹೇಳಿದ್ದಾರೆ. ಬರೀ ಪರೀಕ್ಷೆಗೆ ಮಾತ್ರ ಇದರಲ್ಲಿ ಅವಕಾಶ ಇದೆ. ಆದರೆ ಈಗಾಗಲೇ 3-4 ವರ್ಷಗಳಿಂದ ನಡೆದು ಬಂದು, ವಿದ್ಯಾರ್ಥಿಗಳೂ ಸಾಕಷ್ಟು ಇದ್ದಾರೆ, ಶಿಕ್ಷಕರೂ ಸಾಕಷ್ಟು ಇದ್ದಾರೆ. ಜಿಲ್ಲಾಪರಿಷತ್ತಿನಿಂದ ಮಾಧ್ಯಮಿಕ ಶಾಲೆಗಳಿಗೆ ಅನುಮತಿ ಕೂಡ ಕೊಟ್ಟಿದ್ದಾರೆ. ಅವು ಸರಿಯಾಗಿ ನಡೆಯುತ್ತಿವೆ. ಆದರೆ ಸರ್ಕಾರ ಅವುಗಳಿಗೆ ಅನುಮತಿ ಕೊಟ್ಟಿಲ್ಲ. ಅವುಗಳಿಗೆ ಏನು ಮಾಡುತ್ತೀರಿ? ಕಾನೂನಿನಲ್ಲಿ ಅವುಗಳಿಗೆ ಮಂಜೂರಾತಿ ಇಲ್ಲ. ಅವೆಲ್ಲಾ ಅನಾಥರೈಸ್ ಆಗುತ್ತವೆ. ಸರ್ಕಾರದ ಮಂಜೂರಾತಿ ಅವಕ್ಕೆ ಸಿಕ್ಕಿಲ್ಲ. ಇದರ ಬಗ್ಗೆ ಏನು ಮಾಡುತ್ತಿದ್ದೀರಿ? ಈಗಾಗಲೇ ನೂರಾರು ಹೈಸ್ಕೂಲುಗಳಿಗೆ ಸರ್ಕಾರ ಮಂಜೂರಾತಿ ಕೊಟ್ಟಿದೆ. ಅವು ಸಮರ್ಪಕವಾಗಿಯೇ ನಡೆಯುತ್ತಾ ಇವೆ. ಆದರೆ ರಾಜಕೀಯ ಕಾರಣಕ್ಕಾಗಿ ಸರ್ಕಾರದಿಂದ ಅನುಮತಿ ಕೊಟ್ಟಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ:- ಯಾರೂ ಅನಧಿಕೃತವಾಗಿ ಮಾಡಬಾರದು. ಇದಕ್ಕೆ ಪ್ರಾಹಿಬಿಷನ್ ಇದೆ. ಮಾಡಿದರೆ ತಪ್ಪು. 1991-92ರ ನಂತರ ಮಾಡಿದರೆ ತಪ್ಪು, ಅವರಿಗೂ

ಸಹಾ ಪರ್ಮಿಷನ್ ಕೊಡಬೇಕೆಂದರೆ ಅದಕ್ಕಿಂತಲೂ ದೊಡ್ಡ ಗಂಡಾಂತರ ಎಜುಕೇಷನ್‌ಗೆ ಇನ್ನು ಬರುವುದಿಲ್ಲ. ಅದು ಬರಬಾರದು ಎಂದು ಮಾಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನೀಕೋಡ್:- ಒಪ್ಪಿಕೊಳ್ಳುತ್ತೇನೆ. ಈಗಾಗಲೇ 3-4 ವರ್ಷಗಳವರೆಗೆ ಅಧಿಕೃತವಾಗಿ ಜಿಲ್ಲಾಪರಿಷತ್ತಿನಿಂದ ಮಂಜೂರು ಪಡೆದ ಹೈಸ್ಕೂಲು, ಪ್ರಾಥಮಿಕ ಶಾಲೆಗಳು ನಡೆದಿವೆ. ಅಲ್ಲಿ ಶಿಕ್ಷಕರಿದ್ದಾರೆ, ವಿದ್ಯಾರ್ಥಿಗಳಿದ್ದಾರೆ. It is feasible, but the Government has not given sanction. ಅವುಗಳಿಗೆ ಏನು ಮಾಡುತ್ತೀರಿ?

ಶ್ರೀ ಎಸ್.ಎಂ. ಯಾಹ್ಯಾ:- ಕಾನೂನು ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಸರ್ಕಾರದ ನೀತಿ ಇಂತಹವರಿಗೆ ಕೊಡಬೇಕೆಂದು ಇಲ್ಲ. ಯಾರೇ ಪರ್ಮಿಷನ್ ಇಲ್ಲದೇ ಓಪನ್ ಮಾಡಿದ್ದಾರೆ ಅದು ಅವರಿಗೆ ಸೀಮಿತ ಆಗಿದ್ದುದು. ವಿದ್ಯಾರ್ಥಿಗಳನ್ನು ತೆಗೆದುಕೊಂಡು ಅವರು ತಪ್ಪು ಮಾಡಿದ್ದಾರೆ. ಕಾನೂನು ವಿರುದ್ಧ ಮಾಡಿದ್ದಾರೆ. ಯಾರು ಕಾನೂನು ವಿರುದ್ಧ ಮಾಡುತ್ತಾರೋ ಅವರಿಗೆ ಸರ್ಕಾರ ಬೆಂಬಲ ಕೊಡುವುದಕ್ಕೆ ಸಾಧ್ಯವಿಲ್ಲ. ಎಂದೆಂದಿಗೂ ನಾವು ಖಂಡಿತವಾಗಿ ಅವರಿಗೆ ಬೆಂಬಲ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ:- ನಾವು ಮಾತನಾಡುತ್ತಾ ಅಲ್ಲಿ ನಡೆಯತಕ್ಕ ಅವ್ಯವಹಾರ ಏನೇನಾಗಿದೆ ಎಂದು ಹೇಳಿದ್ದೇವೆ.

ಶ್ರೀ ಎಸ್.ಎಂ. ಯಾಹ್ಯಾ:- ನಾನು ಇನ್ನೂ ಉತ್ತರ ಕೊಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಆಯಿತು. ಇನ್ನೊಂದು ವಿಚಾರ ನಾನು ಜ್ಞಾಪಕ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಮೆಮೊರ್ಯಾಂಡಂ ಬಗ್ಗೆ ನಾನು ಮಾತನಾಡಿದ್ದೇನೆ. ಆ ಮೆಮೊರ್ಯಾಂಡಂ ಡ್ರಾಫ್ಟ್ ಮಾಡಿರುವವರಲ್ಲಿ ಮಾನ್ಯ ಯಾಹ್ಯಾ ಅವರೂ ಒಬ್ಬರು. ಡ್ರಾಫ್ಟ್‌ನಲ್ಲಿ ಏನೇನು ಸೇರಿಸಿದ್ದೀರಿ ಎಂದು ನಿಮಗೇ ಗೊತ್ತಿದೆ. ಅದಕ್ಕೆಲ್ಲಾ ಸ್ವಲ್ಪ ದಯವಿಟ್ಟು ಉತ್ತರ ಕೊಡಿ.

ಶ್ರೀ ಆರ್.ಎಲ್ ಜಾಲಪ್ಪ:- ಮಾನ್ಯ ಅಧ್ಯಕ್ಷಣಿಯವರೆ, ಜಿಲ್ಲಾಪರಿಷತ್‌ನವರು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ಮತ್ತು ಹೈಸ್ಕೂಲ್‌ಗಳನ್ನು ನಡೆಸುವುದಕ್ಕೆ ಅವಕಾಶ ಕೊಡಬಹುದೆಂದು ಅವರ ಆಕ್ಟ್‌ನಲ್ಲಿದೆ. ಅವರು ಈ ರೀತಿ ಕೊಟ್ಟಿದ್ದಾರೆ. ಎರಡು ವರ್ಷ ಮೂರು ವರ್ಷ ಮತ್ತು ನಾಲ್ಕು ವರ್ಷ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಮತ್ತು ಹೈಸ್ಕೂಲ್‌ಗಳು ನಡೆದುಕೊಂಡು ಬಂದಿವೆ. ಇವತ್ತು ಅವುಗಳಿಗೆ ರೆಕಗ್ನೈಸ್ ಕೊಡುವುದಿಲ್ಲವೆಂದರೆ ಅಲ್ಲಿರತಕ್ಕ ಮಕ್ಕಳ ಗತಿಯೇನು? ಆ ಶಾಲೆಯಲ್ಲಿರುವ ಉಪಾಧ್ಯಾಯರ ಗತಿಯೇನು? ಇದರ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರದವರು ರೆಕಗ್ನೈಸ್ ಮಾಡುತ್ತಾರೆಂದು ಜಿಲ್ಲಾಪರಿಷತ್‌ನವರು ಪರ್ಮಿಷನ್ ಕೊಟ್ಟಿದ್ದಾರೆ. Probably, they expected that the Government would recognise them. ರೆಕಗ್ನೈಸ್ ಕೊಡುವುದಿಲ್ಲವೆಂದರೆ ಆ ಶಾಲೆಗಳ ಗತಿಯೇನು? ತಾವು ದಯವಿಟ್ಟು ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಜಾಲಪ್ಪನವರು ಹೇಳುವುದರಲ್ಲಿ ಒಂದು ಮುಖ್ಯ ವಿಷಯವಿದೆ. ನೀವು ಸ್ಯಾಂಕ್ಷನ್ ಕೊಡುವ ಪ್ರಶ್ನೆಯಿಲ್ಲ. ಜಿಲ್ಲಾಪರಿಷತ್ ಆಕ್ಟ್ ಪ್ರಕಾರ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಮತ್ತು ಹೈಸ್ಕೂಲ್‌ಗಳನ್ನು ಮಂಜೂರಾತಿ ಮಾಡುವ ಅಧಿಕಾರ ಆಕ್ಟ್‌ನಲ್ಲಿದೆ. ಆ ಅಧಿಕಾರವನ್ನು ಅವರು ಚಲಾಯಿಸಿ ಶಾಲೆಗಳನ್ನು ಕೊಟ್ಟಿದ್ದಾರೆ. 1989ರ ನಂತರ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಮ್ಮ ಕಡೆಯಿಂದ ಒಂದು ಸರ್ಕ್ಯುಲರ್ ಹೋಯಿತು, ನೀವು ಯಾವುದೇ ಶಾಲೆ ಮತ್ತು ಹೈಸ್ಕೂಲ್‌ಗಳನ್ನು ತೆರೆಯಲು ಪರ್ಮಿಷನ್ ಕೊಡಬೇಡಿಯೆಂದು. The circular cannot override the Act of rules. ಹೀಗಾಗಿ ಯಾವ ಒಂದು ಕಾನೂನು ಇದೆ ಆ ಕಾನೂನಿನಲ್ಲಿ ಮಂಜೂರಾತಿ ಕೊಡಲಿಕ್ಕೆ ಪ್ರಾವಿಜನ್ ಇದೆ ಆ ಪ್ರಾವಿಜನ್ ಪ್ರಕಾರ

ಕೊಟ್ಟಿದ್ದಾರೆ. ಅದನ್ನು ಗಣನೆಗೆ ತೆಗೆದುಕೊಂಡು ಮಾನ್ಯತೆಯನ್ನು ಕೊಡಬೇಕಾಗುತ್ತದೆ. The circular cannot override the Act of rules.

ಶ್ರೀ ಎಸ್.ಎಂ. ಯಾಹ್ಯ:- ಈ ಆಕ್ಟ್ ಇದೆ. The subtle point is, there is Karnataka Prohibition of entry of students to the unrecognised schools. ಅದು ಯಾವುದು ಇದೆ ಅದಕ್ಕೊಂದು ಅಮೆಂಡ್‌ಮೆಂಟ್ ತಂದಿದ್ದೇವೆ ಅಷ್ಟೆ. The Act is there. We have brought the Amendment.

ಶ್ರೀ ಆರ್.ವಿ. ದೇಶಪಾಂಡೆ:- ಈಗ 3 ಮತ್ತು 4 ಸೆಕ್ಷನ್‌ಗಳ ಪ್ರಕಾರ 1991-92ನೇ ಇಸವಿಯಲ್ಲಿ ಇನ್‌ಟೇಕ್ ಹೆಚ್ಚು ಮಾಡುವುದಕ್ಕೆ ಮತ್ತು ವಿತ್‌ಔಟ್ ಅಫಿಲಿಯೇಷನ್ ಯಾವ ಶಾಲಾ ಕಾಲೇಜುಗಳನ್ನು ನಡೆಸುವುದಕ್ಕೆ ಬರುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸೆಕ್ಷನ್ 5ರಲ್ಲಿ ಏನು ಮಾಡಿದ್ದೀರಿ? 1991-92ರಲ್ಲಿ ಕೆಲವು ಕಡೆ ಅಡ್ಮಿಷನ್ಸ್ ಹೆಚ್ಚಾಗಿವೆ, ಎಲ್ಲೆಲ್ಲಿ ಇನ್‌ಟೇಕ್ ಹೆಚ್ಚಾಗಿದೆ ಅದನ್ನು ರೆಗ್ಯುಲರೈಸ್ ಮಾಡಬೇಕು ಅವರಿಗೆ ಕಷ್ಟವಾಗಬಾರದೆಂದೂ ಜಿಲ್ಲಾಪರಿಷತ್‌ನವರು ಕಾಯಿದೆ ಬದ್ಧವಾಗಿ ಹೈಸ್ಕೂಲ್ ಮತ್ತು ಪ್ರೈಮರಿ, ಮಿಡ್ಲ್‌ಸ್ಕೂಲ್‌ಗಳನ್ನು ಮಂಜೂರು ಮಾಡಿದ್ದುದು ಇದೆ ಅವರು ತಮ್ಮ ಅಧಿಕಾರ ಚಲಾಯಿಸಿ ಮಾಡಿದ್ದಾರೆ.

ಶ್ರೀ ಎಸ್.ಎಂ. ಯಾಹ್ಯಾ:- ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ವಿಚಾರ ಕೆಲವು ಲೀಗಲ್ ಆಗಿ ಸೆಕ್ಷನ್ 4ರ ಪ್ರಕಾರ ಯಾರು ಸರಿ ಮಾಡಿದ್ದಾರೆ ಅವರು ಆಥರೈಸ್ಡ್ ಆಗುತ್ತಾರೆಯೇ ಹೊರತು ಅನ್‌ಆಥರೈಸ್ಡ್ ಆಗುವುದಿಲ್ಲ. But, they have to follow section 4. Absolutely, there would not be any difficulty who follow the rules of procedure. This is where you and I stand for. They have to follow section 4 and it has to be approved. The problem will arise for those schools who have not followed the section 4. There are many ailments in the Education system and these have to be cured.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷಿಣಿಯವರೆ, ನಮಗೆ ಮಾನ್ಯ ಮಂತ್ರಿಗಳಿಂದ ಕ್ಲಾರಿಫಿಕೇಶನ್ ಬೇಕಾಗಿತ್ತು. ಈಗಾಗಲೇ ಶಾಲೆಗಳು ಪ್ರಾರಂಭವಾಗಿ ಎರಡು ಮೂರು ವರ್ಷಗಳಾಗಿವೆ. ಜಿಲ್ಲಾಪರಿಷತ್‌ನವರು ಅನುಮತಿ ಕೊಟ್ಟ ಶಾಲೆಗಳಿಗೆ ಮಂಜೂರಾತಿಯನ್ನು ಮತ್ತು ಅಫಿಲಿಯೇಷನ್ ಸಹ ಕೊಟ್ಟಿಲ್ಲ. ಸೆಕ್ಷನ್ 4ರಲ್ಲಿ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಇದೆ. ಆದರೆ ಕಾನೂನು ಬದ್ಧವಾಗಿ ಜಿಲ್ಲಾಪರಿಷತ್‌ನವರು ತಮ್ಮ ಅಧಿಕಾರವನ್ನು ಚಲಾಯಿಸಿ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದಕ್ಕೆ ಸರ್ಕಾರದ ಮಂಜೂರಾತಿ ಬೇಕು. ಸರ್ಕಾರ ಸುತ್ತೋಲೆ ಬೇರೆ ಕಳುಹಿಸಿದೆ. ಆ ಶಾಲೆಗಳ ಗತಿಯೇನು? ಇಲ್ಲಿ ಅನ್‌ರೆಗ್ಯೈಸ್ಡ್ ಶಾಲೆಗಳು ಅನ್‌ಆಥರೈಸ್ಡ್ ಆಗುತ್ತವೆ. ತಾವು ದಯವಿಟ್ಟು ಕ್ಲಾರಿಫಿಕೇಶನ್ ಕೊಡಬೇಕು. ಇಡೀ ರಾಜ್ಯದಲ್ಲಿ ಈ ಸಮಸ್ಯೆಯಿದೆ, ಅದನ್ನು ಕೇಳುತ್ತಿದ್ದೇನೆ, ದಯವಿಟ್ಟು ಅವುಗಳಿಗೆ ಏನು ಮಾಡುತ್ತೀರಿ?

ಶ್ರೀ ಎಸ್.ಎಂ. ಯಾಹ್ಯಾ:- ಒಂದು ಕಡೆ ಕಾನೂನು. ಇನ್ನೊಂದು ಕಡೆ ಕಾನೂನಿಗೆ ವಿರುದ್ಧವಾಗಿ ಶಾಲೆಗಳು ಪ್ರಾರಂಭವಾಗಿವೆ. ನಾವು ನೀವು ಎಲ್ಲಾ ಸೇರಿ ಕಾನೂನು ಪ್ರಕಾರವಾಗಿ ನಡೆಯಬೇಕೆಂದು ಹೇಳುತ್ತೇವೆ, ಅದು ಎಲ್ಲರೂ ಒಪ್ಪಿಕೊಳ್ಳುವ ವಿಚಾರ. ಡೆಮಾಕ್ರಸಿಯಲ್ಲಿ ಅದು ಬೇಸಿಸ್. ಜಿಲ್ಲಾ ಪರಿಷತ್ ಕಾನೂನಿನ ಸೆಕ್ಷನ್ 14ರ ಪ್ರಕಾರ ಮಾಡಿದರೆ ಅವರಿಗೆ ಸಿಗುತ್ತದೆ. ಕಾನೂನಿನ ಹೊರಗೆ ಹೋಗಿ let us not sympathy for them, just because there are some students and some teachers are working in these institutions. Misplaced ಸಿಂಪಥಿ ಮಾಡಿಕೊಂಡು ಹೋಗಬೇಡಿ. ಕಾನೂನು ಪ್ರಕಾರ ನಾವು ನಡೆಯೋಣ. ಮಿಸ್‌ಪ್ಲೇಸ್ಡ್

ಸಿಂಪಥಿಯಿಂದ ಈ ಸಿಸ್ಟಮ್‌ಗೆ ಇನ್ನೂ ಹೆಚ್ಚಿನ ತೊಂದರೆಯಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿಯಾಗಿ ಕಾನೂನು ಪ್ರಕಾರ ಯಾರು ಮಾಡಿದ್ದಾರೆ ಅವರಿಗೆ ಏನೂ ಇಲ್ಲ. ಕಾನೂನು ಪ್ರಕಾರ ನಡೆಯಬೇಕೆಂದು ನಾವು ಇದ್ದೇವೆ. ಕಾನೂನು ಪ್ರಕಾರ ಮಾಡಿದರೆ ಯಾವ ಹೆದರಿಕೆಯೂ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸರ್ಕಾರದ ಸುತ್ತೋಲೆ ಇದೆ. ಮಾನ್ಯ ಬಸವಲಿಂಗಪ್ಪನವರು ಇದ್ದಾಗ ನಮಗೆ ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಸುತ್ತೋಲೆಯನ್ನು ಹೊರಡಿಸಿದ್ದರು. ಈ ಸಂದಿಗ್ಧತೆ ಇದೆ.

ಶ್ರೀ ಎಸ್.ಎಂ. ಯಾಹ್ಯಾ:- ಇದರ ಬಗ್ಗೆ ಬೇಕಾದರೆ ವಿಚಾರ ಮಾಡೋಣ. ಶೈಕ್ಷಣಿಕ ಪದ್ಧತಿಯಲ್ಲಿ ಹಲವಾರು ದೋಷಗಳು ಇವೆ. ಅವುಗಳನ್ನು ತೆಗೆಯಬೇಕು ಎಂದು ಹೇಳುವುದೇ ಸರ್ಕಾರದ ಉದ್ದೇಶ. ಅದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು, ಇದನ್ನು ಸ್ಟ್ರೀಮ್‌ಲೈನ್ ಮಾಡುವುದಕ್ಕೆ ನಾವು ತೆಗೆದುಕೊಂಡಿದ್ದೇವೆ. ಇಂಡಿಸಿಪ್ಲೈನ್ ಬಹಳ ಇದೆಯೆಂದು ಹೇಳಿದ್ದಾರೆ. ಇದು ಇರಬಾರದು. ಅದು ಎಲ್ಲಾ ಹಂತದಲ್ಲೂ ಇದೆ. ಅದೂ ಸಹ ಇರಬಾರದು ಎನ್ನುವುದು ಸರ್ಕಾರದ ಉದ್ದೇಶ. ಈ ದಿಸೆಯಲ್ಲಿಯೂ ಸಹ ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸ್ನೇಹಿತರಾದ ನಾಗರಾಜ್ ಅವರು ಸಹ ರಾಷ್ಟ್ರೀಕರಣ ಮಾಡಿ ಎಂದು ಕೇಳಿದ್ದಾರೆ. ಸಂವಿಧಾನದ ಪ್ರಕಾರ 14 ವರ್ಷದವರೆಗೆ ವಿದ್ಯೆ ಕೊಡುವುದು ಸರ್ಕಾರದ ಜವಾಬ್ದಾರಿ ಇದೆ. ಈ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಾ ಬಂದಿದೆ. ಈಗ ನಾವು ಬಹಳಷ್ಟು, 90 ಪರ್ಸೆಂಟ್‌ನಷ್ಟು ಆ ಕಡೆಗೆ ಹೋಗಿದ್ದೇವೆ. ಬಡವರ ಮಕ್ಕಳು ಬಂದು ಸ್ಕೂಲು ಸೇರುತ್ತಾರೆ, ನಂತರ ಬಿಟ್ಟು ಹೋಗುತ್ತಾರೆ. ಇದನ್ನು ಸಹ ತಡೆಗಟ್ಟುವಂಥ ಕೆಲಸ ಮಾಡಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಗುರುಗಳು ಇಲ್ಲದ ಶಾಲೆಗಳು ಆಗಿವೆ.

ಶ್ರೀ ಎಸ್.ಎಂ. ಯಾಹ್ಯಾ:- ನೀವು ಒಂದು ಸಲಿ ಎಲ್ಲಾ ಕೇಳಿಬಿಡಿ ಸ್ವಾಮಿ. ನೀವು ಮಧ್ಯದಲ್ಲಿ ಮಾತನಾಡುತ್ತಾ ಇದ್ದರೆ ನನಗೇನೂ ಇಲ್ಲ. ನನ್ನ ಥಾಟ್ಸ್ ಹಾಳಾಗುವುದಿಲ್ಲ. ಆದರೆ ಹೀಗಾದರೆ ಬಹಳ ಟೈಮ್ ತೆಗೆದುಕೊಳ್ಳುತ್ತದೆ. ನಾವು ನೀವು ಸೇರಿ ಈ ಪದ್ಧತಿಯನ್ನು ಸರಿಮಾಡಬೇಕಾಗಿದೆ. ಇದು ಎಷ್ಟು ಹಾಳಾಗಿದೆ ಎಂದರೆ ಹೇಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಸರಿಮಾಡಬೇಕು, ಸರಿಯಾದ ಶಿಸ್ತು ಇರಬೇಕೆಂದರೆ, ಇದನ್ನು ಬರೀ ಒಂದೆರಡು ದಿವಸಗಳಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಬಹಳಷ್ಟು political will is also necessary. ಆ ರೀತಿ ಹೇಳುವವರಲ್ಲಿ ನಾನೂ ಒಬ್ಬ. ಆ ಕಾರಣದಿಂದ ಈ ರಾಷ್ಟ್ರೀಕರಣ ಮಾಡುವುದಕ್ಕೆ ನಮ್ಮ ಹತ್ತಿರ ರಿಸೋರ್ಸಸ್ ಬಹಳ ಕಡಿಮೆ ಇದೆ. ಈ ವರ್ಷದ ಬಜೆಟ್‌ನಲ್ಲಿ ನೋಡಿ. 1150 ಕೋಟಿ ರೂಪಾಯಿಗಳನ್ನು ನಾವು ವಿದ್ಯೆಗಾಗಿ ಮಾತ್ರ ಖರ್ಚು ಮಾಡುತ್ತಿದ್ದೇವೆ. ಅದಕ್ಕಾಗಿ ಈ ಹಣವನ್ನು ಸರಿಯಾಗಿ ಉಪಯೋಗಿಸಬೇಕು, ಇದರಲ್ಲಿ ವೇಸ್ಟೇಜ್ ಬಹಳ ಆಗುತ್ತದೆ ಎಂದು ಸರ್ಕಾರ ಬಹಳಷ್ಟು ಎಕ್ಸರ‍್ಸೈಸ್ ಮಾಡಿದ್ದೇವೆ. ಯೂನಿವರ್ಸಿಟಿ ಎಜುಕೇಷನ್‌ಕ್ಕಿಂತಲೂ ಹೆಚ್ಚು ಹಣ ಪ್ರೈಮರಿ ಮತ್ತು ಹೈಸ್ಕೂಲ್ ಎಜುಕೇಶನ್‌ಗೆ ಹೋಗಬೇಕೆಂದು.ಹೇಳಿ ಕೆಲವು ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ಈ 1150 ಕೋಟಿ ರೂಪಾಯಿಗಳ ಬಜೆಟ್ ಏನಿದೆ, ಇದರಲ್ಲಿ ಹೈಯರ್ ಎಜುಕೇಶನ್ ರೇಷಿಯೋ 19 ಪರ್ಸೆಂಟ್ ಇದ್ದುದನ್ನು ಇಳಿಸಿ 15 ಪರ್ಸೆಂಟ್ ಮಾತ್ರ ಮಾಡಿದ್ದೇವೆ. ಈ ದಿಸೆಯಲ್ಲಿ ಬಹಳ ಒಳ್ಳೆಯ ಉದ್ದೇಶ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಈ Nationalisation of primary or secondary education. ದೊಡ್ಡದು ಮಾಡುವುದಕ್ಕೆ ಆಗುವುದಿಲ್ಲ. Resource constraint ಎಂದು ಒಂದು ಇದೆ. ಆದರೆ ಅದರ ಫಲಿತಾಂಶ ಚೆನ್ನಾಗಿ ಇಲ್ಲ. ಪ್ರೈವೇಟ್ ಸ್ಕೂಲ್ಸ್ ಒಂದು ಕಡೆ ಇದ್ದರೆ, ಇನ್ನೊಂದು ಕಡೆ ನಮ್ಮ ಗವರ್ನಮೆಂಟ್ ಸ್ಕೂಲ್ಸ್ ಅಥವಾ ಕಾರ್ಪೊರೇಷನ್ ಸ್ಕೂಲ್ಸ್ ಇವೆ. ಇವುಗಳನ್ನು ನೋಡಿದರೆ ಮಕ್ಕಳು ಅಲ್ಲಿಗೆ

ಹೋಗುವುದಿಲ್ಲ. ಅಲ್ಲಿ ಟೀಚರ್ಸ್ ಚೆನ್ನಾಗಿ ಇರುವುದಿಲ್ಲ, ಬಿಲ್ಡಿಂಗ್ಸ್ ಚೆನ್ನಾಗಿ ಇರುವುದಿಲ್ಲ. ಕಾರ್ಪೊರೇಷನ್ ಸ್ಕೂಲ್‌ಗಳನ್ನು ನಾನು ನೋಡಿದ್ದೇನೆ. ಎಷ್ಟು ಒಳ್ಳೆಯ ಬಿಲ್ಡಿಂಗ್ಸ್ ಇವೆ, ಆದರೆ ಯಾರೂ ತಂದೆತಾಯಿಗಳು ಅಲ್ಲಿ ಮಕ್ಕಳನ್ನು ಕಳುಹಿಸುತ್ತಿಲ್ಲ. ಇದನ್ನು ಸರ್ಕಾರ ತೆಗೆದುಕೊಂಡೆ, ಈಗ ಇರುವ ಸ್ಕೂಲ್‌ಗಳನ್ನು ರಾಷ್ಟ್ರೀಕರಣ ಮಾಡಿದರು ಅದೂ ಸಹ ಕೆ.ಎಸ್.ಆರ್.ಟಿ.ಸಿ. ಬಸಸ್ ಹಾಗೆ ಇದು ಆಗಬಹುದು ಎಂದು ನನಗೆ ಗಾಬರಿಯಾಗುವ ಪರಿಸ್ಥಿತಿಯಲ್ಲಿ ನಾನು ಇದ್ದೇನೆ.

1-30 P.M.

ಆ ಕಾರಣದಿಂದ ಇವೆರಡೂ ಒಟ್ಟಿಗೆ ಹೋಗಬೇಕು. ಅವರಲ್ಲೇ ಕಾಂಪಿಟೇಷನ್ ಆಗಲಿ, ಸರ್ಕಾರಿ ಸ್ಕೂಲುಗಳು, ಕಾಲೇಜುಗಳು, ಚೆನ್ನಾಗಿ ಇಂಪ್ರೂವ್ ಮಾಡಿ, ನೋಡಿಕೊಳ್ಳಬೇಕೆನ್ನುವ ಉದ್ದೇಶದಿಂದ ಇದ್ದೇವೆ. ರಾಷ್ಟ್ರೀಕರಣ ಬದಲಾವಣೆಯ ಕಾಲದಲ್ಲಿ ಬರುವುದಿಲ್ಲ, ಅದು ಸಾಧ್ಯವಿಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಕೌಜಲಗಿಯವರೂ ಸಹ, directions to the Universities ಕೊಡುತ್ತಾ, ಇದ್ದೀರಿ ಎಂದು ಹೇಳಿದರು. ಈ ರೀತಿ ಆಗುವುದಿಲ್ಲ. ಡೈರಕ್ಷನ್ ಕೊಟ್ಟು ರೆಕಗ್ನಿಷನ್ ಮಾಡುತ್ತಾ ಇಲ್ಲ. ಅದೂ ಖಂಡಿತ ಆಗಬಾರದು. ಲೀಗಲ್ ಪ್ರೋಸೆಸ್‌ನಲ್ಲಿ ಬಂದಮೇಲೆ, ಸರ್ಕಾರದವರು ಕೊಡಬೇಕೋ ಬಿಡಬೇಕೋ ಎಂದು ಹೇಳಿ ಮಾಡಬೇಕು. ಇನ್ನು ಮುಂದೆ ನಾವು ಆ ರೀತಿ ಮಾಡುವುದಿಲ್ಲ, ಅದು ಸರ್ಕಾರದ ನೀತಿ ಅಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸ್ನೇಹಿತರಾದ ಬೈರೇಗೌಡರು ಆತ್ಮ ವಂಚನೆ ವಿಷಯ ಹೇಳಿದರು, ಆತ್ಮ ವಂಚನೆ ಅಂದರೆ, ನಮ್ಮ ಆತ್ಮ ಬಹಳ ಸ್ಟ್ರಾಂಗ್ ಇದೆ. ಅದಕ್ಕೆ ಯಾರೂ ಹೆದರಿಸುವುದು ಬೇಡ. Strong will and strong conscious...

ಶ್ರೀ ಡಿ.ಬಿ. ಚಂದ್ರೇಗೌಡ:- ನೀವಿಬ್ಬರೂ ಸೇರಿ, ಎಲ್ಲರಿಗೂ ಆತ್ಮ ಇದೆಯೆಂದು ಹೇಳಿದಿರಲ್ಲ. ಅಷ್ಟಕ್ಕಾದರೂ ನಾವು ಸಂತೋಷಪಡಬೇಕು.

ಶ್ರೀ ಎಸ್.ಎಂ. ಯಾಹ್ಯಾ:- ನೀವು ತಪ್ಪು ಮಾಡಿದರೂ ಬರೆಯುತ್ತೇವೆ, ನಮ್ಮ ಪಾರ್ಟಿಯಲ್ಲಿ ತಪ್ಪಾದರೂ ಬರೆಯುತ್ತೇವೆ. ಇನ್ನೊಬ್ಬರು ತಪ್ಪು ಮಾಡಿದರೂ ಬರೆಯುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಸುಮ್ಮನೆ ಹಾವು ಇದೆ ಎಂದು ಎಲ್ಲರಿಗೂ ತೋರಿಸಿಕೊಂಡು, ಹಾವೇ ಇಲ್ಲದೆ, ಸುಮ್ಮನೆ ಬುರುಡೆ ಹೊಡೆದುಕೊಂಡು ಮನೆಗೆ ಹೋದರೆ ಆಗುತ್ತದೆಯೇ?

ಶ್ರೀ ಸಿ. ಬೈರೇಗೌಡ:- ಉಳುಕು ಇರುವವರಿಗೆ ಚಳುಕು ಆದರೆ, ನಾನು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ನನ್ನ ಹತ್ತಿರವೂ ಮಾಹಿತಿ ಇಟ್ಟಿದ್ದೇನೆ. ಅವರ ಹತ್ತಿರವೂ ಇದ್ದ ಮಾಹಿತಿಯನ್ನೂ ಇಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ:- ಇದು ಮಾಹಿತಿಯಲ್ಲ. ಸದನದಲ್ಲಿ ಕೊಟ್ಟಿರತಕ್ಕ ವರದಿ. ಇದರಲ್ಲಿ ಮಾಹಿತಿ ಏನಿದೆ. ಇದರಲ್ಲಿ ನನ್ನದೇನೂ ಇಲ್ಲ. ಇದು ಈ ಸದನದ ವರದಿ. ನನ್ನ ಹತ್ತಿರ ಇದೆಯೆಂದು ನಾನು ಹೇಳಿದ್ದೇನೆಯೇ. ಈ ವರದಿಯಲ್ಲಿದೆ ಎಂಬುದನ್ನು ಹೇಳಿದರೆ ಇದರ ಮೇಲೆ ಏನೋ ಬಹಳ ಸ್ಟ್ರಾಂಗ್ ಆಗಿದೆ ಎಂದು ಹೇಳುತ್ತಾ ಇದ್ದರು. ನೀವು ಸ್ಟ್ರಾಂಗ್ ಇದೆ ಎಂದು ಹೇಳಬೇಕಾಗಿದ್ದರೆ, ಇಲ್ಲಿ ಕೊಟ್ಟಿರತಕ್ಕ ವರದಿಯಲ್ಲಿ ಏನೇನು ಲೋಪದೋಷಗಳು ಇವೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಹೇಳಿದರೆ, ಆಗ ನೀವು ಸ್ಟ್ರಾಂಗ್ ಎನ್ನುವುದನ್ನು ಒಪ್ಪಿಕೊಳ್ಳೋಣ. ಅದಿಲ್ಲದೆ, ನಾವು ಸ್ಟ್ರಾಂಗ್ ಎಂದು ಹೇಳಿಕೊಂಡರೆ, ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಂಡರೆ, ನಾವೇನು ಹೇಳುವುದಕ್ಕಾಗುತ್ತದೆ. ತಟ್ಟಿಕೊಳ್ಳಿ ಎಂದು ಹೇಳಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಅದನ್ನೇ ಹೇಳುತ್ತಾ ಹೋದರೆ, ಹೇಗಾಗುತ್ತದೆ.

ಉಪಾಧ್ಯಕ್ಷರು:- ನೀವಿಬ್ಬರೂ ಕುಳಿತುಕೊಂಡು ಮಂತ್ರಿಗಳು ಉತ್ತರ ಮುಂದುವರಿಸುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್.ಎಂ. ಯಾಹ್ಯಾ:- ಮಾನ್ಯ ಬೈರೇಗೌಡರು ಬಹಳ ವರ್ಷದಿಂದ ರಾಜಕೀಯ ಜೀವನದಲ್ಲಿದ್ದವರು; ಈ ಅಸೆಂಬ್ಲಿಯಲ್ಲಿದ್ದವರು. ನಾನೇ ಆಗಲೀ, ನೀವೇ ಆಗಲಿ ಕಂಪ್ಲೇಂಟ್ ಮಾಡುತ್ತೇವೆ, ಅಲಿಗೇಷನ್ ಮಾಡಿಬಿಟ್ಟರೆ, ಅವರನ್ನು ಹ್ಯಾಂಗ್ ಮಾಡಬೇಕೆಂದು ಇದೆಯೇ? ಅದಕ್ಕಾಗಿ ಕಂಪ್ಲೇಂಟ್ ಸರಿ ಇರಬಹುದು, ಸರಿ ಇಲ್ಲದೇ ಇರಬಹುದು. ಆ ಕಡೆಯಿಂದಲೂ ಕೇಳಬೇಕು, ಈ ಕಡೆಯಿಂದಲೂ ಕೇಳಬೇಕು. ಆ ಕಡೆಯಿಂದ ಕೇಳಿ, ಅದೆಲ್ಲಾ ತಪ್ಪು ಎಂದು ಹೇಳಿದಮೇಲೆ, ಬರೆದವರು ಕ್ಷಮೆ ಕೇಳಿ, ಇದು ಸ್ವಲ್ಪ ತಪ್ಪು ಮಾಡಿದ್ದೇವೆಂದು ಹೇಳಬಹುದು. ಆದಕ್ಕೆಲ್ಲಾ ನೀವು ಇಷ್ಟು ಹೇಳಬಾರದು. ಅದಕ್ಕೇ ನಾನು ನಮಗೆಲ್ಲಾ ಸ್ಟ್ರಾಂಗ್ ಆತ್ಮ ಇದೆ ಎಂದು ಹೇಳಿದ್ದುದು. ಇನ್ನು ಹೆಚ್ಚು ಹೊತ್ತು ತೆಗೆದುಕೊಳ್ಳದೆ, ವಿದ್ಯಾಸಂಸ್ಥೆಗಳಲ್ಲಿ ನಾವು ಹೆಚ್ಚು ಹೆಚ್ಚು, Plannification of institutions, that unplanned... ಇನ್ನು ಮುಂದೆಯಾದರೂ ಈ ಸಂಸ್ಥೆಗಳು ಒಳ್ಳೆಯ ಪ್ಲಾನ್ ಲೆಕ್ಕದಲ್ಲಿ ಬರಬೇಕು. ಹೆಚ್ಚು ಹೆಚ್ಚು ವಿದ್ಯಾಸಂಸ್ಥೆಗಳಾಗಿ, ಎಲ್ಲಾ ಕಡೆ ತೊಂದರೆಗಳಾಗಿದೆ, ನನಗೆ ಏನು ತೋರುತ್ತದೆ, ನಾನು ನೋಡುತ್ತಾ ಇದ್ದೇನೆ. ಎಲ್ಲಾ ಕಡೆ ಸ್ಕೂಲು ಇರಬೇಕು, ಕಾಲೇಜು ಇರಬೇಕು. ಪೋಸ್ಟ್ ಗ್ರಾಜುಯೇಟ್ಸ್ ಸೆಂಟರ್ ಇರಬೇಕು, ಜನರಿಗೆ ಎಷ್ಟು ಆಸೆಯಾಗಿ ಬಿಟ್ಟಿದೆ ಎಂದರೆ, ನನ್ನ ಹತ್ತಿರ ಬರುತ್ತಾರೆ ನಮಗೆ ಪಿ.ಯು.ಸಿ. ಕೊಡಲೇಬೇಕೆಂದು ಹೇಳುತ್ತಾರೆ. ನಮ್ಮ ಗ್ರಾಮದಲ್ಲಿ ಒಂದು ಪಿ.ಯು.ಸಿ. ಇಲ್ಲ ಸಾರ್, ಪಿ.ಯು.ಸಿ. ಕೊಡಿ ಎಂದು ಕೇಳುತ್ತಾರೆ. ನಾವು 20-30 ಜನರಿಗೆ ಒಂದು ಕಾಲೇಜು ತೆಗೆಯುವುದಕ್ಕಾಗುವುದಿಲ್ಲವೆಂದರೆ, ಇದು ನಮಗೆ ಪ್ರೆಸ್ಟೀಜ್ ಇಷ್ಯೂ, ಆಗಲೇಬೇಕೆಂದು ಹೇಳುತ್ತಾರೆ. ಅದು ಒಂದು ರೀತಿಯಲ್ಲಿ ಒಳ್ಳೆಯದು. ತಮ್ಮ ಮಕ್ಕಳಿಗೆ ಕಲಿಸಬೇಕೆಂದು ಆಸೆ ಇದೆ. ಇನ್ನೊಂದು ರೀತಿಯಲ್ಲಿ, ಎಲ್ಲಾ ಕಡೆ ಇರತಕ್ಕ ವಿದ್ಯಾಸಂಸ್ಥೆಗಳೇ ಚೆನ್ನಾಗಿಲ್ಲ. ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ಲ್ಯಾಬೊರೇಟರೀಸ್ ಇಲ್ಲ, ಲೈಬ್ರರಿ ಇಲ್ಲ, ಪುನಃ ಕೊಡುತ್ತಾ ಹೋದರೆ, ಅದು ಸರ್ಕಾರದ ನೀತಿ ಅಲ್ಲ. ಆ ರೀತಿ ಕೊಡುತ್ತಾ ಹೋಗುವಂಥ ನೀತಿಗೆ ನಾನಂತೂ ಬಹಳ ತಡೆಗಟ್ಟುತ್ತಿದ್ದೇನೆ. ಇರುವುದನ್ನೇ ಬಹಳ ಚೆನ್ನಾಗಿ ಮಾಡಬೇಕೆಂದು ನನ್ನ ಆಸೆ ಇದೆ. ಮತ್ತೆ ಕೊಡುವಾಗಲೂ ಸಹ ಯೋಚನೆ ಮಾಡಿ, ಕೊಡಬೇಕೆಂದು ನಾವು ವಿಚಾರ ಮಾಡಿಕೊಂಡಿದ್ದೇವೆ. ಇವತ್ತು ಇರುವ ಕಾಲೇಜುಗಳು ಬಹಳಷ್ಟು ಹೆಚ್ಚಾಗಿವೆ. ಆ ಕಾರಣದಿಂದ, ನಾವು ಒಂದು ರೀತಿಯಲ್ಲಿ ವೊಕೇಷನಲ್ ಸಂಸ್ಥೆಗಳನ್ನು ಹೆಚ್ಚು ಕೊಡಬೇಕೆಂದು ಮಾಡಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ವೊಕೇಷನಲ್ ಸ್ಕೂಲ್ಸ್ ಮಾಡುವ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ಹೇಳಿದ್ದೇವೆ. ವೊಕೇಷನಲ್ ಪ್ಲಸ್‌ಟುನಲ್ಲಿ ಮಾತ್ರ ಇಡಬೇಡಿ, ಎಂದು ಹೇಳಿದ್ದೇವೆ. 400 ಕೋಟಿ ಹಣ ಅವರ ಹತ್ತಿರ ಇದೆ. ಅದನ್ನು ಕರ್ನಾಟಕ ಮತ್ತು ಗುಜರಾತ್‌ನವರು ಮಾತ್ರ ತೆಗೆದುಕೊಳ್ಳುವುದು. ಅದಕ್ಕಾಗಿ ಪ್ರಿವೊಕೇಷನಲ್ ಸ್ಕೂಲ್ ಮಾಡಿ, 8 ರಿಂದ 10ರವರೆಗೆ ಮಾಡಿ ಗ್ರಾಮಾಂತರ ಪ್ರದೇಶದವರಿಗೆ ಹೆಚ್ಚು ಸಹಾಯ ಮಾಡಬೇಕೆಂದು ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ಮೊನ್ನೆ ಹೋದಾಗ ತಿಳಿಸಿ ಬಂದಿದ್ದೇನೆ. ಈ ರೀತಿ ಪ್ಲಸ್‌ಟು ಲೆವೆಲ್‌ನಲ್ಲಿ ವೊಕೇಷನ್ ಎಜುಕೇಷನ್ ಆಗಲೀ ಅಥವಾ ಪ್ರೀ ವೊಕೇಷನಲ್ ಸ್ಕೂಲ್ಸ್ ಆಗಿ ಬಿಟ್ಟರೆ 8 ರಿಂದ 10ರವರೆಗೆ ಹೆಚ್ಚು ಎನ್‌ಕರೇಜ್‌ಮೆಂಟ್ ಕೊಡಬಹುದು, ಕರ್ನಾಟಕದಲ್ಲಿ ಈ ದಿಸೆಯಲ್ಲಿ ಕೆಲಸ ಮಾಡಿ ಗ್ರಾಮೀಣ ಜನರಿಗೆ ಹೆಚ್ಚು ಅನುಕೂಲತೆ ಮಾಡಿಕೊಡಬೇಕೆಂದು ಸರ್ಕಾರ ಉದ್ದೇಶಿಸಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅಟ್‌ಲೀಸ್ಟ್ ತಾವು ಒಂದು ಅಷ್ಯೂರೆನ್ಸ್ ಆದರೂ ಕೊಡಿರಿ. ಏಕೆಂದರೆ ಎಲ್ಲಾ ಕಾಲಕ್ಕೆ ಯಾಹ್ಯಾರವರೇ ಇರುವುದಿಲ್ಲ. ಕಾಲಕಾಲಕ್ಕೆ ಬದಲಾವಣೆಯಾಗುತ್ತದೆ.

But let it be on the record. You please say that Section 5 will be sparingly pressed into service, keeping in view of all other legal or the Acts or Rules framed there under would be seriously looked into before giving directions. ನೀವು ಅಧಿಕಾರ ಯಾರ ಕೈಗೋ ಕೊಟ್ಟು ಹೋಗಬೇಡಿ, ನೀವು ಎಷ್ಟು ದಿವಸ ಇರುತ್ತೀರೋ ಗೊತ್ತಿಲ್ಲ. ನೀವು ಇದ್ದಷ್ಟು ದಿನಗಳು ರಕ್ಷಣೆ ಕೊಡಬಹುದು. ಆದುದರಿಂದ ಸದನಕ್ಕೆ ಒಂದು ಅಷ್ಯೂರೆನ್ಸ್ ಕೊಟ್ಟರೆ ಒಳ್ಳೆಯದು.

ಶ್ರೀ ಎಸ್.ಎಂ. ಯಾಹ್ಯಾ:- ಅಷ್ಯೂರೆನ್ಸ್ ಮಾತ್ರ ಅಲ್ಲ, ನಿಮಗಿಂತ ಮುಂದೆ ಹೋಗಿ ಹೇಳುತ್ತೀವೆ. ಸೆಕ್ಷನ್ 5ನ್ನು ತಾವು ಲೀಗಲಿ ಯೋಚನೆ ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಸೆಕ್ಷನ್ 5ನ್ನು ಲೀಗಲಿ ಯೋಚನೆ ಮಾಡಿ ಬಿಟ್ಟರೆ ಇನ್ನು ಮುಂದೆ ಅದನ್ನು ಉಪಯೋಗಿಸಲಿಕ್ಕೇ ಬರುವುದಿಲ್ಲ. ಇನ್ನು ಮುಂದೆ ಸೆಕ್ಷನ್ 5ನ್ನು ಉಪಯೋಗಿಸಲಿಕ್ಕೇ ಆಗುವುದಿಲ್ಲ. This is what the law is. That is what the law meant for. Thank you Madam.

ಛೇರ್ಮನ್:- ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ.....

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಮಂತ್ರಿಗಳು ನಾನು ಸ್ವಲ್ಪ ಸಮಯದ ಹಿಂದೆ ವ್ಯಕ್ತ ಮಾಡಿದ ಅಭಿಪ್ರಾಯದ ಬಗ್ಗೆ ನೋಡುತ್ತೇನೆಂದು ಹೇಳಿದರು. ಅದು ನಮ್ಮ ನಡವಳಿಕೆಯಲ್ಲಿ ಇದೆ, ಮತ್ತು ಶಕ್‌ಧರ್ ಅಂಡ್ ಕಾಲ್‌ನಲ್ಲೂ ಇದೆ, ಯಾವ ಮಂತ್ರಿಯವರು ಬಿಲ್‌ನ್ನು ಇಂಟ್ರಡ್ಯೂಸ್ ಮಾಡುತ್ತಾರೋ, ಯಾರ ಹೆಸರಿನಲ್ಲಿ ಬರುತ್ತದೆಯೋ ಅವರೇ ಮಾಡಬೇಕು. On the day appointed for the introduction of the Bill, the Speaker calls the Minister Incharge to move for the Leave of the House to introduce the Bill. After the Speaker has put the question and the Motion is adopted, the Bill is introduced by the Minister. At the introduction stage, the Minister who has given Notice for Leave to introduce the bill, can alone introduce it unless he has previously written to Speaker to allow another Minister to move for Leave to introduce the Bill in this behalf. Since the Minister in whose name the Indian Tariff Bill 1969 was there, was not present in the House, and had not previously written to the Speaker, the Deputy Minister was not permitted to introduce the Bill on behalf of the Minister. ಇದು ಒಂದು, ತದನಂತರ, ನಮ್ಮ ನಿಯಮಗಳಲ್ಲಿ ಹೇಳುತ್ತಾರೆ ಇಲ್ಲಿ ಏನಾಗಿದೆ ಮಾನ್ಯ ಯಾಹ್ಯಾರವರು ಇಂಟ್ರಡ್ಯೂಸ್ ಮಾಡಿರಬಹುದು, ಇಂಟ್ರಡ್ಯೂಸ್ ಮಾಡಿದಮೇಲೆ ಬೇರೆ ಮಂತ್ರಿಗಳು ಅವರ ಪರವಾಗಿ They cannot move any Motion for consideration. ಏತಕ್ಕೆ ಅವಸರ ಮಾಡುತ್ತೀರಿ? No Motion that a Bill be taken into consideration or be passed shall be made by any Member other than the Member Incharge of the Bill who was Incharge of the Bill? ತಾವು ಮಾಡಿದ್ದೀರಿ ಇದನ್ನು, ಈಗ ಯಾರು ಮೂವ್ ಮಾಡಿದರು.

Sri C. BYREGOWDA:- Hon'ble Minister Sri Yahya did not move the Bill. It was moved by another Minister

ಶ್ರೀ ಎಸ್.ಎಂ. ಯಾಹ್ಯಾ:- ಉತ್ತರ ಕೊಡಬಾರದೆಂದು ಎಲ್ಲಿದೆ? ಉತ್ತರ ಕೊಡಬಾರದೆಂದು ನಾವು ಹೇಳಲಿಲ್ಲ, ಅದು ಆದಮೇಲೆ ಒಂದು ಪ್ರಾವಿಜನ್ ಇದೆ.

Sri H. EKANTHAIAH:- Hon'ble Minister may inenance afterwards. ಪ್ರಾವಿಜನ್ ಇದೆ. Provided if the Minister incharge of the Bill is unable to move for some reasons which the Speaker's considers adequate, move the next

Motion with regard to his Bill at any subsequent stage after introduction or he may authorise any member to move that particular motion with the approval of the Speaker. Further, in the explanation it says "Notwithstanding anything contained in the proviso, the member who introduced the Bill, shall continue to be the Member incharge. ಅದರ ಅರ್ಥ ಏನು? ಯಾವ ಮಂತ್ರಿಗಳು ಇದನ್ನು ಇಂಟರ್‌ಡ್ಯೂಸ್ ಮಾಡುತ್ತಾರೆ ಅವರು ವಿಶೇಷವಾದ ಕಾರಣ ಇದ್ದರೆ, ಸ್ಪೀಕರ್ ಅನುಮತಿಯನ್ನು ತೆಗೆದುಕೊಂಡು ಬೇರೆ ಒಬ್ಬ ಮಂತ್ರಿಗಳಿಗೆ ಕೊಡಬಹುದು. ಅವರು ಮೆಂಬರ್ ಇನ್‌ಚಾರ್ಜ್ of the bill ಆಗುತ್ತಾರೆ. ಅವರು ಕೊನೆಯವರೆಗೂ ಇರಬೇಕಾಗುತ್ತದೆ. ಅವರೇ ಉತ್ತರ ಹೇಳಬೇಕಾಗುತ್ತದೆ. ಮತ್ತು ಬೇರೆ ಮೋಷನ್ಸ್ ಇದ್ದರೆ ಅದನ್ನು ಅವರೇ ಹೇಳಬೇಕಾಗುತ್ತದೆ, ಸಭೆಯ ಮುಂದೆ ಮಂಡಿಸಬೇಕಾಗುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಾಂತ್ರಿಕವಾದಂಥ ಒಂದು ಅಂಶವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಆದರೆ ಇಂತಹ ವಿಷಯಗಳಲ್ಲಿ ಸಭಾಧ್ಯಕ್ಷರಿಗೆ ಸಾಕಷ್ಟು ಅಧಿಕಾರ ಇದೆ. ಸಭಾಧ್ಯಕ್ಷರು ಒಬ್ಬರಿಗೆ ಸಂಬಂಧಪಟ್ಟಂತಹ ಬಿಲ್‌ನ್ನು ಮತ್ತೊಬ್ಬರಿಗೆ ಮೂವ್ ಮಾಡುವುದಕ್ಕೆ ಅವಕಾಶ ಕೊಡಬಹುದು.....

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಕೇಳಲೇ ಇಲ್ಲ. If you take the Chair for granted.. can the Minister take the Chair for granted?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಸಭಾಧ್ಯಕ್ಷರು ಎರಡನೆಯ ಬಿಲ್ ತೆಗೆದುಕೊಂಡಾಗ ಅವರಿಗೆ ವಿದ್ಯಾಮಂತ್ರಿಗಳಿಗೆ ಸಂಬಂಧಪಟ್ಟ ಬಿಲ್ ನಾನು ಮೂವ್ ಮಾಡುತ್ತೇನೆಂದು ಹೇಳಿದಾಗ ಅವರು ತೀರ್ಮಾನ ಕೊಟ್ಟ ಮೇಲೆ ನಾನು ಮಾತನಾಡಿದ್ದುದು...

Sri D.B. CHANDRE GOWDA:- You have taken the Chair for granted. It is not on the record. Let us go by the record.

ಶ್ರೀ ಹೆಚ್. ಏಕಾಂತಯ್ಯ:- ತಪ್ಪಾಗಿದ್ದರೆ ಒಪ್ಪಿಕೊಳ್ಳಬೇಕು. Unless he has previously written to the Speaker to allow another Minister to move for leave to introduce the Bill in this behalf.

ಶ್ರೀ ಆರ್.ವಿ. ದೇಶಪಾಂಡೆ:- ಅವರು ಹೇಳಿದ್ದು ಏನೆಂದರೆ ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳೇ ಕಾನೂನು....

ಶ್ರೀ ಹೆಚ್. ಏಕಾಂತಯ್ಯ:- ಈಗ ತಪ್ಪಾಗಿದ್ದರೆ ಆ ತಪ್ಪನ್ನು ಸರಿಪಡಿಸಿಕೊಳ್ಳುತ್ತೇವೆಂದು ಹೇಳುವುದು ಬಿಟ್ಟು ಪುನಃ ಅದನ್ನೇ ಸಮರ್ಥನೆ ಮಾಡುತ್ತಾ ಹೋದರೆ ಇದಕ್ಕಿಂತ ದೊಡ್ಡ ತಪ್ಪು ಆಗುತ್ತದೆ. ಗೊತ್ತಿಲ್ಲದೆ ಹೋದರೆ ತಿದ್ದಿಕೊಳ್ಳುತ್ತೇವೆ, ಕಾನೂನು ಪ್ರಕಾರ ಇಲ್ಲದಿದ್ದರೆ ಮಾಡುತ್ತೇವೆ ಎನ್ನುವ ಮಾತು ಹೇಳದೆ ನಮಗೆಲ್ಲಾ ಗೊತ್ತು ನಾವು ಮಾಡಿದ್ದೇ ಸರಿ ಎಂದು ಹೇಳುವುದಾದರೆ ಇದಕ್ಕೆ ನಾವೇನು ಹೇಳಬೇಕು ಇದು ಅವಿವೇಕದ ಪರಮಾವಧಿ ಎಂದು ಹೇಳಬೇಕು. ತಪ್ಪನ್ನು ಒಪ್ಪಿಕೊಳ್ಳತಕ್ಕಂಥ ಸೌಜನ್ಯ ಇಲ್ಲ ನಿಮಗೆ.

Sri C. BYREGOWDA:- It is not a Question Hour. You are piloting the Bill.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಾವು ಬಹಳ ವರ್ಷಗಳಿಂದ ಈ ಸಭೆಯ ಸದಸ್ಯರಾಗಿದ್ದೀರಿ. ಒಬ್ಬ ಮಂತ್ರಿಗಳಿಗೆ ಸಂಬಂಧಪಟ್ಟ ವಿಧೇಯಕವನ್ನು ಬೇರೆ ಮಂತ್ರಿಗಳು ಈ

ಸಭೆಯ ಮುಂದೆ ಇಟ್ಟು ಒಪ್ಪಿಗೆ ತೆಗೆದುಕೊಂಡಿದ್ದಾರೆ. ಅದರಂತೆ ನಾನು ವಿದ್ಯಾಮಂತ್ರಿಗಳ ಪರವಾಗಿ ಅಧ್ಯಕ್ಷರ ಒಪ್ಪಿಗೆ ಪಡೆದು ಈ ಸಭೆಯ ಮುಂದೆ ಇಟ್ಟಿದ್ದೇನೆ. ಮತ್ತೆ ತಾಂತ್ರಿಕವಾಗಿ ದೋಷ ಕೊನೆಯ ಶಬ್ಧ ಏನಿದೆ ಅದನ್ನು ನಾನೇ ಹೇಳಬೇಕು ಹೇಳುತ್ತೇನೆ.

Sri H. EKANTHAIAH:- I am speaking only with the permission of the Speaker, written permission. ಲೋಪ ಆಗಿದೆ, ಲೋಪ ಆಗಿದೆ ಎಂದು ಹೇಳಿ ಚರ್ಚೆ ಏತಕ್ಕೆ? ಇಲ್ಲಿ ನಾವ್ಯಾರೂ ವೈಯಕ್ತಿಕ ಗುಣಾವಗುಣಗಳನ್ನು ಪರಿಶೀಲನೆ ಮಾಡುವುದಕ್ಕೆ ಬಂದಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ:- ಕಾನೂನಿನಲ್ಲಿ ಸೂಕ್ತವಾಗಿದೆ. ಇದರಲ್ಲಿ ಯಾವ ಮಂತ್ರಿಗಳೂ ಉತ್ತರ ಕೊಡಬಾರದು ಎಂದು ಏನೂ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ:- ನಾವು ಹಾಗೆಂದು ಎಲ್ಲಿ ಹೇಳಿದ್ದೇವೆ. ಉತ್ತರ ಕೊಡಬಾರದು ಎಂದು ಹೇಳಿದ್ದೇವೆಯೇ?

ಶ್ರೀ ಎಸ್.ಎಂ. ಯಾಹ್ಯಾ:- ಇವತ್ತು ತಾವು ಏತಕ್ಕೆ ಇಷ್ಟು ಗಾಬರಿ ಮಾಡಿಕೊಳ್ಳುತ್ತಿದ್ದೀರಿ. ನೀವು ಗಾಬರಿ ಪಡಬೇಕಾಗಿಲ್ಲ. ನಾವು ಮಾತನಾಡಬಾರದು ಎಂದು ಹೇಳುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ:- ಹಾಗೇನಾದರೂ ಭಾವನೆ ಇದ್ದರೆ ಅದು ತಮಗೆ ಇದೆ ನಾವು ಉತ್ತರ ಕೊಡುವುದಕ್ಕೆ ಆಕ್ಷೇಪಣೆ ಮಾಡಿಲ್ಲ. ತಾವು ಸರಿಯಾಗಿ ಗಮನಿಸಿಲ್ಲವೆಂದು ಕಾಣುತ್ತದೆ. Every Minister has a right to intervene. ಬೇರೆ ಸದಸ್ಯರು ಯಾವ ರೀತಿ ಇಂಟರ್‌ವಿನ್ ಮಾಡಲಿಕ್ಕೆ ಅಧಿಕಾರ ಇದೆ ಅವರು ಮಂತ್ರಿಗಳಾದವರು ತಾವು ಮಿನಿಸ್ಟರ್ ಇನ್‌ಚಾರ್ಜ್ ಅಲ್ಲದಿದ್ದರೂ ಸಹ ಉತ್ತರ ಹೇಳುವುದಕ್ಕೆ ಅಧಿಕಾರ ಇರಬಹುದು. ನಾನು ತಮಗೆ ಏನು ಹೇಳುತ್ತೇನೆಂದರೆ You cannot move any Motion for passing, for consideration.

Sri S.M. YAHYA:- What is there? That's what I say. We will accept your views. ಅಷ್ಟು ಗಾಬರಿ ಪಟ್ಟುಕೊಳ್ಳುವಂಥಾದ್ದು ಏನಿದೆ? ಆಕಾಶ ಕಳಚಿ ಬೀಳುವ ಹಾಗೆ ಮಾತನಾಡುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ:- ಆಕಾಶ ಕಳಚಿ ಬೀಳುವುದು ಏನೂ ಇಲ್ಲ. ಆಕ್ಷೇಪಣೆ ಮಾಡಿದಾಗ ತಾವು ಕೊಡುವಂತಹ ಉತ್ತರದ ಧಾಟಿ ಏನಿದೆ ಅದನ್ನು ಹೇಳುವುದು.....

ಶ್ರೀ ಎಸ್.ಎಂ. ಯಾಹ್ಯಾ:- ನಿಮಗೆ satisfy ಮಾಡುವುದಕ್ಕೆ ಒಪ್ಪಿಕ್ಕೊಬೇಕೇ ಹೊರತು ನೀವು ಇದನ್ನೆಲ್ಲಾ ನೋಡಿ ಬಿಟ್ಟರೆ ನೀವು ಯಾವ ರೀತಿಯಲ್ಲೂ ಆಕ್ಷೇಪಣೆ ಮಾಡುವುದಕ್ಕೆ ಅಧಿಕಾರ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಬಹಳಷ್ಟು ಜನರು ಸೇರಿ ಅಡಿಗೆ ಹಾಳು ಮಾಡುವುದು ಬೇಡ. ಏನು ತಾಂತ್ರಿಕ ತಪ್ಪುಗಳನ್ನು ಆಯಾಯ ಕಾಲಕ್ಕೆ ಏನು ಬರುತ್ತವೆ ಅವುಗಳನ್ನು ಸರಿಪಡಿಸಿಕೊಂಡು ಹೋಗುವುದಾದರೆ ಸದನದ ನಿಯಮಗಳನ್ನು ಪಾಲಿಸಿದರೆ ಆಗ ಗೌರವ ಬರುತ್ತದೆ. ಆ ದೃಷ್ಟಿಯಿಂದ ಅಭ್ಯಾಸ ಮಾಡಿದಂತಹ ಸದಸ್ಯರು ನಿಮ್ಮ ಗಮನಕ್ಕೆ ತಂದರೆ, ತಪ್ಪಾಗಿದ್ದರೆ ತಪ್ಪಾಗಿದೆ ಎಂದು ಹೇಳಿ. ಇದರಲ್ಲಿ ಯಾರ ಪ್ರಿಸ್ಟೇಜ್ ಇನ್ವಾಲ್ವ್ ಆಗಿಲ್ಲ. Both of you are senior members of this House, senior Ministers, most experienced, if there is a small mistake, please have it rectified.

Sri S.M. YAHYA:- Let us be very frank. Who has moved the Bill, will you please tell me? I have moved the Bill about 4-5 days back. Now it is

for consideration and passing. It is so clear who has moved the Bill. It is I who have moved the Bill. That is the first stage. We have passed the first stage of the Bill. We are in the second stage of the Bill and the third stage is for moving to pass the Bill. These are the three stages of a Bill. The word used here is, who has moved the Bill? I have moved the Bill as a Minister Incharge....

Sri D.B. CHANDRE GOWDA:- You have moved the Bill but the Bill was introduced to the House today by the Parliamentary Minister.

Sri S.M. YAHYA:- Not introduced. You are wrong. I have introduced the Bill. Technically you have no quest.

Sri D.B. CHANDRE GOWDA:- Hon'ble Minister is mistaking us. Today after the introduction, for the consideration of the Bill, as you have rightly pointed out, that we are at the second or third stage for consideration of the Bill, it was moved by the Parilamentary Affairs Minister...

ಶ್ರೀ ಹೆಚ್. ಏಕಾಂತಯ್ಯ:- ಇನ್ನೊಂದು ಸಾರಿ ಹೇಳುತ್ತೇನೆ. ಅವರು ಮೊದಲು ಹೇಳಿದ್ದುದು ನಿಜ. ಏನು ತಾವು ಮೊದಲು ಇಂಟ್ರಡ್ಯೂಸ್ ಮಾಡಲಿಕ್ಕೆ, you have moved 2ನೇ ಸ್ಟೇಜ್‌ನಲ್ಲಿ ಯಾರು ಸ್ವಾಮಿ ಇಂಟ್ರಡ್ಯೂಸ್ ಮಾಡಿದರು? for consideration and passing. Today when the Motion is moved...

Sri S.M. YAHYA:- No point at all.

Sri H. EKANTHAIAH:- I cannot understand you. He knows this Bill is for consideration and Passing today. If we are at fault, we will abide by the ruling of the Chair. I am not bothered about you.

ವೈಸ್ ಛೇರ್ಮನ್:- ಅವರು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಹೆಚ್. ಏಕಾಂತಯ್ಯ:- ನಾವು ಹೇಳುವುದು ಪೂರಾ ಆಗಬೇಕು. ಅವರು ಹೇಳುವುದನ್ನು ನಾನು ಕೇಳಿದ್ದೇನೆ. ನಾವು ಹೇಳುತ್ತಿರುವುದು- In the second stage how he has introduced the Bill. He should move the motion for consideration and passing. That the motion is moved by Sri Harnahalli Ramaswamy who is the Hon'ble Minister of Law and Parliamentary Affairs and who is not a Member Incharge of the Bill. ಇದಕ್ಕೆಲ್ಲಾ ಪ್ರತಿಷ್ಠೆ ಮೇಲೆ ನಿಂತುಕೊಂಡರೆ ಹೇಗೆ? ಅದಾದ ಮೇಲೆ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ನಾನು ಹೇಳಿದೆ. ಇದು ಮಧ್ಯ ಮಧ್ಯದಲ್ಲಿ ಬದಲಾಯಿಸುತ್ತಿದೆ. ಇದು ನಿಯಮಗಳ ವಿರುದ್ಧ ಎನ್ನುವ ಮಾತನ್ನು ಹೇಳಿದೆ. ಅದಕ್ಕೋಸ್ಕರ ನಿಯಮ 85ನ್ನು ತಮ್ಮ ಮುಂದೆ ಇಟ್ಟೆ. ಅವರು ಏನು ಹೇಳುತ್ತಾರೆ? No motion that the Bill be taken into consideration or be passed. ಇವತ್ತಿನ ದಿವಸ ಯಾವ ಮೋಷನ್ ಅನ್ನು ರಾಮಸ್ವಾಮಿಯವರು ಮೂವ್ ಮಾಡಿದ್ದಾರೆ? shall be moved by any member other than the member Incharge of the Bill. So the Member Incharge of the Bill is Sri S.M. Yahya, Education Minister. ಇದ್ದದ್ದನ್ನು ಹೇಳಿದರೆ, ಇಲ್ಲಾ ಇಲ್ಲಾ ನಾವು ಹೇಳಿದ್ದೇ ಸರಿಯಾಗಿದೆ ಎಂದರೆ, ಹೇಳಿಕೊಂಡು ಹೋಗಿ. ನಮ್ಮದೇನೂ ತಕರಾರಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಮಿತ್ರರು ಹೇಳಿದಂಥ ವಿಷಯಕ್ಕೆ ಈ ವಿಧೇಯಕವನ್ನು ಮಂಡಿಸಿದವರು ವಿದ್ಯಾ ಮಂತ್ರಿಗಳು. He is Incharge of the Bill.. provided that if the Member Incharge of the Bill..

ಶ್ರೀ ವಾಟಾಳ್ ನಾಗರಾಜ್:- ನೀವು ಇಬ್ಬರು ಏನು ಹೇಳುತ್ತಿದ್ದೀರಿ ಎಂದು ಯಾರಿಗೂ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಆದಾದಮೇಲೆ ಕನ್ಸಿಡರೇಷನ್ ಅಂಡ್ ಪಾಸಿಂಗ್‌ಗೆ ಏನು ಮೂವ್ ಮಾಡಿದ್ದಾರೆ, provided that when the Member Incharge of the Bill is unable for reasons which the Speaker considers adequate, which he has considered adequate to move the next Motion in regard to the Bill at any stage.

Sri D.B. CHANDRE GOWDA:- Taking that portion for granted. Please don't drag the Chair to controversy.

Sri HARNALLI RAMASWAMY:- We have to assume it. We have to presume it. I have asked the Speaker's permission to permit me to move the next motion which he has permitted. ನೀವು ಪ್ರೆಸ್ಯೂಂ ಮಾಡಿ ಹೇಳಬೇಡಿ. ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ.

ಶ್ರೀ ಹೆಚ್. ಏಕಾಂತಯ್ಯ:- ಥೇರ್ ಪರ್ಮಿಷನ್ ತೆಗೆದುಕೊಂಡು ಮೂವ್ ಮಾಡಿದ್ದೇವೆ ಎಂದ ಮೇಲೆ I apologize, Otherwise....

ಛೇರ್ಮನ್:- ಪ್ರಸ್ತಾವ ಏನೆಂದರೆ, ''1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತ ಆಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 13 ರವರೆಗೆ

ಛೇರ್ಮನ್:- ''ಖಂಡ 2 ರಿಂದ 13 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ:-

ಛೇರ್ಮನ್:- ಪ್ರಸ್ತಾವ ಏನೆಂದರೆ, ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):- 1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ''1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟನೆ (1)

ಉಪಾಧ್ಯಕ್ಷಿಣಿಯವರು:- ''ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ, ವಿಧಾನ ಸಭೆಯಿಂದ ಅಂಗೀಕಾರವಾದ 1992ನೇ ಸಾಲಿನ ಕರ್ನಾಟಕ ವಕ್ಫ್ ಮಂಡಳಿಯ ವಿಶೇಷಾಧಿಕಾರಿಯು ನೇಮಕ, ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ: 12-1-1993ರಲ್ಲಿ ಅನುಮೋದಿಸಲಾಗಿತ್ತೆಂದು ತಿಳಿಸುತ್ತೇನೆ.''

ಪ್ರಕಟಣೆ (2)

ಉಪಾಧ್ಯಕ್ಷಿಣಿಯವರು:- ''ದಿನಾಂಕ: 2-4-1992 ರಂದು ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡ, ಶ್ರೀ ವಾಟಾಳ್ ನಾಗರಾಜ್, ಶ್ರೀ ಬೈರೇಗೌಡ ಹಾಗೂ ಶ್ರೀ ನಂಜುಂಡಸ್ವಾಮಿಯವರು ಹಕ್ಕುಚ್ಯುತಿ ಸೂಚನೆಯನ್ನು ನೀಡಿ, ಶ್ರೀ ರಾಮಲಿಂಗರೆಡ್ಡಿಯವರ ಪ್ರಶ್ನೆಗೆ ಉಚ್ಚನ್ಯಾಯಾಲಯವು ಸದನಕ್ಕೆ ಮಾಹಿತಿ ನೀಡಲು ನಿರಾಕರಿಸಿದೆ ಎಂದು ಸತ್ಯಕ್ಕೆ ದೂರವಾದ ಉತ್ತರವನ್ನು ಇತ್ತು ಕಾನೂನು ಮಂತ್ರಿಗಳು ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ, ಎಂದು ಅಪಾದಿಸಿದ ವಿಷಯವನ್ನು ಮಾನ್ಯ ಸಭಾಧ್ಯಕ್ಷರವರು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗಾಗಿ ದಿನಾಂಕ: 8-12-1992 ರಂದು ಒಪ್ಪಿಸಿರುತ್ತಾರೆ.

ಈಗ ಸದನವು ಮುಂದೂಡಲ್ಪಟ್ಟು ಮಧ್ಯಾಹ್ನ 3-00 ಗಂಟೆಗೆ ಪುನಃ ಸೇರುತ್ತದೆ.

(ಸದನವು 1-52ಕ್ಕೆ ಕಲಾಪವನ್ನು ಮುಂದೂಡಿ, ಮಧ್ಯಾಹ್ನ 3-00 ಗಂಟೆಗೆ ಸೇರಲು ನಿರ್ಧರಿಸಿತು.)

(ಸಭೆಯು 3-12 ನಿಮಿಷಕ್ಕೆ ಪ್ರಾರಂಭವಾಯಿತು)

(ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿದ್ದರು.)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ನಮ್ಮ ಸಭೆ ಒಂದು ದಿವಸ ಮುಂದುವರಿದಿದೆ. ಇನ್ನು ಎಷ್ಟು ದಿವಸ ಮುಂದುವರಿಯುತ್ತದೆಯೋ ನಮಗೆ ಗೊತ್ತಿಲ್ಲ, ಮತ್ತೊಂದು ತಾವು ಸಲಹಾ ಸಮಿತಿ ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದೀರಿ ಅದನ್ನು ಕರೆಯುತ್ತೀರೋ ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಇಲ್ಲಿ 100 ದಿವಸ ಸಭೆ